**ಸಂಪುಟ:** 06 **ಸಂಚಿಕೆ:** 44 **ಪುಟಗಳು:** 08 **ಮಂಗಳವಾರ** 28 ಏಪ್ರಿಲ್ 2026

www.udayavahini.in | epaper.udayavahini.in | Udaya vahini news | Udaya vahini news | Udayavahini news youtube | udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 | +91 8035841833 | ₹5

**ಮುಂಜಾನೆ ಮಾತು**

ಭೂಮಿ ನಮ್ಮ ಬಯಕೆಗಳನ್ನು ಪೂರೈಸಬಲ್ಲುದು. ಆದರೆ ದುರಾಸೆಗಳನ್ನಲ್ಲ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಎಚ್.ವಿಶ್ವನಾಥ್‌ಗೆ ಅರಳುಮರಳು, ಕ್ಷಮಿಸಿಬಿಡೋಣ: ಸಚಿವ

• **ಉದಯವಾಹಿನಿ, ಶಿವಮೊಗ್ಗ**

ಪರೀಕ್ಷಾ ಕೇಂದ್ರದಲ್ಲಿ ವೆಬ್‌ಕ್ಯಾಸ್ಟಿಂಗ್ ಸ್ಥಗಿತಗೊಳಿಸಿ ಕಾಪಿ ಹೊಡೆಸುವ ಮೂಲಕ ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಈ ಬಾರಿ ದಾಖಲೆಯ ಫಲಿತಾಂಶ ಪಡೆಯಲಾಗಿದೆ ಎಂದು ಮಾಜಿ ಸಚಿವ ಎಚ್.ವಿಶ್ವನಾಥ್ ಆರೋಪಿಸಿದ್ದಾರೆ. ಅವರ ಈ ಹೇಳಿಕೆ ನಾಡಿನ ಮಕ್ಕಳು ಶೈಕ್ಷಣಿಕ ಸಾಧನೆ ಒಪ್ಪಲಾಗದೇ ಮಾಡಿರುವ ಉದ್ದೇಶಪೂರ್ವಕ ಅಪಮಾನ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಕಿಡಿಕಾರಿದರು. 'ಎಚ್.ವಿಶ್ವನಾಥ್ ಅವರಿಗೆ ವಯಸ್ಸಾಗಿದೆ. ಅವರು ಮಕ್ಕಳು ಇದ್ದಂತೆ. ಹೀಗಾಗಿ ಏನೇನೊ ಬಡಬಡಿಸುತ್ತಾರೆ. ಅದನ್ನು ಅರಳುಮರಳು ಎಂದು ಹೇಳಲಾಗುವುದಿಲ್ಲ. ಅವರ ವಯಸ್ಸಿಗೆ ಬೆಲೆ ಕೊಟ್ಟು ಕ್ಷಮಿಸಿ ಬಿಡೋಣ' ಎಂದು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಇಡೀ ದೇಶದಲ್ಲಿ ಮೊದಲ ಬಾರಿಗೆ ಪರೀಕ್ಷಾ ಕೊಠಡಿಯಲ್ಲಿ ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆ ಜಾರಿಗೊಳಿಸಿದ್ದೇ ಮಧು ಬಂಗಾರಪ್ಪ. ಹಾಗಿದ್ದ ಮೇಲೆ ಕ್ಯಾಮೆರಾ ಹಾಕಿ ಕಾಪಿ ಹೊಡೆಸಲು ಸಾಧ್ಯವೇ? ಎಂದು ಪ್ರಶ್ನಿಸಿದ ಅವರು, 'ಪರೀಕ್ಷಾ ಕೊಠಡಿಯಲ್ಲಿ ವೆಬ್‌ಕ್ಯಾಸ್ಟಿಂಗ್ ಕರ್ನಾಟಕದ್ದು ಮಾದರಿ ವ್ಯವಸ್ಥೆ. ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಕೂಡ ನಮ್ಮ ಬಳಿಯೇ ವರದಿ ಪಡೆದು ವೆಬ್‌ಕ್ಯಾಸ್ಟಿಂಗ್ ಹಾಗೂ ಎರಡು ಬಾರಿ ಪರೀಕ್ಷೆ ನಡೆಸುವ ವ್ಯವಸ್ಥೆ ಅಳವಡಿಸಿಕೊಂಡಿದೆ' ಎಂದು ಹೇಳಿದರು.

## ಪಕ್ಷದಲ್ಲಿರುವ ಹಿರಿಯರಿಗೂ ಸಚಿವ ಸ್ಥಾನ ಸಿಗಲಿ: ದಿನೇಶ ಗುಂಡೂರಾವ್

• **ಉದಯವಾಹಿನಿ, ಬೆಂಗಳೂರು**

'ಪಕ್ಷದಲ್ಲಿರುವ ತಾವೊಬ್ಬರೇ ಕಾಯಂ ಸಚಿವರಾಗಿರಬೇಕು ಎಂದೇನಿಲ್ಲ. ಸಾಕಷ್ಟು ಮಂದಿ ಹಿರಿಯರು, ಅನುಭವಿಗಳೂ ಇದ್ದಾರೆ. ಅವರಿಗೂ ಅವಕಾಶ ದೊರೆಯಬೇಕು' ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಅಭಿಪ್ರಾಯಪಟ್ಟರು. 'ರಾಜ್ಯದಲ್ಲಿ ಸರ್ಕಾರ ಬಂದು ಈಗಾಗಲೇ ಮೂರು ವರ್ಷ ಸಮೀಪಿಸುತ್ತಿದೆ. ಸಚಿವ ಸಂಪುಟ ಪುನರ್ ರಚನೆಯಾಗಿ, ಉಳಿದವರಿಗೂ ಅಲ್ಲಿ ಅವಕಾಶ ಸಿಗಬೇಕು. ಈ ಕುರಿತು ಪಕ್ಷದ ವರಿಷ್ಠರು ಮತ್ತು ಮುಖ್ಯಮಂತ್ರಿ ಸೂಕ್ತ ತೀರ್ಮಾನ ಕೈಗೊಳ್ಳುವ ನಿರೀಕ್ಷೆಯಿದ್ದು, ಶೀಘ್ರದಲ್ಲಿಯೇ ಜಾರಿಗೆಯೂ ಬರಲಿದೆ' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು. 'ಸಚಿವ ಸ್ಥಾನ ಕಳೆದುಕೊಳ್ಳುವವರು ಅವಮಾನ ಎಂದು ಭಾವಿಸಬಾರದು. ಎಲ್ಲರಿಗೂ ಅವಕಾಶ ಸಿಗಬೇಕು ಎನ್ನುವ ದೊಡ್ಡತನ ಇಟ್ಟುಕೊಂಡಿರಬೇಕು. ನಾವೆಲ್ಲ ಪಕ್ಷದ ಶಿಸ್ತಿನ ಸಿಪಾಯಿಗಳಾಗಿದ್ದು, ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನವನ್ನು ಮುಕ್ತವಾಗಿ ಒಪ್ಪಿಕೊಳ್ಳುತ್ತೇವೆ' ಎಂದರು.

'ಅಧಿಕಾರ ಹಂಚಿಕೆ ತೀರ್ಮಾನ ಹೈಕಮಾಂಡ್ ಅಂಗಳದಲ್ಲಿದ್ದು, ಅವರು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ. ಆ ತೀರ್ಮಾನಕ್ಕೆ ಡಿಸಿಎಂ, ಸಚಿವರು ಹಾಗೂ ಶಾಸಕರು ಬದ್ಧರಾಗಿರುತ್ತಾರೆ. ಬೇರೆ ಯಾರೂ ಮಧ್ಯಪ್ರವೇಶಿಸುವ ಅಗತ್ಯವಿಲ್ಲ' ಎಂದು ಹೇಳಿದರು.

## ರಾಯಚೂರು ಯುವಕನ ಮದುವೆ ಆಹ್ವಾನ ಪತ್ರಿಕೆಗೆ ಸ್ಪಂದಿಸಿದ ಪ್ರಧಾನಿ

• **ಉದಯವಾಹಿನಿ, ರಾಯಚೂರು**

ಸಿಂಧನೂರು ತಾಲ್ಲೂಕಿನ ಕಾನಿಹಾಳ ಗ್ರಾಮದ ರಾಜೇಶ್ ನಾಯಕ ಕಳಿಸಿದ್ದ ಮದುವೆ ಆಹ್ವಾನಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸ್ಪಂದಿಸಿರುವ ಪತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ರಾಜೇಶ್ ನಾಯಕ ಅವರ ಮದುವೆ ಸವಿತಾ ಅವರೊಂದಿಗೆ ಏ. 13 ರಂದು ನಿಗದಿಯಾಗಿತ್ತು. ಮದುವೆ ಸಂಭ್ರಮಕ್ಕೆ ಪ್ರಧಾನಿ ಮೋದಿಯವರನ್ನೂ ಆಹ್ವಾನಿಸಬೇಕೆಂದು ಬಯಸಿದ ರಾಜೇಶ್, ದೆಹಲಿಯ ಪ್ರಧಾನಿ ಕಚೇರಿಗೆ ಮದುವೆಯ ಆಹ್ವಾನ ಪತ್ರಿಕೆಯನ್ನು ಕಳುಹಿಸಿದ್ದರು. ಈ ಆಹ್ವಾನವನ್ನು ಸ್ವೀಕರಿಸಿದ ಪ್ರಧಾನಿ ಮೋದಿ ಅವರು ಪತ್ರದ ಮೂಲಕ ನವಜೋಡಿಗೆ ಶುಭ ಹಾರೈಸಿದ್ದಾರೆ.

ರಾಜೇಶ್ ನಾಯಕ್ ಅವರಿಗೆ ಪತ್ರ ಬರೆದಿರುವ ಪ್ರಧಾನಿ ಮೋದಿ, 'ನಿಮ್ಮ ವಿವಾಹ ಮಹೋತ್ಸವಕ್ಕೆ ನನ್ನನ್ನು ಆಹ್ವಾನಿಸಿದ್ದಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳು. ಜೀವನದ ಈ ಶುಭ ಸಂದರ್ಭಕ್ಕೆ ಕಾಲಿಡುತ್ತಿರುವ ನಿಮಗೆ ಮತ್ತು ಸವಿತಾ ಅವರಿಗೆ ಸುಂದರ ಭವಿಷ್ಯಕ್ಕಾಗಿ ಶುಭಾಶೀರ್ವಾದಗಳು' ಎಂದು ಹಾರೈಸಿದ್ದಾರೆ.

## ಲೆಕ್ಕಪತ್ರ ಮಂಡನೆಗೆ ವಚನಾನಂದ ಸ್ವಾಮೀಜಿ ಪರ ಭಕ್ತರ ವಿರೋಧ

• **ಉದಯವಾಹಿನಿ, ಬೆಂಗಳೂರು**

ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಲ್ಲಿ ಟ್ರಸ್ಟ್‌ನ ಲೆಕ್ಕಪತ್ರ ಮಂಡನೆಗೆ ವಚನಾನಂದ ಸ್ವಾಮೀಜಿ ಪರ ಭಕ್ತರು ವಿರೋಧ ವ್ಯಕ್ತಪಡಿಸಿದರು. ಇದರಿಂದ ಲೆಕ್ಕಪತ್ರ ಮಂಡನೆ ಸಭೆ ಗೊಂದಲದ ಗೂಡಾಯಿತು. ಮಠದ ಆವರಣದಲ್ಲಿ ಏರ್ಪಡಿಸಿದ ಸಮಾರಂಭಕ್ಕೆ ಭಕ್ತರು ಆಗಮಿಸಿದ್ದಾರೆ. ಸಭೆ ಆರಂಭವಾದ ಕೆಲ ಹೊತ್ತಿನ ಬಳಿಕ ಸಭೆಯಿಂದ ಹೊರ ನಡೆದ ಕೆಲವರು ಲೆಕ್ಕಪತ್ರ ಮಂಡನೆ ಸಭೆಗೆ ಬಹಿಷ್ಕಾರ ಹಾಕಿದರು. ಬಳಿಕ ಸ್ವಾಮೀಜಿ ಪರ ಗುಂಪು ವೇದಿಕೆ ಸಮೀಪ ಧಾವಿಸಿ ಟ್ರಸ್ಟ್ ಸದಸ್ಯ ಎಚ್.ಎಸ್.ನಾಗರಾಜ್ ಅವರ ಭಾಷಣಕ್ಕೆ ಅಡ್ಡಿಪಡಿಸಿತು. ಇದರಿಂದ ಸಭೆಯಲ್ಲಿ ಕೋಲಾಹಲ ಸೃಷ್ಟಿ ಆಯಿತು. ವೇದಿಕೆಗೆ ನುಗ್ಗುವ ಪ್ರಯತ್ನವನ್ನು ಪೊಲೀಸರು ವಿಫಲಗೊಳಿಸಿದರು. ಟ್ರಸ್ಟ್ ಪರವಾಗಿರುವವರು 'ಹರ ಹರ ಮಹಾದೇವ', 'ಜೈ ಪಂಚಮಸಾಲಿ' ಘೋಷಣೆ ಮೊಳಗಿಸಿದರು.

ಕಳೆದ ವರ್ಷವೇ ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ಅಂತಿಮಗೊಂಡಿದ್ದರೂ, ಭಾರತ ಮತ್ತು ನ್ಯೂಜಿಲೆಂಡ್ ಸೋಮವಾರ ಮಹತ್ವದ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿವೆ. ಈ ಮೂಲಕ ಉಭಯ ರಾಷ್ಟ್ರಗಳು ದ್ವಿಮುಖ ವಾಣಿಜ್ಯ ಮತ್ತು ಹೂಡಿಕೆಗಳನ್ನು ಹೆಚ್ಚಿಸುವ ಗುರಿಯನ್ನು ಅಧಿಕೃತಗೊಳಿಸಿವೆ.ದೆಹಲಿಯ ಭಾರತ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತದ ಪರವಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮತ್ತು ನ್ಯೂಜಿಲೆಂಡ್‌ನ ವ್ಯಾಪಾರ ಮತ್ತು ಹೂಡಿಕೆ ಸಚಿವ ಟಾಡ್ ಮೆಕ್‌ಕ್ಲೇ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಅಂಕಿತ ಬಿತ್ತು.

**ಭಾರತೀಯ ರಫ್ತುಗಳಿಗೆ ಸುಂಕ-ಮುಕ್ತ ಪ್ರವೇಶ**


# ಭಾರತ, ನ್ಯೂಜಿಲೆಂಡ್ ಮಿತ್ರಬಂಧ ಮುಕ್ತ ವ್ಯಾಪಾರ ಒಪ್ಪಂದ

**ಹೂಡಿಕೆ ಮತ್ತು ಬಂಡವಾಳ ಹರಿವು ಶೂನ್ಯ ಸುಂಕ, ಉದ್ಯೋಗಾವಕಾಶ, ಕೃಷಿ ರಕ್ಷಣೆ**

• **ಉದಯವಾಹಿನಿ, ಬೆಂಗಳೂರು**

**ವ್ಯಾಪಾರ ಬೆಳವಣಿಗೆಯ ಗುರಿ**



ಕಳೆದ 15 ವರ್ಷಗಳಿಂದ ಹಿಂದೆಯೇ ಅಂದರೆ 2010ರಲ್ಲಿ ಎರಡೂ ರಾಷ್ಟ್ರಗಳ ನಡುವೆ ವ್ಯಾಪಾರ ಒಪ್ಪಂದ ಮಾತುಕತೆಗಳು ಆರಂಭವಾಗಿದ್ದವು. ಆದರೆ, 2015ರಲ್ಲಿ ಸ್ಥಗಿತಗೊಂಡಿದ್ದವು. ಬಳಿಕ 2025ರ ಪುನಾರಂಭಗೊಂಡು ಕಳೆದ ವರ್ಷ ಡಿಸೆಂಬರ್‌ನಲ್ಲಿ ಒಪ್ಪಂದವನ್ನು ಅಂತಿಮಗೊಳಿಸಲಾಗಿತ್ತು. ಇದು ಭಾರತ ಇನ್ನೊಂದು ರಾಷ್ಟ್ರದೊಂದಿಗೆ ಮಾಡಿಕೊಂಡ ವೇಗದ ಮುಕ್ತ ವ್ಯಾಪಾರ ಒಪ್ಪಂದ ಇದಾಗಿದೆ.

**20 ಬಿಲಿಯನ್ ಡಾಲರ್ ಹೂಡಿಕೆ ನಿರೀಕ್ಷೆ:** ಈ ವ್ಯಾಪಾರ ಒಪ್ಪಂದದಿಂದ ನ್ಯೂಜಿಲೆಂಡ್‌ಗೆ ರಫ್ತಾಗುವ ಭಾರತದ ಶೇಕಡಾ 100ರಷ್ಟು ಸರಕುಗಳಿಗೆ (8,284 ಉತ್ಪನ್ನಗಳು) ಮೊದಲ ದಿನದಿಂದಲೇ ಶೂನ್ಯ ಸುಂಕದ ಸೌಲಭ್ಯ ಪಡೆಯಲಿವೆ. ಅದೇ ರೀತಿ, ನ್ಯೂಜಿಲ್ಯಾಂಡ್‌ನಿಂದ ಬರುವ ಸುಮಾರು 95 ಪ್ರತಿಶತ ಸರಕುಗಳ ಮೇಲಿನ ಸುಂಕವನ್ನು ಭಾರತವು ಹಂತ ಹಂತವಾಗಿ ಕಡಿಮೆ ಮಾಡಲಿವೆ ಅಥವಾ ರದ್ದು ಮಾಡಲಿದೆ. 15 ವರ್ಷಗಳಿಗೆ ಅನ್ವಯವಾಗುವಂತೆ ನಡೆದ ಎಫ್‌ಟಿಎಯಿಂದ ಭಾರತದಲ್ಲಿ 20 ಬಿಲಿಯನ್ ಅಮೆರಿಕನ್ ಡಾಲರ್ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಹರಿದುಬರುವ ನಿರೀಕ್ಷೆ ಇದೆ. ಭಾರತದ ವೃತ್ತಿಪರರಿಗೆ ವರ್ಷಕ್ಕೆ 5 ಸಾವಿರ ತಾತ್ಕಾಲಿಕ ಉದ್ಯೋಗ ನೀಡಲು ನ್ಯೂಜಿಲ್ಯಾಂಡ್ ಒಪ್ಪಿಕೊಂಡಿದೆ. ಸುಂಕ ರಹಿತ ರಫ್ತಿನಿಂದಾಗಿ ಭಾರತದ ಜವಳಿ, ಉಡುಪು, ಚರ್ಮ, ಪಾದರಕ್ಷೆಗಳು, ರತ್ನಗಂಬಳಿಗಳು ಮತ್ತು ಆಭರಣಗಳು, ಇಂಜಿನಿಯರಿಂಗ್ ಸರಕುಗಳು ಮತ್ತು ಸಂಸ್ಕರಿಸಿದ ಆಹಾರಗಳು ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ದರವನ್ನು ಪಡೆಯಲಿವೆ. ಈ ಮೂಲಕ ಎಂಎಸ್‌ಎಂಇಗಳು ಮತ್ತು ಉದ್ಯೋಗ ಕ್ಷೇತ್ರ, ಗಮನಾರ್ಹ ಲಾಭ ಪಡೆಯುವ ನಿರೀಕ್ಷೆಯೂ ಇದೆ.

**1** ಭಾರತ ಮತ್ತು ನ್ಯೂಜಿಲೆಂಡ್ ನಡುವೆ ಮುಕ್ತ ವ್ಯಾಪಾರ ಒಪ್ಪಂದ ಜಾರಿ.

**2** ಎಫ್‌ಟಿಎ ತಿಳುವಳಿಕೆ ಪತ್ರಕ್ಕೆ ಸಹಿಹಾಕಿದ ಭಾರತ-ನ್ಯೂಜಿಲೆಂಡ್ ವಾಣಿಜ್ಯ ಸಚಿವರು.

**3** ನ್ಯೂಜಿಲೆಂಡ್ ಜೊತೆಗಿನ ವ್ಯಾಪಾರ ಒಪ್ಪಂದದಿಂದ ಭಾರತಕ್ಕೇನು ಲಾಭ?

**ಭಾರತಕ್ಕೆ ಆಗುವ ಲಾಭವೇನು:** ಭಾರತದಿಂದ ನ್ಯೂಜಿಲ್ಯಾಂಡ್‌ಗೆ ಜವಳಿ, ಸಿದ್ಧ ಉಡುಪುಗಳು, ಔಷಧ, ಚಿನ್ನಾಭರಣಗಳು, ಚರ್ಮದ ಉತ್ಪನ್ನಗಳು ಸೇರಿದಂತೆ ಹಲವು ಉತ್ಪನ್ನಗಳು ದೊಡ್ಡ ಮಟ್ಟದಲ್ಲಿ ರಫ್ತಾಗಲಿವೆ. ಇದರಿಂದ ಈ ಕ್ಷೇತ್ರಗಳ ರೈತರು, ವ್ಯಾಪಾರಿಗಳು ಲಾಭದಾಯಕ ವ್ಯಾಪಾರ ನಡೆಸಬಹುದು ಎಂದು ಹೇಳಲಾಗಿದೆ.

**ಜವಳಿ, ಸಿದ್ಧ ಉಡುಪುಗಳು:** ನ್ಯೂಜಿಲ್ಯಾಂಡ್‌ಗೆ ಭಾರತದಿಂದ ರಫ್ತಾಗುವ ಬಟ್ಟೆಗಳು ಮತ್ತು ಗೃಹೋಪಯೋಗಿ ಜವಳಿಗಳ ಮೇಲೆ ಈಗ ಶೂನ್ಯ ಸುಂಕ ಇರುವುದರಿಂದ ಭಾರತೀಯ ರಫ್ತುದಾರರು ದೊಡ್ಡ ಮಾರುಕಟ್ಟೆಯನ್ನು ಪಡೆಯಲಿದ್ದಾರೆ.ರತ್ನಗಳು, ಆಭರಣಗಳು: ಭಾರತೀಯ ಚಿನ್ನ ಮತ್ತು ಬೆಳ್ಳಿಯ ಆಭರಣಗಳಿಗೆ ಅಲ್ಲಿ ಹೆಚ್ಚಿನ ಬೇಡಿಕೆಯಿದ್ದು, ಸುಂಕ ರದ್ದತಿಯಿಂದ ಇವುಗಳ ಬೆಲೆ ಸ್ಪರ್ಧಾತ್ಮಕವಾಗಿರಲಿದೆ.

ಅದರಂತೆ, ಔಷಧೀಯ ಉತ್ಪನ್ನಗಳಾದ ಜೆನೆರಿಕ್ ಮೆಡಿಸಿನ್‌ಗಳು ಮತ್ತು ಲಸಿಕೆಗಳಿಗೆ ನ್ಯೂಜಿಲ್ಯಾಂಡ್‌ನಲ್ಲಿ ಮಾರುಕಟ್ಟೆ ಸಿಗಲಿದೆ.

ಯಂತ್ರೋಪಕರಣಗಳು, ಆಟೋ ಬಿಡಿಭಾಗಗಳು ಮತ್ತುಕಬ್ಬಿಣದ ಉತ್ಪನ್ನಗಳು ಈ ಒಪ್ಪಂದದಿಂದ ಲಾಭ ಪಡೆಯಲಿವೆ. ಇದಕ್ಕೂ ಮೊದಲು ಈ ಸರಕುಗಳ ಮೇಲೆ ಶೇ.10ರಷ್ಟು ಸುಂಕ ವಿಧಿಸಲಾಗುತ್ತಿತ್ತು.

**ನ್ಯೂಜಿಲ್ಯಾಂಡಿಗೂ ಲಾಭ:** ದೊಡ್ಡ ಬಳಕೆದಾರರಿರುವ ಭಾರತದ ಜೊತೆಗಿನ ವ್ಯಾಪಾರ ಒಪ್ಪಂದವು ನ್ಯೂಜಿಲ್ಯಾಂಡ್‌ಗೂ ಲಾಭ ತಂದು ಕೊಡಲಿದೆ. ಅದರ ಉಣ್ಣೆ, ಮರ ಮತ್ತು ಮರದ ಉತ್ಪನ್ನಗಳು, ಹಣ್ಣುಗಳು, ಕಲ್ಲಿದ್ದಲು ಮತ್ತು ಖನಿಜಗಳು, ಪ್ರೀಮಿಯಂ ಗುಣಮಟ್ಟದ ವೈನ್ ಭಾರತದ ಮಾರುಕಟ್ಟೆ ಪ್ರವೇಶಿಸುವ ಮೂಲಕ ಉತ್ತಮ ದರ ಪಡೆದುಕೊಳ್ಳಲಿವೆ ಭಾರತ ಯಾವುದೇ ದೇಶದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡರೂ ಕೆಲ ಕ್ಷೇತ್ರಗಳನ್ನು ಇದರಿಂದ ಹೊರಗಿಟ್ಟಿದೆ.

ಅದರಂತೆ ನ್ಯೂಜಿಲ್ಯಾಂಡ್ ಜೊತೆಗಿನ ಒಪ್ಪಂದದಲ್ಲೂ ಡೈರಿ (ಹಾಲು, ಕೆನೆ, ಮೊಸರು, ಚೀಸ್ ಇತ್ಯಾದಿ), ಪ್ರಾಣಿ ಉತ್ಪನ್ನಗಳು (ಕುರಿ ಮಾಂಸ ಹೊರತುಪಡಿಸಿ), ಕೃಷಿ ಉತ್ಪನ್ನಗಳು (ಈರುಳ್ಳಿ, ಕಡಲೆ, ಬಟಾಣಿ, ಜೋಳ, ಬಾದಾಮಿ), ಸಕ್ಕರೆ, ಕೃತಕ ಜೇನುತುಪ್ಪ, ತರಕಾರಿ, ಪ್ರಾಣಿ ಅಥವಾ ಸೂಕ್ಷ್ಮಜೀವಿಯ ಕೊಬ್ಬುಗಳು ಮತ್ತು ಎಣ್ಣೆಗಳು, ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳು, ತಾಮ್ರ ಮತ್ತು ಅದರ ವಸ್ತುಗಳು, ಅಲ್ಯೂಮಿನಿಯಂ ಮತ್ತು ಅದರ ವಸ್ತುಗಳನ್ನು ಒಪ್ಪಂದದಲ್ಲಿ ಸೇರಿಸಿಕೊಂಡಿಲ್ಲ.




**15 ವರ್ಷದ ಬಳಿಕ ಸಹಿ**

**ಎರಡೂ ದೇಶಗಳು 2010ರಲ್ಲಿ ಒಪ್ಪಂದಕ್ಕಾಗಿ ಮಾತುಕತೆಗಳನ್ನು ಪ್ರಾರಂಭಿಸಿದ್ದವು. ಒಂಬತ್ತು ಸುತ್ತಿನ ಮಾತುಕತೆಗಳ ನಂತರ 2015 ರಲ್ಲಿ ಅದು ಸ್ಥಗಿತಗೊಂಡಿತು. ನಂತರ ಮಾತುಕತೆಗಳು ಮಾರ್ಚ್ 2025 ರಲ್ಲಿ ಪುನರಾರಂಭಗೊಂಡು ಕಳೆದ ವರ್ಷ ಡಿಸೆಂಬರ್‌ನಲ್ಲಿ ಒಪ್ಪಂದವನ್ನು ಅಂತಿಮಗೊಳಿಸಲಾಗಿತ್ತು. ಇದು ಭಾರತದ ಅತ್ಯಂತ ವೇಗವಾಗಿ ಮುಕ್ತಾಯಗೊಂಡ ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿ ಒಂದಾಗಿದೆ.**

### ನ್ಯೂಜಿಲೆಂಡ್ ರೈತರಿಗೆ ಅನ್ಯಾಯ



**ದಶಕಗಳ ಸುದೀರ್ಘ ಮಾತುಕತೆ ವಿರಾಮದ ನಂತರ, ಮಾರ್ಚ್ 2025ರಲ್ಲಿ ವ್ಯಾಪಾರ ಒಪ್ಪಂದಕ್ಕಾಗಿ ಭಾರತ ಮತ್ತು ನ್ಯೂಜಿಲೆಂಡ್ ನಡುವೆ ಮಾತುಕತೆಗಳು ಪುನರಾರಂಭಗೊಂಡಿದ್ದವು. ಡಿಸೆಂಬರ್ 2025ರ ಹೊತ್ತಿಗೆ ಮಾತುಕತೆಗಳು ಮುಕ್ತಾಯಗೊಂಡು, ಒಪ್ಪಂದವನ್ನೂ ಮಾಡಿಕೊಳ್ಳಲಾಗಿತ್ತು. ಇದು ಭಾರತದ ಅತ್ಯಂತ ವೇಗದ ಎಫ್‌ಟಿಎ ಪ್ರಕ್ರಿಯೆಗಳಲ್ಲಿ ಒಂದಾಗಿದೆ. ಈ ಒಪ್ಪಂದವು ನ್ಯೂಜಿಲೆಂಡ್‌ನ ಪ್ರಮುಖ ಪಕ್ಷಗಳಿಂದಲೂ ಭಾರೀ ಬೆಂಬಲವನ್ನು ಗಳಿಸಿದೆ. ಆದರೆ ನ್ಯೂಜಿಲೆಂಡ್ ವಿದೇಶಾಂಗ ಸಚಿವ ವಿನ್‌ಸ್ಟನ್ ಪೀಟರ್ಸ್ ಭಾರತ-ನ್ಯೂಜಿಲೆಂಡ್ ವ್ಯಾಪಾರ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಒಪ್ಪಂದ ಡೈರಿ ವಲಯದಲ್ಲಿ ನ್ಯೂಜಿಲೆಂಡ್ ರೈತರಿಗೆ ಅನ್ಯಾಯ ಮಾಡುತ್ತದೆ. ಹಾಗೆಯೇ ದೇಶದಲ್ಲಿ ವಲಸೆ ಬಿಕ್ಕಟ್ಟನ್ನು ಸೃಷ್ಟಿಸುತ್ತದೆ ಎಂದು ವಿನಸ್ಟನ್ ಪೀಟರ್ಸ್ ಅಭಿಪ್ರಾಯಪಟ್ಟಿದ್ದಾರೆ. ಆದರೆ ನ್ಯೂಜಿಲೆಂಡ್‌ನ ಬಹುತೇಕ ರಾಜಕೀಯ ಪಕ್ಷಗಳು, ಭಾರತದೊಂದಿಗಿನ ವ್ಯಾಪಾರ ಒಪ್ಪಂದವನ್ನು ಬೆಂಬಲಿಸುವುದಾಗಿ ಸ್ಪಷ್ಟಪಡಿಸಿವೆ.**

### ಉದ್ಯೋಗ ಮತ್ತು ವೃತ್ತಿಪರರ ಸಂಚಾರ

**ಯುವಜನತೆಗೆ ಮತ್ತು ವೃತ್ತಿಪರರಿಗೆ ಇದು ದೊಡ್ಡ ಅವಕಾಶಗಳನ್ನು ಸೃಷ್ಟಿಸಿದೆ. ಪ್ರತಿ ವರ್ಷ 5,000 ಭಾರತೀಯ ವೃತ್ತಿಪರರಿಗೆ (ಉದಾಗೆ: ಸಾಫ್ಟ್‌ವೇರ್ ಇಂಜಿನಿಯರ್‌ಗಳು, ವೈದ್ಯರು, ನರ್ಸ್‌ಗಳು ಮತ್ತು ಅಕೌಂಟೆಂಟ್‌ಗಳು) ನ್ಯೂಜಿಲೆಂಡ್‌ನಲ್ಲಿ ಕೆಲಸ ಮಾಡಲು ಆದ್ಯತೆ ನೀಡಲಾಗುತ್ತದೆ. ಐಟಿ ಮತ್ತು ವ್ಯಾಪಾರ ಪ್ರಕ್ರಿಯೆಗಳ ಹೊರಗುತ್ತಿಗೆ (BPO) ವಲಯದಲ್ಲಿ ಸಾವಿರಾರು ಹೊಸ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಉನ್ನತ ವ್ಯಾಸಂಗಕ್ಕಾಗಿ ನ್ಯೂಜಿಲೆಂಡ್‌ಗೆ ಹೋಗುವ ಭಾರತೀಯ ವಿದ್ಯಾರ್ಥಿಗಳಿಗೆ ಓದಿನ ನಂತರ ಅಲ್ಲಿ ಕೆಲಸ ಮಾಡಲು (Post-study work visa) ಹೆಚ್ಚಿನ ಸರಳೀಕೃತ ನಿಯಮಗಳನ್ನು ಜಾರಿಗೆ ತರಲಾಗಿದೆ.**



## ಮಂಗಳೂರು ಕುಕ್ಕರ್ ಬ್ಲಾಸ್ಟ್: ಅಪರಾಧಿ ಮೊಹಮ್ಮದ್ ಶಾರಿಕ್‌ಗೆ 10 ವರ್ಷ ಜೈಲು

• **ಉದಯವಾಹಿನಿ, ಬೆಂಗಳೂರು**

ಮಂಗಳೂರು ಕುಕ್ಕರ್ ಬ್ಲಾಸ್ಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಅಪರಾಧಿ ಮೊಹಮ್ಮದ್ ಶಾರಿಕ್‌ಗೆ 10 ವರ್ಷ ಜೈಲು ಶಿಕ್ಷೆ ವಿಧಿಸಿದ ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯ ತೀರ್ಪು ಪ್ರಕಟಿಸಿದೆ. 2022 ನವೆಂಬರ್ 19 ರಂದು ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣಾ ವ್ಯಾಪ್ತಿಯ ನಾಗುರಿ ಎಂಬಲ್ಲಿ ಚಲಿಸುತ್ತಿದ್ದ ಆಟೋ ರಿಕ್ಷಾದಲ್ಲಿ ಇದ್ದಕ್ಕಿದ್ದಂತೆ ಸ್ಫೋಟ ಸಂಭವಿಸಿತು. ಆಟೋದಲ್ಲಿ ಪ್ರಯಾಣಿಸುತ್ತಿದ್ದ ಮೊಹಮ್ಮದ್ ಶಾರಿಕ್ ಬ್ಯಾಗ್‌ನಲ್ಲಿದ್ದ ಪ್ರೆಶರ್ ಕುಕ್ಕರ್‌ನಲ್ಲಿ ಬಾಂಬ್ ಇತ್ತು. ಸ್ಫೋಟದ ತೀವ್ರತೆಗೆ ಆಟೋಗೆ ಬೆಂಕಿ ಹೊತ್ತಿಕೊಂಡಿತ್ತು. ದೇವಸ್ಥಾನ ಅಥವಾ ಸ್ಥಳೀಯ ಪ್ರಮುಖ ಪ್ರವಾಸಿ ಸ್ಥಳದಲ್ಲಿ ಸ್ಫೋಟಕ್ಕೆ ಯೋಜನೆ ಹಾಕಿಕೊಳ್ಳಲಾಗಿತ್ತು.



**ಶೇಕಡಾ 40 ರಷ್ಟು ಗಾಯ:** ಈ ಸ್ಫೋಟದ ರೂವಾರಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಮೂಲದ ಮೊಹಮ್ಮದ್ ಶಾರಿಕ್. ಈತ 'ಪ್ರೇಮ್‌ರಾಜ್' ಎಂಬ ಹಿಂದೂ ಹೆಸರಿನಲ್ಲಿ ನಕಲಿ ಆಧಾರ್ ಕಾರ್ಡ್ ಮಾಡಿಸಿಕೊಂಡು ಮೈಸೂರಿನಲ್ಲಿ ಬಾಡಿಗೆ ಮನೆಯಲ್ಲಿದ್ದ. ಅಲ್ಲಿಯೇ ಆನ್‌ಲೈನ್ ಮೂಲಕ ಕುಕ್ಕರ್ ಬಾಂಬ್ ತಯಾರಿಸಲು ತರಬೇತಿ ಪಡೆದು, ಕಚ್ಚಾ ವಸ್ತುಗಳನ್ನು ಸಂಗ್ರಹಿಸಿದ್ದ. ಸ್ಫೋಟದಲ್ಲಿ ಈತನಿಗೂ ಶೇ.40 ರಷ್ಟು ಸುಟ್ಟ ಗಾಯಗಳಾಗಿದ್ದವು.

**3 ವರ್ಷದ ಬಳಿಕ ತೀರ್ಪು**

**ಆರಂಭದಲ್ಲಿ ಮಂಗಳೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದರು. ಘಟನೆಯ ಹಿಂದಿರುವ ಭಯೋತ್ಪಾದನಾ ಜಾಲದ ಗಂಭೀರತೆಯನ್ನು ಅರಿತು, ನಂತರ ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವಹಿಸಲಾಯಿತು. ಶಾರಿಕ್‌ನ ಹಿಂದಿದ್ದ ನೆಟ್‌ವರ್ಕ್, ಆತನಿಗೆ ಹಣಕಾಸು ನೆರವು ನೀಡಿದವರು ಮತ್ತು ಸಹಕರಿಸಿದ ಇತರ ಕೆಲವು ಆರೋಪಿಗಳನ್ನು (ಮಾಜ್ ಮುನೀರ್, ಸೈಯದ್ ಯಾಸಿನ್ ಮುಂತಾದವರು) ಎನ್‌ಐಎ ಬಂಧಿಸಿ ವಿಚಾರಣೆ ನಡೆಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಬೃಹತ್ ಚಾರ್ಜ್‌ಶೀಟ್ (ದೋಷಾರೋಪ ಪಟ್ಟಿ) ಕೂಡ ಸಲ್ಲಿಸಿತ್ತು. ಬೆಂಗಳೂರು ಎನ್‌ಐಎ ನ್ಯಾಯಾಲಯ ಸದ್ಯ 16 ಮಂದಿಯನ್ನು ಆರೋಪಿಗಳು ಎಂದು ತೀರ್ಪು ನೀಡಿದೆ.**

## ಡಿಕೆಶಿ ಸಹೋದರರ ದೆಹಲಿ ಭೇಟಿ ಬೆನ್ನಲ್ಲೇ ಸಿದ್ದು ಬಣ ಅಲರ್ಟ್

**■ ರಾಜ್ಯ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆ ■ ಸತೀಶ್, ಎಚ್ ಸಿ ಮಹದೇವಪ್ಪ ದೆಹಲಿಗೆ ಪ್ರವಾಸ**

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರ ತೀವ್ರ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಡಿಕೆ ಸುರೇಶ್ ಅವರು ದೆಹಲಿಗೆ ಪ್ರವಾಸ ಮಾಡಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದ್ದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜೊತೆಗೆ ಸುದೀರ್ಘವಾಗಿ ಮಾತುಕತೆ ನಡೆಸಿದ್ದರು. ಡಿಕೆಶಿ ಸಹೋದರರ ಈ ಕಸರತ್ತು ನಡುವೆ ಸಿಎಂ ಸಿದ್ದರಾಮಯ್ಯ ಬಣ ಅಲರ್ಟ್ ಆಗಿದೆ. ಸಿದ್ದರಾಮಯ್ಯ ಆಪ್ತರು ದೆಹಲಿ ಪ್ರವಾಸಕ್ಕೆ ಸಿದ್ದರಾಗಿದ್ದಾರೆ.

**ಆಪ್ತರ ತಲೆದಂಡ ಆಗ್ತಿದ್ರೂ ಸೈಲೆಂಟ್ ಯಾಕೆ?,**

ಸಚಿವ ಎಚ್ ಸಿ ಮಹದೇವಪ್ಪ ದೆಹಲಿಗೆ ತೆರಳಲಿದ್ದಾರೆ. ಸಂಜೆ 4:30 ಸಮಯಕ್ಕೆ ದೆಹಲಿಗೆ ತೆರಳಿರೋ ಸಮಾಜ ಕಲ್ಯಾಣ ಇಲಾಖೆಯ ಸಚಿವ ದೆಹಲಿಯಲ್ಲೇ ವಾಸ್ತವ್ಯ ಹೂಡಲಿದ್ದಾರೆ. ಮಂಗಳವಾರ ಕೇಂದ್ರ ಸಚಿವರ ಜೊತೆ ಸಭೆಯಲ್ಲಿ ಭಾಗಿಯಾಗಿಲಿದ್ದಾರೆ. ಈ ವೇಳೆ ಅವಕಾಶ ಸಿಕ್ಕರೆ ಹೈಕಮಾಂಡ್ ನಾಯಕರ ಭೇಟಿಗೆ ಕಸರತ್ತು ನಡೆಸಲಿದ್ದಾರೆ.

ಇನ್ನು ಸಚಿವ ಸತೀಶ್ ಜಾರಕಿಹೊಳಿ ಅವರು ಈಗಾಗಲೇ



ದೆಹಲಿಯಲ್ಲಿ ಬೀಡು ಬಿಟ್ಟಿದ್ದಾರೆ. ಅವರು ಭಾನುವಾರ ಅಹಿಂದ ಹೋರಾಟ ಹಾಗೂ ಸಾಧನೆಗೆ ಸಂಬಂಧಿಸಿದಂತೆ ವಿಚಾರ ಸಂಕಿರಣದಲ್ಲಿ ಭಾಗಿಯಾಗಿದ್ದರು. ಇದರ ಬೆನ್ನಲ್ಲೇ ಅವರು ದೆಹಲಿಗೆ ತೆರಳಿದ್ದಾರೆ.

ಡಿಕೆ ಸಹೋದರರ ಹೈಕಮಾಂಡ್ ಭೇಟಿ ವಿಚಾರವಾಗಿ ಹಾಗೂ ಪವರ್ ಶೇರಿಂಗ್ ಫೈಟ್ ಬಗ್ಗೆ ಮಾತನಾಡಿದ ಗೃಹ ಸಚಿವ ಡಾ. ಜಿ ಪರಮೇಶ್ವರ್, ''ನಾವೆಲ್ಲಾ ಮಾಡುವುದೇ ರಾಜಕೀಯ. ಇದರಲ್ಲಿ ಬೆಳವಣಿಗೆ ಏನಿದೆ? ರಾಜಕಾರಣ ಎಂಬ ವ್ಯಾಖ್ಯಾನದಲ್ಲೇ ಅದೆಲ್ಲಾ ಬಂದು ಬಿಡುತ್ತದೆ. ಪ್ರತ್ಯೇಕವಾಗಿ ರಾಜಕೀಯ ಅನ್ನೋದು ಏನು ಇಲ್ಲ'' ಎಂದರು.

ಸಿಎಂ ಜೊತೆ ಪರಮೇಶ್ವರ್ ಸಭೆ ವಿಚಾರಕ್ಕೆ ಇದೇ ವೇಳೆ ಮಾತನಾಡಿದ ಅವರು, 'ಅದೇ ರಾಜಕೀಯ. ನಮ್ಮ ಡಿಸಿಎಂ ಸಾಹೇಬ್ರು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ರಕ್ಷಣಾ ಇಲಾಖೆಗೆ ಸಂಬಂಧಪಟ್ಟ ಕೆಲಸಗಳ ಬಗ್ಗೆ ಚರ್ಚೆಯನ್ನು ಮಾಡಲು ದೆಹಲಿಗೆ ಹೋಗಿದ್ರು. ಈ ಸಂದರ್ಭದಲ್ಲಿ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿದ್ದಾರೆ ಎಂದರು.

ದೆಹಲಿ ಭೇಟಿಯ ವೇಳೆ, ಏನೇನು ಮಾತುಕತೆ ಆಗಿದೆಯೋ ಅದೆಲ್ಲ ನಡೆಯುತ್ತವೆ ಎಂಬ ಡಿಕೆಶಿ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, 'ರಾಜಕಾರಣದ ವಿಚಾರದಲ್ಲಿ ಅವರು ಹೇಳಿರುವಂತಹ ಹೇಳಿಕೆಯಾಗಿದೆ. ಅದು ಅಷ್ಟು ಬಿಟ್ಟರೆ ಅದಕ್ಕೆ ನಾವೇನು ವ್ಯಾಖ್ಯಾನ ಮಾಡೋದು ಅಗತ್ಯ ಇಲ್ಲ. ನಾವು ಮೀಟಿಂಗ್ ಮಾಡಿ ಊಟ ಮಾಡಿ ಬಂದಿದ್ದೇವೆ ಅಷ್ಟೇ' ಎಂದರು.

ಇದೇ ವಿಚಾರವಾಗಿ ಕಾಂಗ್ರೆಸ್ ಶಾಸಕ ಕುಣಿಗಲ್ ರಂಗನಾಥ್ ಮಾತನಾಡಿ, ''ನಮ್ಮ ನಮ್ಮ ಕೆಲಸ ಮಾಡಿಕೊಂಡು ಹೋಗೋಣ ಫಲಾಫಲ ಭಗವಂತನಿಗೆ ಬಿಡೋಣ ಅಂತಾರೆ. ಅದೇ ರೀತಿ ಡಿಕೆಶಿವಕುಮಾರ್ ಕೂಡ ಕೆಲಸ ಮಾಡಿಕೊಂಡು ಹೋಗ್ತಾ ಇದ್ದಾರೆ. ಅನೇಕ ಅಭಿವೃದ್ಧಿ ಕೆಲಸ ಮಾಡಿದ್ದಾರೆ ಡಿಕೆ ಶಿವಕುಮಾರ್. ಅವರಿಗೆ ಒಂದು ಸ್ಥಾನ ಮಾನ ಸಿಗಲಿ ಅಂತ ನನ್ನೂ ಸೇರಿದಂತೆ ಅನೇಕರ ಆಸೆ. ಅವರ ಶ್ರಮಕ್ಕೆ ಹೈ ಕಮಾಂಡ್ ಪ್ರತಿಫಲ ಕೊಡಬೇಕಾಗಿದೆ ಎಂದರು.

**ಮೇ 4 ಡೆಡ್‌ಲೈನ್!**

**ಮೇ 4 ಕ್ಕೆ ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ಬರಲಿದೆ. ಈ ಹಿನ್ನೆಲೆಯಲ್ಲಿ ಮುಂದಿನ ಬೆಳವಣಿಗೆ ಏನು ಎಂಬುವುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಸದ್ಯ ದೆಹಲಿ ಮಟ್ಟದಲ್ಲಿ ಸಾಕಷ್ಟು ಬೆಳವಣಿಗೆಗಳು ನಡೆಯುತ್ತಿವೆ. ಆದರೆ, ಮೇ 4 ರ ಬಳಿಕ ಇವೆಲ್ಲವೂ ರಾಜ್ಯಕ್ಕೆ ಶಿಫ್ಟ್ ಅಗುವ ಸಾಧ್ಯತೆ ಇದೆ. ಡಿಕೆ ಶಿವಕುಮಾರ್ ಬಣ ಈ ನಿಟ್ಟಿನಲ್ಲಿ ಸಿದ್ದತೆ ಮಾಡಿಕೊಂಡಿದೆ. ಆದರೆ ಡೆಡ್ ಲೈನ್ ನಿರೀಕ್ಷೆ ಎಷ್ಟರ ಮಟ್ಟಿಗೆ ಯಶಸ್ವಿ ಆಗಲಿದೆ ಎಂಬುವುದು ಕುತೂಹಲ.**

**ಈ ದಿನದ ದರ** | ಪೆಟ್ರೋಲ್: 103.33 ₹/L | ಡೀಸೆಲ್ : 91.47 ₹/L | ಬಂಗಾರ: ₹15,371/Gram24ct ₹14,090/Gram22ct | ಬೆಳ್ಳಿ: ₹260.00/Gram

## ಶ್ರೀ ಶ್ರೀನಿವಾಸ ದೇವರಿಗೆ ಮಹಾಭಿಷೇಕ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ



• ಉದಯವಾಹಿನಿ, ಬೆಂಗಳೂರು

ಪವಮಾನಪುರ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶ ಅನುಗ್ರಹದೊಂದಿಗೆ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ ಮತ್ತು ನೂತನ ವ್ಯವಸ್ಥಾಪಕರಾದ ಶ್ರೀ ನಂದಕಿಶೋರಾಚಾರ್ಯರ ನೇತೃತ್ವದಲ್ಲಿ ಶ್ರೀ ಶ್ರೀನಿವಾಸ ಕಲ್ಯಾಣ ಮಹೋತ್ಸವದ ಅಂಗವಾಗಿ ಶ್ರೀ ಶ್ರೀನಿವಾಸ ದೇವರಿಗೆ ಮಹಾಭಿಷೇಕ ಮತ್ತು ಉತ್ಸವ ಮೂರ್ತಿಗಳಿಗೆ ಮಹಾಮಂಗಳಾರತಿಯು ನೆರವೇರಿಸಲಾಯಿತು. ಬೆಳಗ್ಗೆ 7:30ಕ್ಕೆ ಶ್ರೀನಿವಾಸ ದೇವರಿಗೆ ಮಹಾ ಅಭಿಷೇಕ ಪಂಚಾಮೃತದೊಂದಿಗೆ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ಅಷ್ಟೋತ್ತರ ಸಹಿತ ಫಲ ಪಂಚಾಮೃತ ಅಭಿಷೇಕವು ಅರ್ಚಕರಾದ ಇಂದಿರೇಶ ಆಚಾರ್ ಮತ್ತು ಶ್ರೀಪಾದ ಆಚಾರ್ಯರಿಂದ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ನೆರವೇರಿಸಿ ವಿಶೇಷ ಅಲಂಕಾರದೊಂದಿಗೆ ಮಹಾ ಮಂಗಳಾರತಿಯು ನೆರವೇರಿತು.

ಈ ಸಂದರ್ಭದಲ್ಲಿ ಸೇವಾಕರ್ತೃಗಳು, ಶ್ರೀಮಠದ ಶಿಷ್ಯರು, ಭಕ್ತರು, ಶ್ರೀಮಠದ ಸಿಬ್ಬಂದಿಗಳು ಸ್ವಯಂ ಸೇವಕರು ಭಾಗವಹಿಸಿ ತೀರ್ಥ ಫಲಮಂತ್ರಾಕ್ಷತೆ ಪ್ರಸಾದವನ್ನು ಸ್ವೀಕರಿಸಿ ಶ್ರೀ ಶ್ರೀನಿವಾಸ ದೇವರ ಶ್ರೀ ರಾಘವೇಂದ್ರ ಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದರು.

## ಗ್ರಾಹಕರ ಮೇಲಿನ ದಂಡದ ಹೊರೆ ತಪ್ಪಿಸಲು ಜಲಮಂಡಳಿ ಕ್ರಮ

• ಉದಯವಾಹಿನಿ, ಬೆಂಗಳೂರು

ಸ್ವಂತ ಕಟ್ಟಡದಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳಲು ಜಾಗದ ಕೊರತೆ ಇರುವವರಿಗೆ ಜಲಮಂಡಳಿಯು ಹೊಸ ತಂತ್ರಜ್ಞಾನವನ್ನು ಪರಿಚಯಿಸಿದೆ. ಶುದ್ಧ ನೀರು ಒದಗಿಸುವ ಜತೆಗೆ ಗ್ರಾಹಕರ ಮೇಲಿನ ದಂಡದ ಹೊರೆಯನ್ನು ಇದು ತಗ್ಗಿಸಲಿದೆ.

'ನಗರದಲ್ಲಿ ಮಳೆನೀರು ಸಂಗ್ರಹ ಅಭಿಯಾನವನ್ನು ಮತ್ತಷ್ಟು ಚುರುಕುಗೊಳಿಸುವ ಉದ್ದೇಶದಿಂದ, ಗ್ರಾಹಕರು ಬಯಸಿದರೆ ಕಟ್ಟಡಗಳಲ್ಲಿ ಜಲಮಂಡಳಿಯೇ ಖುದ್ದಾಗಿ ಅತ್ಯಾಧುನಿಕ ತಂತ್ರಜ್ಞಾನದ ಮಳೆನೀರು ಸಂಗ್ರಹ ವ್ಯವಸ್ಥೆ ಅಳವಡಿಸಲು ಮುಂದಾಗಿದೆ' ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಮಳೆನೀರು ಸಂಗ್ರಹ ಪದ್ಧತಿ ಅಳವಡಿಸಿಕೊಳ್ಳದ ಕಾರಣಕ್ಕೆ ಗ್ರಾಹಕರು ಜಲಮಂಡಳಿಗೆ ಪ್ರತಿ ತಿಂಗಳು ದಂಡ ಪಾವತಿಸುತ್ತಿದ್ದಾರೆ. ಜಲಮಂಡಳಿ ದಂಡದ ರೂಪದಲ್ಲಿಯೇ ಪ್ರತಿ ತಿಂಗಳು ರೂ. 3 ಕೋಟಿ ಆದಾಯ ಸಂಗ್ರಹಿಸುತ್ತಿದೆ. ಈ ಯೋಜನೆಯಡಿ ಇಚ್ಛಿಸುವ ಗ್ರಾಹಕರ ಕಟ್ಟಡಗಳಿಗೆ ಜಲಮಂಡಳಿಯೇ ಮಳೆನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಲಿದೆ. ಇದಕ್ಕಾಗಿ ತಗಲುವ ವೆಚ್ಚವನ್ನು ಗ್ರಾಹಕರು ಪ್ರತಿ ತಿಂಗಳು ಪಾವತಿಸುವ ದಂಡದ ಮೊತ್ತದ ರೂಪದಲ್ಲೇ ಹಂತ ಹಂತವಾಗಿ ವಸೂಲಿ ಮಾಡಲು ನಿರ್ಧರಿಸಲಾಗಿದೆ. ಇದರಿಂದ ಕಾಲಕ್ರಮೇಣ ಗ್ರಾಹಕರಿಗೆ ದಂಡ ಕಟ್ಟುವ ಕಿರಿಕಿರಿ ತಪ್ಪಲಿದೆ. ಮಾಸಿಕ ನೀರಿನ ಬಿಲ್ ಪ್ರಮಾಣ ಕಡಿಮೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

## ಬೆಸ್ಕಾಂ: ದತ್ತಾಂಶ ರಕ್ಷಣೆಗೆ ಸೈಬರ್ ಭದ್ರತಾ ಕಾರ್ಯಾಚರಣೆ ಕೇಂದ್ರ

• ಉದಯವಾಹಿನಿ, ಬೆಂಗಳೂರು

ಗ್ರಾಹಕರ ದತ್ತಾಂಶ ರಕ್ಷಣೆ ಮತ್ತು ಸೈಬರ್ ದಾಳಿಯಿಂದ ಸಿಬ್ಬಂದಿಯ ಲ್ಯಾಪ್‌ಟಾಪ್, ಕಂಪ್ಯೂಟರ್‌ಗಳನ್ನು ರಕ್ಷಿಸುವ ಉದ್ದೇಶದಿಂದ ಸೈಬರ್ ಭದ್ರತಾ ಕಾರ್ಯಾಚರಣೆ ಕೇಂದ್ರವನ್ನು ಆರಂಭಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಮುಂದಾಗಿದೆ. ತನ್ನ ಪ್ರಮುಖ ಐ.ಟಿ ಮೂಲಸೌಕರ್ಯ ಹಾಗೂ ಡಿಜಿಟಲ್ ಕಾರ್ಯಾಚರಣೆ ವ್ಯವಸ್ಥೆಯ ರಕ್ಷಣೆಗಾಗಿ ಬೆಸ್ಕಾಂನ ಕಾರ್ಪೊರೇಟ್ ಕಚೇರಿಯಲ್ಲಿ ಈ ಕೇಂದ್ರವನ್ನು ಸ್ಥಾಪಿಸುತ್ತಿದ್ದು ಈಗಾಗಲೇ ಟೆಂಡರ್ ಕರೆಯಲಾಗಿದೆ. ಈ ಯೋಜನೆಗೆ ಸುಮಾರು 30 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಈ ಕೇಂದ್ರದ ಪ್ರಾಥಮಿಕ ವ್ಯವಸ್ಥೆಗೆ ಹಾಗೂ ಅಧಿಕೃತ ಪರವಾನಗಿ ಪಡೆಯಲು ರೂ.3.6 ಕೋಟಿ, ಕೇಂದ್ರದ ನಿರ್ವಹಣೆ ಮತ್ತು ತಾಂತ್ರಿಕ ಚಂದಾದಾರಿಕೆ ವ್ಯವಸ್ಥೆಗಾಗಿ ರೂ.16.1 ಕೋಟಿ ಹಾಗೂ ಮಾನವ ಸಂಪನ್ಮೂಲಕ್ಕೆ ರೂ.9.9 ಕೋಟಿ ವೆಚ್ಚವಾಗುವ ಸಾಧ್ಯತೆ ಇದೆ. ಸೈಬರ್ ಭದ್ರತಾ ಕಾರ್ಯಾಚರಣೆ ಕೇಂದ್ರವು ಬೆಸ್ಕಾಂನ ಐ.ಟಿ ಮೂಲಸೌಕರ್ಯಗಳಾದ ಮೊಬೈಲ್ ಮತ್ತು ವೆಬ್ ಅಪ್ಲಿಕೇಶನ್ ಹಾಗೂ ಕ್ಲೌಡ್‌ನಲ್ಲಿರುವ ಸೇವೆಗಳೊಂದಿಗೆ ಸಂಯೋಜನೆಗೊಳ್ಳಲಿದೆ. ಟೆಂಡರ್ ದಾಖಲೆಯ ಪ್ರಕಾರ, ಈ ಕೇಂದ್ರವು ಪೋರ್ಟ್ ಮತ್ತು ಅನುಮಾನಾಸ್ಪದ ಸ್ಕ್ಯಾನಿಂಗ್, ಪಾಸ್‌ವರ್ಡ್ ಹ್ಯಾಕಿಂಗ್‌ಗೆ ಯತ್ನ, ಅನಧಿಕೃತವಾಗಿ ಸಿಸ್ಟಂ ನಿಯಂತ್ರಣ, ಸಿಸ್ಟಂ ಸ್ಥಗಿತಗೊಳಿಸುವ ಪ್ರಯತ್ನ ಹಾಗೂ ಸೈಬರ್ ದಾಳಿಯಂತಹ ಪ್ರಕರಣಗಳ ಬಗ್ಗೆ ನಿಗಾವಹಿಸಿ, ಅವುಗಳನ್ನು ತಡೆಯಲಿದೆ. ಸೈಬರ್ ದಾಳಿ, ವಂಚನೆ, ಬೆದರಿಕೆಯಂಥ ಅಪಾಯಗಳನ್ನು ಪತ್ತೆಹಚ್ಚಿ ಅದನ್ನು ತಡೆಯುವುದು ಇದರ ಮುಖ್ಯ ಉದ್ದೇಶವಾಗಿದ್ದು, ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ತಂತ್ರಜ್ಞಾನದ ನೆರವಿನೊಂದಿಗೆ ಈ ಕೇಂದ್ರ ಕಾರ್ಯನಿರ್ವಹಿಸಲಿದೆ.

# ಮಳೆ ಮುನ್ಸೂಚನೆ, ಉತ್ತರ ಕರ್ನಾಟಕದಲ್ಲಿ ಮುಂದುವರಿಯಲಿದೆ ತಾಪಮಾನ

## ▸ಕರ್ನಾಟಕದ ಕೆಲವು ಭಾಗಗಳಲ್ಲಿ ಇಂದಿನಿಂದ ಮಳೆಯಾಗುವ ಮುನ್ಸೂಚನೆ

• ಉದಯವಾಹಿನಿ, ಬೆಂಗಳೂರು

ಮೋಡ ಕವಿದ ವಾತಾವರಣ, ತಾಪಮಾನ ಏರಿಕೆ ಸುದ್ದಿಗಳನ್ನೇ ಕೊಡುತ್ತಿದ್ದ ಹವಾಮಾನ ಇಲಾಖೆ ಇದೀಗ ಮಳೆಯ ಸುದ್ದಿಯನ್ನು ನೀಡಿದೆ. ಬಿಸಿಲಿನಿಂದ ಕಂಗೆಟ್ಟಿರುವ ಕರ್ನಾಟಕದ ಕೆಲವು ಭಾಗಗಳಲ್ಲಿ ಮಳೆಯಾಗುವ ಮುನ್ಸೂಚನೆ ಸಿಕ್ಕಿದ್ದರೆ, ಉತ್ತರ ಕರ್ನಾಟಕದಲ್ಲಿ ತಾಪಮಾನ ಏರಿಕೆ ಮುಂದುವರಿಯಲಿದೆ.

**ಬೆಂಗಳೂರಿನಲ್ಲಿ ಮಳೆ:** ಕಳೆದ ಕೆಲವು ದಿನಗಳಿಂದ ಗರಿಷ್ಠ 36 ಡಿಗ್ರಿ ಸೆಲ್ಸಿಯಸ್‌ವರೆಗೆ ತಾಪಮಾನ ಕಂಡಿದ್ದ ಬೆಂಗಳೂರಿನಲ್ಲಿ ಮಧ್ಯಾಹ್ನದ ನಂತರ ಮೋಡ ಕವಿದ ವಾತಾವರಣವಿರಲಿದ್ದು, ಸಂಜೆ ವೇಳೆಗೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

**ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಮಳೆ:** ಕರಾವಳಿ ಜಿಲ್ಲೆಗಳಲ್ಲಿ ಗಂಟೆಗೆ 30-40 ಕಿ.ಮೀ ವೇಗದಲ್ಲಿ ಬಿರುಗಾಳಿ ಬೀಸಲಿದ್ದು, ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿದೆ. ಮಲೆನಾಡು ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗಿನಲ್ಲೂ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.



**ಉತ್ತರ ಕರ್ನಾಟಕದಲ್ಲಿ ತಾಪಮಾನ:** ಬೆಳಗಾವಿ, ಧಾರವಾಡ, ಕಲಬುರಗಿ, ರಾಯಚೂರು ಸೇರಿದಂತೆ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರಿಯಲಿದ್ದು, ಬಿಸಿಲಿನ ತಾಪಮಾನ ಗರಿಷ್ಠ ಮಟ್ಟದಲ್ಲಿರಲಿದೆ.

ಕೆಲವು ಕಡೆಗಳಲ್ಲಿ ಮಾತ್ರ ಸಾಧಾರಣ ಮಳೆಯಾಗಬಹುದು. ಒಟ್ಟಾರೆಯಾಗಿ, ದಕ್ಷಿಣ ಕರ್ನಾಟಕದ ಜನತೆಗೆ ಮಳೆ ತಂಪೆರೆಯುವ ಸಾಧ್ಯತೆಯಿದ್ದರೆ, ಉತ್ತರ ಕರ್ನಾಟಕದ ಮಂದಿಗೆ ಸದ್ಯಕ್ಕೆ ಬಿಸಿಲಿನ ಬೇಗೆಯಿಂದ ಮುಕ್ತಿ ಇಲ್ಲದಂತಾಗಿದೆ.

**ಕೆಲವೆಡೆ ಮಳೆ ಸಾಧ್ಯತೆ:** ಕಾಸರಗೋಡು: ರಾಜ್ಯದ ಕೆಲವೆಡೆ ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. 1ಕೆಲವು ಪ್ರದೇಶಗಳಲ್ಲಿಗುಡುಗು ಸಹಿತ ಮಳೆಯಾಗಲಿದ್ದು, ಗಂಟೆಗೆ 30 ರಿಂದ 40 ಕಿ.ಮೀ. ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆ ಇದೆ ಎಂದು ಎಚ್ಚರಿಸಿದೆ.

### ತಾಪಮಾನ ಹೆಚ್ಚಳದ ಎಚ್ಚರಿಕೆ

**ಕೆಲವು ಜಿಲ್ಲೆಗಳಲ್ಲಿ ತಾಪಮಾನ ಹೆಚ್ಚಲಿದೆ ಎನ್ನುವ ಎಚ್ಚರಿಕೆಯನ್ನೂ ನೀಡಿದೆ. ಕೊಲ್ಲಂ, ಕೊಟ್ಟಾಯಂ ಮತ್ತು ಪಾಲಕ್ಕಾಡ್ ಜಿಲ್ಲೆಗಳಲ್ಲಿಗರಿಷ್ಠ 38 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಲಿದೆ. ಪತ್ತನಂತಿಟ್ಟ, ಆಲಪ್ಪುಯ, ತ್ರಿಶೂರ್, ಎರ್ನಾಕುಳಂ, ಕೋಝಿಕ್ಕೋಡ್ ಮತ್ತು ಕಣ್ಣೂರು ಜಿಲ್ಲೆಗಳಲ್ಲಿ37 ಡಿಗ್ರಿ ಸೆಲ್ಸಿಯಸ್, ತಿರುವನಂತಪುರ, ಮಲಪ್ಪುರಂ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ 36 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.**

## ವಿದ್ಯಾರ್ಥಿಗಳು ವಾಸವಿದ್ದ ಮನೆಗೆ ನುಗ್ಗಿ ಹಲ್ಲೆ: ತಮಿಳುನಾಡಿನ 6 ಮಂದಿ ಬಂಧನ

• ಉದಯವಾಹಿನಿ, ಬೆಂಗಳೂರು

ವಿದ್ಯಾರ್ಥಿಗಳು ವಾಸವಿದ್ದ ಮನೆಗೆ ನುಗ್ಗಿ ಹಲ್ಲೆ ಮಾಡಿ, ಬೆದರಿಸಿ ನಗದು, ಮೊಬೈಲ್, ಲ್ಯಾಪ್‌ಟಾಪ್ ಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದ ಆರು ಮಂದಿಯನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿದ್ಯಾರ್ಥಿಯ ದೂರು ಆಧರಿಸಿ, ತಮಿಳುನಾಡಿನ ಅಭಿನೇಶ್, ಕಲೈವೆಂದನ್, ವಿಮಲ್ ರಾಜ್, ಕುಮಾರನ್, ಪ್ರೇಮ್ ಕುಮಾರ್ ಮತ್ತು ನವೀನ್ ಕುಮಾರ್ ಎಂಬುವವರನ್ನು ಬಂಧಿಸಿ, 3 ಲಕ್ಷ ಮೌಲ್ಯದ ಎರಡು ದ್ವಿಚಕ್ರ ವಾಹನಗಳು, ನಾಲ್ಕು ಮೊಬೈಲ್ ಫೋನ್ ಹಾಗೂ ಎರಡು ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಭಿನೇಶ್ ಹೊರತುಪಡಿಸಿ ಉಳಿದವರು ಶಿಕ್ಷಣ ಪೂರೈಸಿ ವಿವಿಧೆಡೆ ಕೆಲಸ ಮಾಡಿಕೊಂಡಿದ್ದು, ಸ್ನೇಹಿತನ ಸಹಾಯಕ್ಕಾಗಿ ಬೆಂಗಳೂರಿಗೆ ಬಂದಿದ್ದರು. ಆರೋಪಿಗಳ ಮೇಲೆ ಹಿಂದೆ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ಪೊಲೀಸರು ತಿಳಿಸಿದರು. ಠಾಣಾ ವ್ಯಾಪ್ತಿಯ ಕಾಲೇಜೊಂದರಲ್ಲಿ ಓದುತ್ತಿರುವ ಕೇರಳದ ವಿದ್ಯಾರ್ಥಿಗಳು ಕೆಂಬತ್ತಹಳ್ಳಿ ಮುಖ್ಯ ರಸ್ತೆಯಲ್ಲಿ ಬಾಡಿಗೆಗೆ ಮನೆಯೊಂದನ್ನು ಮಾಡಿಕೊಂಡು ವಾಸವಾಗಿದ್ದಾರೆ.

ಏಪ್ರಿಲ್ 17ರ ರಾತ್ರಿ ಆರು ಮಂದಿ ವಿದ್ಯಾರ್ಥಿಗಳ ಮನೆಗೆ ನುಗ್ಗಿ, ಚಾಕುವಿನಿಂದ ಹಲ್ಲೆ ಮಾಡಿ, ಬೆದರಿಸಿ, ರೂ.10 ಸಾವಿರ ನಗದು, ನಾಲ್ಕು ಮೊಬೈಲ್ ಫೋನ್‌ಗಳು, ಎರಡು ಲ್ಯಾಪ್‌ಟಾಪ್ ಹಾಗೂ ಒಂದು ದ್ವಿಚಕ್ರ ವಾಹನವನ್ನು ಕಿತ್ತುಕೊಂಡು ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದರು.

ಪ್ರಕರಣ ದಾಖಲಿಸಿಕೊಂಡು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ, ಬಾತ್ಮೀದಾರರಿಂದ ಮಾಹಿತಿ ಸಂಗ್ರಹಿಸಿ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಓಂ ಶಕ್ತಿ ನಗರದಲ್ಲಿ ಆರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಕೃತ್ಯದಲ್ಲಿ ಭಾಗಿಯಾಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ ಎಂದರು. ತಮಿಳುನಾಡಿನ ಅಭಿನೇಶ್ ಮತ್ತು ಕೇರಳದ ವಿದ್ಯಾರ್ಥಿಗಳೊಂದಿಗೆ ಗಲಾಟೆ ಆಗಿತ್ತು. ವೈಷಮ್ಯದ ಹಿನ್ನೆಲೆಯಲ್ಲಿ ಅಭಿನೇಶ್ ತಮಿಳುನಾಡಿನಿಂದ ತನ್ನ ಸ್ನೇಹಿತರನ್ನು ನಗರಕ್ಕೆ ಕರೆಸಿಕೊಂಡಿದ್ದ. ವಿದ್ಯಾರ್ಥಿಗಳು ವಾಸವಿದ್ದ ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದರು. ಹಲ್ಲೆಗೊಳಗಾದ ವಿದ್ಯಾರ್ಥಿಗಳು ಮತ್ತು ಆರೋಪಿ ಅಭಿನೇಶ್ ಒಂದೇ ಕಾಲೇಜಿನವರು ಎಂದು ಪೊಲೀಸರು ತಿಳಿಸಿದ್ದಾರೆ.

## ಸೂರಿನ ಕನಸಿಗೆ ಕೆಎಚ್‌ಬಿ ರಕ್ಷೆ: ಬಿಎಂ ಕಾವಲ್ ಟೌನ್‌ಶಿಪ್

• ಉದಯವಾಹಿನಿ, ಬೆಂಗಳೂರು

ಬಿ.ಎಂ.ಕಾವಲ್ ಬಳಿ ಟೌನ್‌ಶಿಪ್ ಯೋಜನೆ ಮತ್ತು ನಮ್ಮ ಮನೆ ಯೋಜನೆಯಡಿ ರಿಯಾಯಿತಿ ದರದಲ್ಲಿ 50 ಸಾವಿರ ನಿವೇಶನ ಹಂಚಿಕೆ ಮಾಡಲು ಕರ್ನಾಟಕ ಗೃಹ ಮಂಡಳಿ(ಕೆಎಚ್‌ಬಿ) ಉದ್ದೇಶಿಸಿದ್ದು, ಇದು ನಿವೇಶನ ಮತ್ತು ಸ್ವಂತ ಸೂರು ಹೊಂದುವ ಮಧ್ಯಮ ಮತ್ತು ಸಮುದಾಯದ ಶ್ರಮಿಕ ವರ್ಗದ ಕನಸಿಗೆ ರೆಕ್ಕೆ ಕಟ್ಟಿದೆ.

ಸೂರ್ಯನಗರ 2ನೇ ಹಂತದ ರಾಜಾಪುರ, ನಾಲ್ಕನೇ ಹಂತ ಸೇರಿದಂತೆ ವಿವಿಧ ಹಂತಗಳಲ್ಲಿ ನಿವೇಶನ ಹಂಚಿಕೆ ಮತ್ತು ಫ್ಲ್ಯಾಟ್ ನಿರ್ಮಾಣ ಮಾಡಿ ಹಂಚಿಕೆ ಮಾಡುವ ಯೋಜನೆಗಳಿಗೆ ಚಾಲನೆ ನೀಡಿದೆ. ಇದರ ಜತೆಗೆ ಹಮ್ಮಿಕೊಳ್ಳಲು ಉದ್ದೇಶಿಸಿರುವ ಬಿ.ಎಂ.ಕಾವಲ್ ಮತ್ತು ನಮ್ಮ ಮನೆ ಯೋಜನೆಯಡಿ ರಿಯಾಯಿತಿ ದರದಲ್ಲಿ 50 ಸಾವಿರ ನಿವೇಶನ ಹಂಚಿಕೆ ಯೋಜನೆಗಳನ್ನೂ ಹಮ್ಮಿಕೊಳ್ಳುವ ಮೂಲಕ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಜನರ ಕನಸನ್ನು ನನಸು ಮಾಡಲು ಸಜ್ಜಾಗಿದೆ.

ಕೆಂಗೇರಿ ಹೋಬಳಿಯ ಬಿ.ಎಂ.ಕಾವಲ್, ಚಿನ್ನಕುರ್ಚಿ, ವಸಂತನಹಳ್ಳಿ, ದೇವಗೆರೆ, ಕೆ.ಗೊಲ್ಲಹಳ್ಳಿ, ಬಿಡದಿಯ ಕೊಡಿಯಾಲ ಇತರೆ ಗ್ರಾಮಗಳ ವ್ಯಾಪ್ತಿಯ 500 ಎಕರೆಯಲ್ಲಿ ಅತ್ಯಾಧುನಿಕ ಮಾದರಿಯ ಟೌನ್‌ಶಿಪ್ ಅನ್ನು ಮಾಡಲು ನಿರ್ಧರಿಸಿರುವ ಮಂಡಳಿ, ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆಗೆ ಚಾಲನೆಯನ್ನೂ ನೀಡಿದೆ.

ಇಲ್ಲಿ ವಸತಿ ಸಮುಚ್ಚಯ ನಿರ್ಮಿಸಿ ಫ್ಲ್ಯಾಟ್ ಹಂಚಿಕೆ ಮಾಡುವ ಉದ್ದೇಶವನ್ನು ಕೆಎಚ್‌ಬಿ ಹೊಂದಿದೆ. ಈಗಾಗಲೇ ಡಿಪಿಆರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಎರಡ್ಮೂರು ತಿಂಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮುಗಿಯುವ ಸಾಧ್ಯತೆ ಇದೆ. ಈ ಯೋಜನೆಗೆ ಅಂದಾಜು 1,066 ಕೋಟಿ ರೂ.ವೆಚ್ಚವಾಗಲಿದೆ ಎಂದು ಲೆಕ್ಕಾಚಾರ ಮಾಡಲಾಗಿದೆ.



ಸರಕಾರದಿಂದ ಯಾವುದೇ ಹಣಕಾಸು ನೆರವು ನಿರೀಕ್ಷಿಸದೆ ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎನ್ನುತ್ತವೆ ಮಂಡಳಿಯ ಮೂಲಗಳು.

**'ನಮ್ಮ ಮನೆ ಯೋಜನೆ'ಯಡಿ 5 ಸಾವಿರ ನಿವೇಶನ**

ಗೃಹ ಮಂಡಳಿ 'ನಮ್ಮ ಮನೆ ಯೋಜನೆ'ಯಡಿ ಬಡ, ಮಧ್ಯಮ ವರ್ಗದ ಸಮುದಾಯದ ಶ್ರಮಿಕ ವರ್ಗದವರಿಗೆ ರಾಜ್ಯಾದ್ಯಂತ ರಿಯಾಯಿತಿ ದರದಲ್ಲಿ 1 ಲಕ್ಷ ನಿವೇಶನ ಹಾಗೂ 10 ಸಾವಿರ 2 ಬಿಎಚ್‌ಕೆ ಫ್ಲ್ಯಾಟ್ (ವಸತಿ ಸಮುಚ್ಚಯ ಆಧಾರಿತ) ಹಂಚಿಕೆ ಮಾಡುವ ಪ್ರಸ್ತಾವನೆಯನ್ನು ರಾಜ್ಯ ಸರಕಾರದ ಮುಂದಿಟ್ಟಿತ್ತು. ಆದರೆ, ಫ್ಲ್ಯಾಟ್ ಹಂಚಿಕೆ ಪ್ರಸ್ತಾವನೆ ಕೈಬಿಟ್ಟು ರಿಯಾಯಿತಿ ದರದಲ್ಲಿ '50 ಸಾವಿರ' ನಿವೇಶನ ಹಂಚಿಕೆ ಮಾಡಲು ಅನುಮತಿ ನೀಡಿದ ರಾಜ್ಯ ಸರಕಾರ, ಈಗಾಗಲೇ ಬಜೆಟ್‌ನಲ್ಲಿಯೂ ಘೋಷಣೆ ಮಾಡಿದೆ. ಈ ಯೋಜನೆಯಡಿ ಎಲ್ಲ ಜಿಲ್ಲೆಗಳಿಗೂ ನಿವೇಶನ ಹಂಚಿಕೆಯಾಗಲಿದ್ದು, ಬೆಂಗಳೂರು ನಗರಕ್ಕೆ 5 ಸಾವಿರ ನಿವೇಶನ ಹಂಚಿಕೆಯಾಗಲಿದೆ. ಎರಡು ವರ್ಷಗಳಲ್ಲಿ ಹಂಚಿಕೆ ಮಾಡಬೇಕು ಎಂಬ ಸರಕಾರದ ಸೂಚನೆ ಇರುವುದರಿಂದ, ಎರಡ್ಮೂರು ತಿಂಗಳಲ್ಲಿ ನಿವೇಶನ ಹಂಚಿಕೆ ಪ್ರಕ್ರಿಯೆ ಆರಂಭ ಆಗಲಿದೆ.

**ಟೌನ್‌ಶಿಪ್‌ನಲ್ಲಿ ಹಲವು ಸೌಲಭ್ಯ**

ಅತ್ಯಾಧುನಿಕ ಮಾದರಿಯಲ್ಲಿ ಬಿ.ಎಂ.ಕಾವಲ್ ಟೌನ್‌ಶಿಪ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ವಸತಿ ಸಮುಚ್ಚಯ, ವಾಣಿಜ್ಯ ಮತ್ತು ಐಟಿ ಕೇಂದ್ರ, ಕ್ಲಬ್‌ಹೌಸ್, ಮನರಂಜನಾ ಪಾರ್ಕ್, ಈಜುಕೊಳ ಸೇರಿದಂತೆ ಇನ್ನಿತರೆ ಆಧುನಿಕ ಸೌಕರ್ಯವನ್ನು ಒಳಗೊಂಡಿರಲಿದೆ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

### ಗಗನಕ್ಕೇರಿದ ನಿವೇಶನ ಬೆಲೆ

**ಈಗಾಗಲೇ ನಗರದ ಹೊರವಲಯದಲ್ಲಿ ಖಾಸಗಿ ಬಡಾವಣೆಗಳ ಹಾವಳಿ ಹೆಚ್ಚಾಗಿದ್ದು, ಬೆಲೆಗಳು ಗಗನಕ್ಕೇರಿವೆ. ಇಂತಹ ಸಮಯದಲ್ಲಿ ಮಂಡಳಿಯ ಈ ಎರಡೂ ಯೋಜನೆಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸಿದರೆ ರಿಯಲ್ ಎಸ್ಟೇಟ್ ಮಾರುಕಟ್ಟೆಯಲ್ಲಿ ಹೊಸ ಸಂಚಲನ ಉಂಟು ಮಾಡಲಿದೆ. ಅಲ್ಲದೆ, ಸರಕಾರಿ ಅಧೀನದ ಪ್ರಾಧಿಕಾರ ರಿಯಾಯಿತಿ ದರದಲ್ಲಿ ನಿವೇಶನ ಹಂಚಿಕೆ ಮಾಡುವುದರಿಂದ ಖಾಸಗಿ ನಿವೇಶನಗಳ ದರ ನಿಯಂತ್ರಣಕ್ಕೆ ಬರಲಿದ್ದು, ದಶಕಗಳಿಂದ ನಿವೇಶನಗಳಿಗೆ ಕಾದಿರುವ ಸಾವಿರಾರು ಜನರಿಗೆ ಆರ್ಥಿಕ ಹೊರೆ ತಗ್ಗಲಿದೆ. ಆದರೆ, ಮಂಡಳಿಯು ಯೋಜನೆಗಳನ್ನು ಶೀಘ್ರ ಅನುಷ್ಠಾನ ಮಾಡುವ ಬದ್ಧತೆ ತೋರಬೇಕಿದೆ.**

## ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಭದ್ರತಾ ಲೋಪ



• ಉದಯವಾಹಿನಿ, ಬೆಂಗಳೂರು

ಏ.2024ರಂದು ಬೆಂಗಳೂರಿನ ಚಿನ್ನಸ್ವಾಮಿ ಮೈದಾನದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ನಡುವಿನ ಹೈ ಪ್ರೊಫೈಲ್ ಮ್ಯಾಚ್‌ಗಿಂತ ಮುಂಚಿತವಾಗಿ ಭಾರಿ ಭದ್ರತಾ ಎಡವಟ್ಟು ನಡೆದಿದ್ದು, ಕ್ರೀಡಾಂಗಣದಲ್ಲಿದ್ದ ಬರೋಬ್ಬರಿ 240 ಸಿಸಿಟಿವಿ ಕ್ಯಾಮೆರಾಗಳನ್ನು ನಿಷ್ಕ್ರಿಯಗೊಳಿಸಿರುವ ಘಟನೆ ಬೆಳಕಿಗೆ ಬಂದಿದೆ. ಬೆಂಗಳೂರಿನ ಆರ್‌ಸಿಬಿ ವರ್ಸಸ್ ಜಿಟಿ ನಡುವೆ ಹಣಾಹಣಿ ನಡೆದಿತ್ತು. ಆದರೆ, ಇದಕ್ಕೂ ಮುಂಚಿತವಾಗಿ ಕ್ರೀಡಾಂಗಣದಲ್ಲಿ ಭಾರಿ ಮಟ್ಟದ ಭದ್ರತಾ ಲೋಪ ಆಗಿದ್ದು, ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತಮುತ್ತಲಿದ್ದ ಸುಮಾರು ಸಿಸಿಟಿವಿ ಕ್ಯಾಮೆರಾಗಳು ಕಾರ್ಯ ನಿರ್ವಹಿಸಿಲ್ಲ. ಇದರಿಂದಾಗಿ ಇದಕ್ಕೆ ಕಾರಣವೇನು ಎಂಬುದರ ಕುರಿತಾಗಿ ಪೊಲೀಸರು ತನಿಖೆ ನಡೆಸಿದ್ದಾರೆ.

**240 ಸಿಸಿಟಿವಿ ಕ್ಯಾಮೆರಾ ನಿಷ್ಕ್ರಿಯಗೊಳಿಸಿದ 2 ಸಿಬ್ಬಂದಿ**

**240ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾ ನಿಷ್ಕ್ರಿಯಗೊಳಿಸಿದ ಸಿಬ್ಬಂದಿಗಳು**

ಈ ವೇಳೆ, ಡಿಜಿಟಲ್ ಸಲ್ಯೂಷನ್ಸ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ 2 ಸಿಬ್ಬಂದಿಗಳು ಪಾಸ್ ಇಲ್ಲದೆ, ನಿಷ್ಕ್ರಿಯಗೊಂಡ ಕಾರ್ಡ್ ಬಳಸಿ ಸರ್ವರ್ ರೂಂಗೆ ಅನಧಿಕೃತವಾಗಿ ಪ್ರವೇಶಿಸಿದ್ದಾರೆ. ಇದಾದ ಬಳಿಕ ಉದ್ದೇಶಪೂರ್ವಕವಾಗಿ ನೆಟ್‌ವರ್ಕ್ ವಿಡಿಯೋ ರೆಕಾರ್ಡರ್ ಘಟಕಗಳು ಮತ್ತು ಫೈಬರ್ ಆಪ್ಟಿಕ್ ಸಂಪರ್ಕಗಳು ಸೇರಿದಂತೆ ನಿರ್ಣಾಯಕ ಮೂಲಸೌಕರ್ಯಗಳು ಹಾನಿಗೊಳಗಾದ ನಂತರ 240 ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳನ್ನು ನಿಷ್ಕ್ರಿಯಗೊಳಿಸಿದ್ದಾರೆ ಎಂದು ತಿಳಿದುಬಂದಿದೆ.

**ಸಿಸಿಟಿವಿ ಕ್ಯಾಮೆರಾ ಸಂಪರ್ಕ ಕಟ್ ಮಾಡಿದ್ದೇಕೆ?:** ಸದ್ಯ ಈ ಕುರಿತಂತೆ ಆ ಇಬ್ಬರು ಸಿಬ್ಬಂದಿಗಳನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸುತ್ತಿದ್ದು, ಅವರನ್ನು ಚಿತ್ರದುರ್ಗದ ಮಂಜುನಾಥ್ (37) ಮತ್ತು ಉತ್ತರ ಪ್ರದೇಶದ ಅಬ್ದುಲ್ ಕಲಾಂ (19) ಎಂದು ಗುರುತಿಸಲಾಗಿದೆ. ಇನ್ನು, ಈ ಕುರಿತು ಸ್ಟಾಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಉದ್ಯೋಗಿಯೊಬ್ಬರು ಸಲ್ಲಿಸಿದ ದೂರಿನ ಪ್ರಕಾರ, ನಿಷ್ಕ್ರಿಯಗೊಳಿಸಿದ ಪ್ರವೇಶ ಕಾರ್ಡ್ ಬಳಸಿ ಸಿಸಿಟಿವಿ ನಿಯಂತ್ರಣ ಕೊಠಡಿಗೆ ಅನಧಿಕೃತ ಪ್ರವೇಶ ಪಡೆದು ಅಗತ್ಯ ಉಪಕರಣಗಳಿಗೆ ಹಾನಿ ಮಾಡಲು ಮುಂದಾಗಿದ್ದಾರೆ ಎಂದು ತಿಳಿಸಿದ್ದಾರೆ.

ತನಿಖೆ ವೇಳೆ ಪ್ರವೇಶ ದ್ವಾರಗಳು, ಕಾನ್ಕೋರ್ಸ್‌ಗಳು ಮತ್ತು ಕಾರ್ಪೊರೇಟ್ ಸ್ಟ್ಯಾಂಡ್‌ಗಳು ಸೇರಿದಂತೆ ಕ್ರೀಡಾಂಗಣದ ಹಲವಾರು ಪ್ರಮುಖ ಪ್ರದೇಶಗಳನ್ನು ಸ್ವಲ್ಪ ಸಮಯದವರೆಗೆ ನೇರ ಮೇಲ್ವಿಚಾರಣೆ ಮಾಡದೆ ಬಿಡಲಾಗಿದೆ ಎಂದು ತಿಳಿದುಬಂದಿದ್ದು, ಈ ವೇಳೆ ಈ ಆರೋಪಿಗಳು ನಿರ್ಬಂಧಿತ ಪ್ರದೇಶಗಳನ್ನು ಪ್ರವೇಶಿಸಿರುವುದು ಸಿಸಿಟಿವಿಗಳನ್ನು ನಾಶ ಮಾಡಿರುವ ದೃಶ್ಯಗಳು ಸೆರೆಯಾಗಿವೆ.

## ರಾಜ್ಯದ 8 ಜಿಲ್ಲೆಯ ಕ್ಷೇತ್ರ ಗಡಿ, ಸದಸ್ಯರ ಸಂಖ್ಯೆ ಮರುನಿಗದಿ; ಸರ್ಕಾರ ಅಧಿಸೂಚನೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಕೂಲಕ್ಕಾಗಿ ರಾಜ್ಯದ ಎಂಟು ಜಿಲ್ಲೆಗಳ ಜಿಲ್ಲಾ ಪಂಚಾಯತಿ ಕ್ಷೇತ್ರಗಳ ಗಡಿಗಳನ್ನು ಮರುವಿಂಗಡಣೆ ಮಾಡಿದ್ದು, ಚುನಾಯಿತ ಸದಸ್ಯರ ಸಂಖ್ಯೆಯನ್ನು ನಿಗದಿಪಡಿಸಿ ನೂತನ ಅಧಿಸೂಚನೆಯನ್ನು ಹೊರಡಿಸಿದೆ. ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಹಾಸನ, ಉತ್ತರ ಕನ್ನಡ, ಯಾದಗಿರಿ, ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಜಿ.ಪಂ. ಕ್ಷೇತ್ರಗಳ ಗಡಿಗಳನ್ನು ಮರು ವಿಂಗಡಣೆ ಮಾಡಲಾಗಿದೆ.

**ಕ್ಷೇತ್ರಗಳ ಪುನರ್ ವಿಂಗಡಣೆಗೆ ಕಾರಣವೇನು?**

ಈ ಹಿಂದೆ ಹೊರಡಿಸಲಾಗಿದ್ದ ಅಧಿಸೂಚನೆಯ ಬಳಿಕ ಹಲವು ಭೌಗೋಳಿಕ ಹಾಗೂ ಆಡಳಿತಾತ್ಮಕ ಬದಲಾವಣೆಗಳಾಗಿದ್ದವು. ಪ್ರಮುಖವಾಗಿ, ನಗರಾಭಿವೃದ್ಧಿ ಇಲಾಖೆಯು ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ (ಪಟ್ಟಣ ಪಂಚಾಯತಿ/ಪುರಸಭೆ) ಪರಿವರ್ತಿಸಿತ್ತು. ಕಂದಾಯ ಇಲಾಖೆಯು ಮಾಗಡಿ ಮತ್ತು ನೆಲಮಂಗಲ ತಾಲ್ಲೂಕುಗಳ ಭೌಗೋಳಿಕ ಗಡಿಗಳನ್ನು ಪುನರ್ ರಚನೆ ಮಾಡಿತ್ತು. ಈ ಬದಲಾವಣೆಗಳಿಂದಾಗಿ ಭೌಗೋಳಿಕ ವ್ಯಾಪ್ತಿಗೆ ಅನುಗುಣವಾಗಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಗಡಿಗಳನ್ನು ಪರಿಷ್ಕರಿಸುವುದು ಅನಿವಾರ್ಯವಾಗಿತ್ತು.



**ಹೊಸ ಅಧಿಸೂಚನೆಯ ಪ್ರಮುಖ ಅಂಶಗಳು ಏನು?**

ಜಿಲ್ಲಾ ಪಂಚಾಯತಿ ಕ್ಷೇತ್ರಗಳ ಕ್ರಮಸಂಖ್ಯೆಯಲ್ಲಿ ಗೊಂದಲವಾಗದಿರಲು ಹಾಗೂ ನಿರಂತರತೆ ಕಾಪಾಡುವ ಉದ್ದೇಶದಿಂದ, ಈ ಹಿಂದಿನ ಹಳೆಯ ಅಧಿಸೂಚನೆಗಳನ್ನು ಸರ್ಕಾರ ಹಿಂಪಡೆದಿದೆ.

ಬದಲಾಗಿ, ಹೊಸ ಕ್ರಮಸಂಖ್ಯೆಗಳೊಂದಿಗೆ ಕ್ಷೇತ್ರಗಳ ಹೆಸರು ಮತ್ತು ಭೌಗೋಳಿಕ ವ್ಯಾಪ್ತಿಯನ್ನು ಪ್ರಕಟಿಸಿದೆ. ಅಲ್ಲದೆ, ಪ್ರತಿ ಜಿ.ಪಂ. ಕ್ಷೇತ್ರದ ವ್ಯಾಪ್ತಿಗೆ ಯಾವೆಲ್ಲಾ ಗ್ರಾಮಗಳು ಬರುತ್ತವೆ ಎಂಬ ಸಂಪೂರ್ಣ ಪಟ್ಟಿಯನ್ನು ಸಹ ಅಧಿಸೂಚನೆಯಲ್ಲಿ ನೀಡಲಾಗಿದೆ.

**ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿವರ:**

ನೂತನ ಅಧಿಸೂಚನೆಯಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 28 ಏಕ ಸದಸ್ಯ ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ಗುರುತಿಸಲಾಗಿದೆ.

- **ಹೊಸಕೋಟೆ: 8 ಕ್ಷೇತ್ರಗಳು**
- **ದೇವನಹಳ್ಳಿ: 7 ಕ್ಷೇತ್ರಗಳು**
- **ದೊಡ್ಡಬಳ್ಳಾಪುರ: 7 ಕ್ಷೇತ್ರಗಳು**
- **ನೆಲಮಂಗಲ: 6 ಕ್ಷೇತ್ರಗಳು**

**ಗ್ರಾಮ ಪಂಚಾಯತಿ: ಮೇ 5ರಂದು ಪರಿಶೀಲನಾ ಅದಾಲತ್**

ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗವು ಏಪ್ರಿಲ್ 18ರಂದು ರಾಜ್ಯದ ಗ್ರಾಮ ಪಂಚಾಯತಿಗಳ ಚುನಾಯಿತ ಸದಸ್ಯ ಸ್ಥಾನಗಳ ಕರಡು ಪ್ರಕಟಣೆಯನ್ನು ಹೊರಡಿಸಿತ್ತು. ಈ ಕರಡಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು ಇದ್ದ ಗಡುವನ್ನು ಮೇ 2ರ ಸಂಜೆ 5.30ರವರೆಗೆ ವಿಸ್ತರಿಸಲಾಗಿದೆ.

ಅಲ್ಲದೆ, ರಾಜ್ಯದ ಎಲ್ಲಾ 31 ಜಿಲ್ಲೆಗಳ ಗ್ರಾಮ ಪಂಚಾಯತಿಗಳ ಸದಸ್ಯರ ಸಂಖ್ಯೆಯ ಕುರಿತು ಬಂದಿರುವ ಆಕ್ಷೇಪಣೆ ಹಾಗೂ ಅಹವಾಲುಗಳನ್ನು ಪರಿಶೀಲಿಸಲು ಏಪ್ರಿಲ್ 27ರಂದು ನಿಗದಿಪಡಿಸಲಾಗಿದ್ದ ಪರಿಶೀಲನಾ ಅದಾಲತ್ ಅನ್ನು ಮೇ 5ಕ್ಕೆ ಮುಂದೂಡಲಾಗಿದೆ.

**ಅದಾಲತ್ ನಡೆಯುವ ಸ್ಥಳ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಚೇರಿ, ಬಹುಮಹಡಿಗಳ ಕಟ್ಟಡ ಬೆಂಗಳೂರು.

### ಮೇ 5ರಂದು ನಡೆಯಲಿರುವ ಅದಾಲತ್‌ನ ಜಿಲ್ಲಾವಾರು ವೇಳಾಪಟ್ಟಿ

**ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 1:30ರವರೆಗೆ: ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ಧಾರವಾಡ, ಬೆಳಗಾವಿ, ಬಾಗಲಕೋಟೆ, ಗದಗ, ವಿಜಯಪುರ, ಹಾವೇರಿ ಮತ್ತು ಉತ್ತರಕನ್ನಡ ಜಿಲ್ಲೆಗಳಿಗೆ ಸಂಬಂಧಿಸಿದ ಅಹವಾಲುಗಳ ಪರಿಶೀಲನೆ. ಮಧ್ಯಾಹ್ನ 2:30 ರಿಂದ ಸಂಜೆ 5:00ರವರೆಗೆ: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ, ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ಕೊಡಗು, ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದ ಅಹವಾಲುಗಳ ಪರಿಶೀಲನೆ ನಡೆಯಲಿದೆ.**

# ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೆಳೆಯುತ್ತಿದೆ 'ಬೆಂಗಳೂರಿನ ಆತ್ಮ' ಶಿಲ್ಪ!

## ● ಕಲೆ ಸಂಸ್ಕೃತಿ ಮತ್ತು ಸೃಜನಶೀಲತೆಯನ್ನು ಸಾರುವ ಉದ್ದೇಶ ಹೊಂದಿದೆ ಈ ಶಿಲ್ಪ

• ಉದಯವಾಹಿನಿ, ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2ರ ಸೌಂದರ್ಯಕ್ಕೆ ಹೊಸ ಮೆರುಗು ನೀಡಲಾಗಿದೆ. ವಿಶ್ವಮಟ್ಟದಲ್ಲಿ ಖ್ಯಾತಿ ಗಳಿಸಿರುವ ಬೆಂಗಳೂರಿನ ಸಂಸ್ಕೃತಿ ಮತ್ತು ಸೃಜನಶೀಲತೆಯನ್ನು ಜಗತ್ತಿಗೆ ಸಾರುವ ಉದ್ದೇಶದಿಂದ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 'ಬೆಂಗಳೂರಿನ ಆತ್ಮ' ಹೆಸರಿನ ಸುಂದರ ಹಾಗೂ ಬೃಹತ್ ಕಲಾತ್ಮಕ ಶಿಲ್ಪವನ್ನು ಲೋಕಾರ್ಪಣೆ ಮಾಡಲಾಗಿದೆ.

ಬಯೋಕಾನ್ ಫೌಂಡೇಷನ್ ಮತ್ತು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ಸಹಯೋಗದಲ್ಲಿ ಈ ಕಲಾಕೃತಿಯನ್ನು ಟರ್ಮಿನಲ್-2ರ ಮುಂಭಾಗದಲ್ಲಿ ಸ್ಥಾಪಿಸಲಾಗಿದೆ. ಸ್ಪೇನ್‌ನ ಖ್ಯಾತ ಕಲಾಕಾರ ಜೌಮೆ ಪ್ಲೆನ್ಸಾ ಅವರ ಕಲ್ಪನೆಯಲ್ಲಿ ಮೂಡಿಬಂದಿರುವ ಈ ಶಿಲ್ಪವು ಪ್ರಯಾಣಿಕರ ಕಣ್ಮನ ಸೆಳೆಯುತ್ತಿದೆ.

**ಏನು ಈ ಕಲಾಕೃತಿಯ ವೈಶಿಷ್ಟ್ಯ?**

ಬಣ್ಣ ಬಳಿದಿರುವ ಸ್ಟೇನ್‌ಲೆಸ್ ಸ್ಟೀಲ್ ಲೋಹದಿಂದ ಈ ಕಲಾಕೃತಿಯನ್ನು ನಿರ್ಮಿಸಲಾಗಿದ್ದು, ಇದು 500 x 319 x 375 ಸೆಂ.ಮೀ ಗಾತ್ರ ಹೊಂದಿದೆ. ಬೆಂಗಳೂರು ನಗರವು ಹೇಗೆ ಭಿನ್ನ-ವಿಭಿನ್ನ ಸಂಸ್ಕೃತಿಗಳು, ನಾವೀನ್ಯತೆ ಹಾಗೂ ಸೃಜನಶೀಲತೆಯ ಸಂಗಮವಾಗಿದೆ ಎಂಬುದನ್ನು ಈ ಕಲಾಕೃತಿ ಪ್ರತಿನಿಧಿಸುತ್ತದೆ.



**ಸೌಂದರ್ಯಕ್ಕೆ ಹೊಸ ಮೆರುಗು**


**8ನೇ ಸ್ಥಾನದಿಂದ 5ನೇ ಸ್ಥಾನಕ್ಕೆ ಜಿಗಿತ**

**ಬಯೋಕಾನ್ ಗ್ರೂಪ್‌ನ ಸಿಎಸ್‌ಆರ್ ವಿಭಾಗವಾದ ಬಯೋಕಾನ್ ಫೌಂಡೇಷನ್ ತನ್ನ ನಗರಾಭಿವೃದ್ಧಿ ಮತ್ತು ಪರಿಸರ ಸಂರಕ್ಷಣಾ ಕಾರ್ಯಕ್ರಮಗಳ ಭಾಗವಾಗಿ ಈ ಯೋಜನೆಗೆ ಬೆಂಬಲ ನೀಡಿದೆ. ವಿಶ್ವದರ್ಜೆಯ ಮೂಲಸೌಕರ್ಯಗಳನ್ನು ವಿಶಿಷ್ಟ ವಿನ್ಯಾಸ ಮತ್ತು ಕಲಾತ್ಮಕ ಅಭಿವ್ಯಕ್ತಿಯೊಂದಿಗೆ ಸಂಯೋಜಿಸುವ ಮೂಲಕ, ಬಿಎಲ್‌ಆರ್ ವಿಮಾನ ನಿಲ್ದಾಣವು ಈಗಾಗಲೇ ಸಾಂಸ್ಕೃತಿಕ ಹೆಬ್ಬಾಗಿಲಾಗಿ ಗುರುತಿಸಿಕೊಂಡಿದೆ. ಈ ಕಲಾಕೃತಿಯ ಸ್ಥಾಪನೆ ಇದಕ್ಕೆ ಮತ್ತಷ್ಟು ಮೆರುಗು ನೀಡಿದೆ. ಸ್ಕೈಟ್ರ್ಯಾಕ್ಸ್‌ನ 2026ರ 'ವಿಶ್ವದ ಅತ್ಯುತ್ತಮ ಕಲಾ ವಿಮಾನ ನಿಲ್ದಾಣ' ಶ್ರೇಯಾಂಕ ಪಟ್ಟಿಯಲ್ಲಿ ಬೆಂಗಳೂರು ವಿಮಾನ ನಿಲ್ದಾಣವು 8ನೇ ಸ್ಥಾನದಿಂದ 5ನೇ ಸ್ಥಾನಕ್ಕೆ ಜಿಗಿದಿದ್ದು, ಇದು ಬಿಐಎಎಲ್‌ನ ಕಲಾ ಬದ್ಧತೆಗೆ ಹಿಡಿದ ಕನ್ನಡಿಯಾಗಿದೆ.**

ಇದರ ಕಲಾವಿದ ಜೌಮೆ ಪ್ಲೆನ್ಸಾ ಅವರು ಶಿಕಾಗೊ, ನ್ಯೂಯಾರ್ಕ್, ಲಂಡನ್, ಟೋಕಿಯೊ, ಬಾರ್ಸಿಲೋನಾ, ಮ್ಯಾಡ್ರಿಡ್ ಸೇರಿದಂತೆ ಜಗತ್ತಿನ ಬಹುದೊಡ್ಡ ಮಹಾನಗರಗಳಲ್ಲಿ ತಮ್ಮ ಸಾರ್ವಜನಿಕ ಕಲಾಕೃತಿಗಳ ಮೂಲಕ ಅಂತಾರಾಷ್ಟ್ರೀಯ ಮನ್ನಣೆ ಗಳಿಸಿದ್ದಾರೆ.

ಈ ಬಗ್ಗೆ ಮಾತನಾಡಿದ ಬಯೋಕಾನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್-ಶಾ, ನಗರವೊಂದರ ಅಭಿವೃದ್ಧಿ ಎಂದರೆ ಕೇವಲ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡುವುದಲ್ಲ. ಕಲೆ ಮತ್ತು ಸಂಸ್ಕೃತಿಯಲ್ಲೂ ಹೂಡಿಕೆ ಮಾಡುವುದು ಅತ್ಯಗತ್ಯ ಎಂಬುದು ಬಯೋಕಾನ್ ಫೌಂಡೇಷನ್‌ನ ನಂಬಿಕೆಯಾಗಿದೆ. ಇಂತಹ ಸಾರ್ವಜನಿಕ ಕಲಾಕೃತಿಗಳು ನಾಗರಿಕರು ಬಳಸುವ ಸ್ಥಳಗಳಿಗೆ ಮಾನವೀಯತೆಯ ಸ್ಪರ್ಶ ನೀಡುತ್ತವೆ. 'ಬೆಂಗಳೂರಿನ ಆತ್ಮ' ಕಲಾತ್ಮಕ ಶಿಲ್ಪದ ಸ್ಥಾಪನೆಗೆ ಕೈಜೋಡಿಸಿರುವುದು ನಮಗೆ ಹೆಮ್ಮೆಯ ವಿಚಾರ,'' ಎಂದು ತಿಳಿಸಿದರು.

ಬಿಐಎಎಲ್‌ನ ಎಂಡಿ ಮತ್ತು ಸಿಇಒ ಹರಿ ಮರಾರ್ ಪ್ರತಿಕ್ರಿಯಿಸಿ, ವಿಮಾನ ನಿಲ್ದಾಣದ ಟರ್ಮಿನಲ್ 2ನ್ನು ಕೇವಲ ಪ್ರಯಾಣದ ತಾಣವಾಗಿರಿಸದೆ ಸಾಂಸ್ಕೃತಿಕ ಹೆಬ್ಬಾಗಿಲಾಗಿ ಅಭಿವೃದ್ಧಿಪಡಿಸಲಾಗಿದೆ.



ಇಲ್ಲಿ ಕಲೆ ಮತ್ತು ಮೂಲಸೌಕರ್ಯಗಳ ಅದ್ಭುತ ಸಮ್ಮಿಲನವಿದೆ. ಜೌಮೆ ಪ್ಲೆನ್ಸಾ ಅವರ ಈ ಕಲಾಕೃತಿಯು, ಜಾಗತಿಕವಾಗಿ ಸಂಪರ್ಕ ಹೊಂದಿರುವ ಜೊತೆಗೆ ನಮ್ಮ ಮೂಲ ವೈವಿಧ್ಯತೆಯನ್ನು ಎತ್ತಿಹಿಡಿಯುತ್ತದೆ. ದಿನನಿತ್ಯ ವಿಮಾನ ನಿಲ್ದಾಣದ ಮೂಲಕ ಹಾದುಹೋಗುವ ಲಕ್ಷಾಂತರ ದೇಶ-ವಿದೇಶಿ ಪ್ರಯಾಣಿಕರಿಗೆ ಈ 'ಬೆಂಗಳೂರಿನ ಆತ್ಮ' ಶಿಲ್ಪವು ಉದ್ಯಾನ ನಗರಿಯ ಮರೆಯಲಾಗದ ನೆನಪನ್ನು ಕಟ್ಟಿಕೊಡಲಿದೆ,'' ಎಂದು ಹೇಳಿದರು.

## ಅಂತರಾಳದಿಂದ... EDITORIAL

# ಒಳ ಮೀಸಲು: ಸರ್ಕಾರದ ಸೂತ್ರ ಕೊರತೆಗಳಿದ್ದರೂ ಸಮಾಧಾನಕರ





ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸಬೇಕೆಂಬ ನಾಲ್ಕು ದಶಕಗಳ ಹಕ್ಕೊತ್ತಾಯಕ್ಕೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೊನೆಗೂ ದೃಢ ನಿರ್ಧಾರ ಕೈಗೊಂಡಿದೆ. ಇಂತಹದೊಂದು ನಿರ್ಣಯಕ್ಕೆ ಕಾನೂನಿನ ಹಲವು ಕಟ್ಟಳೆಗಳು ಅಡ್ಡಿಯಾಗಿದ್ದವು. ಇಂದಿರಾ ಸಾಹಿ ಪ್ರಕರಣದಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್ ಒಟ್ಟು ಮೀಸಲಾತಿ ಪ್ರಮಾಣ ಶೇ 50ರಷ್ಟನ್ನು ಮೀರುವಂತಿಲ್ಲ ಎಂದು ಹೇಳಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವುದಕ್ಕೆ ಮುನ್ನ ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿಗೆ ಶೇ 15ರಷ್ಟು ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ 3ರಷ್ಟಿದ್ದ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ 17ಕ್ಕೆ ಹಾಗೂ ಶೇ 7ಕ್ಕೆ ಏರಿಸಿತ್ತು. ಒಳಮೀಸಲಾತಿಯನ್ನೂ ಜಾರಿ ಮಾಡಿತ್ತು. ಹೀಗಾಗಿ, ಒಟ್ಟು ಮೀಸಲಾತಿ ಪ್ರಮಾಣ ಶೇ 56ಕ್ಕೆ ಮುಟ್ಟಿತ್ತು. ಅದರ ಜಾರಿಗೆ, ಇಂದಿರಾ ಸಾಹಿ ಪ್ರಕರಣದ ತೀರ್ಪು ಅಡ್ಡಿಯಾಗಿತ್ತು. 2024ರ ಆಗಸ್ಟ್ 1ರಂದು ಪ್ರಕರಣವೊಂದರಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗಿದೆ ಎಂದು ಹೇಳಿತ್ತು. ಅದರ ಅನುಷ್ಠಾನಕ್ಕೆ ಮುಂದಾದ ಕಾಂಗ್ರೆಸ್ ಸರ್ಕಾರ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅಧ್ಯಕ್ಷತೆಯಲ್ಲಿ ಏಕವ್ಯಕ್ತಿ ಆಯೋಗ ರಚಿಸಿತು. ಆಯೋಗದ ಶಿಫಾರಸುಗಳನ್ನು ಪರಿಷ್ಕರಿಸಿ, ಪರಿಶಿಷ್ಟ ಜಾತಿಗೆ ಶೇ 17ರಷ್ಟು ಮೀಸಲಾತಿ ಆಧಾರದಲ್ಲಿ ಎಡಗೈ-ಬಲಗೈ ಸಮುದಾಯಗಳಿಗೆ ತಲಾ ಶೇ 6 ಹಾಗೂ ಸ್ಪೃಶ್ಯ ಜಾತಿಗಳಿಗೆ ಶೇ 5ರಷ್ಟು ಮೀಸಲಾತಿ ನೀಡಲು ತೀರ್ಮಾನಿಸಿತು.

ಲಭ್ಯ ಮೀಸಲಾತಿ ಪ್ರಮಾಣದಲ್ಲಿ ಉಪವರ್ಗೀಕರಣಕ್ಕೆ ಅವಕಾಶ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿತ್ತೇ ವಿನಾ, ಮೀಸಲು ಹೆಚ್ಚಳಕ್ಕೆ ಅವಕಾಶ ಕಲ್ಪಿಸಿರಲಿಲ್ಲ. ಹಾಗಾಗಿ, ಶೇ 17ರ ಲೆಕ್ಕಾಚಾರದಲ್ಲಿ ಒಳಮೀಸಲಾತಿ ಹಂಚಿಕೆ ತಪ್ಪು ನಡೆಯಾದುದರಿಂದ ಅದು ಊರ್ಜಿತವಾಗಲಿಲ್ಲ. ಪರಿಶಿಷ್ಟ ಜಾತಿಗೆ ಮೀಸಲಾದ ಒಟ್ಟು ಹುದ್ದೆಗಳನ್ನು ಒಳಮೀಸಲಾತಿ ಅನುಸಾರ ಹಂಚಿಕೆ ಮಾಡಲು ರೂಪಿಸಲಾದ ರೋಸ್ಟರ್ ಬಿಂದು ಸೂತ್ರದಿಂದ ತಮಗೆ ಅನ್ಯಾಯವಾಗಲಿದೆ ಎಂದು ಬಲಗೈ ಸಮುದಾಯ ಆಕ್ಷೇಪ ಎತ್ತಿತು. ಅಲೆಮಾರಿಗಳಿಗೆ ಮೀಸಲಾತಿ ಕಲ್ಪಿಸಿಲ್ಲ ಎಂಬ ವಿಷಯವೂ ಕೋರ್ಟ್ ಮೆಟ್ಟಿಲೇರಿತು. ರಾಜ್ಯ ಸರ್ಕಾರ ಹಿಂದೆ ಜಾರಿ ಮಾಡಿದ್ದ 6:6:5ರ ಅನುಪಾತದಲ್ಲಿ ನೇಮಕಾತಿ ಮಾಡಕೂಡದು, ಇದರಿಂದ ತಮಗೆ ವಂಚನೆಯಾಗಲಿದೆ ಎಂದು ಬಲಗೈ ಸಮುದಾಯದವರು ವಿರೋಧ ವ್ಯಕ್ತಪಡಿಸಿದ್ದರು. ಸದ್ಯದ ಏಟಿನಿಂದ ತಪ್ಪಿಸಿಕೊಳ್ಳುವ ಒಳದಾರಿಯನ್ನು ಏಪ್ರಿಲ್ 24ರಂದು ನಡೆದ ಸಂಪುಟ ಸಭೆಯಲ್ಲಿ ಸರ್ಕಾರ ಕಂಡುಕೊಂಡಿದೆ. ಶೇ 15ರ ಮೀಸಲಾತಿಯಲ್ಲಿಯೇ ಪರಿಶಿಷ್ಟ ಜಾತಿಯಲ್ಲಿ ಗ್ರೂಪ್ 'ಎ' (ಎಡಗೈ), ಗ್ರೂಪ್ 'ಬಿ' (ಬಲಗೈ), ಗ್ರೂಪ್ 'ಸಿ' (ಸ್ಪೃಶ್ಯ) ಎಂದು ವರ್ಗೀಕರಿಸಲಾಗಿದೆ. ಎಡಗೈ ಹಾಗೂ ಬಲಗೈ ಜಾತಿಯವರಿಗೆ ತಲಾ ಶೇ 5.25 ಹಾಗೂ ಸ್ಪೃಶ್ಯ ಮತ್ತು ಅಲೆಮಾರಿ ಸಮುದಾಯಗಳಿಗೆ ಶೇ 4.5ರಷ್ಟು ಹಂಚಿಕೆ ಮಾಡಲಾಗಿದೆ. ರೋಸ್ಟರ್ ಬಿಂದು ಗೊಂದಲ ಪರಿಹಾರಕ್ಕೆ ಹೊಸ ಸೂತ್ರ ರೂಪಿಸಲಾಗಿದೆ. ಯಾವುದೇ ವೃಂದದ ಹುದ್ದೆಗಳಲ್ಲಿ 3ಕ್ಕಿಂತ ಕಡಿಮೆ ಪರಿಶಿಷ್ಟ ಜಾತಿ ಬಿಂದುಗಳು ಲಭ್ಯವಾಗುತ್ತಿದ್ದರೆ ಆ ಹುದ್ದೆಯನ್ನು 'ಪರಿಶಿಷ್ಟ ಜಾತಿ ಸಾಮಾನ್ಯ' ಎಂದು ಪರಿಗಣಿಸಲು ನಿರ್ಧರಿಸಲಾಗಿದೆ. ಕಡಿಮೆ ಹುದ್ದೆಗಳು ಇದ್ದ ಪಕ್ಷದಲ್ಲಿ ಮೂರು ಗ್ರೂಪ್‌ನವರು ಸ್ಪರ್ಧಾತ್ಮಕವಾಗಿ ಈ ಹುದ್ದೆಗಳನ್ನು ಪಡೆದುಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಗ್ರೂಪ್ 'ಸಿ' ಅಡಿ ಸ್ಪೃಶ್ಯ ಜಾತಿಗಳ ಜತೆಗೆ ಸೇರಿಸಲಾಗಿರುವ ಅಲೆಮಾರಿ ಸಮುದಾಯಕ್ಕೆ ಶೇ 20ರಷ್ಟನ್ನು ಮೀಸಲಿಡಲಾಗುತ್ತದೆ ಎಂದು ಸರ್ಕಾರ ಹೇಳಿದೆ.

ನೇಮಕಾತಿ ಪ್ರಕ್ರಿಯೆಯಡಿ ಕಡಿಮೆ ಹುದ್ದೆಗಳಿದ್ದಲ್ಲಿ ರೋಸ್ಟರ್ ಬಿಂದು ಪದ್ಧತಿಯಿಂದಾಗಿ ಎಡಗೈ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ಸಿಗುತ್ತದೆ ಎಂಬ ಬಲಗೈ ಸಮುದಾಯದ ಆಕ್ಷೇಪ ತಣಿಸಲು ನ್ಯಾಯದ ಸೂತ್ರ ರೂಪಿಸಿದ ಸರ್ಕಾರ ಎಲ್ಲರನ್ನೂ ಓಲೈಸಲು ಯತ್ನಿಸಿದೆ.

ಪರಿಶಿಷ್ಟ ಜಾತಿಯ ಮೀಸಲಾತಿಯಲ್ಲಿ ಹೆಚ್ಚಿನ ಸೌಲಭ್ಯ ದಕ್ಕಿಸಿಕೊಂಡಿರುವ ಬಲಗೈಗೆ ಮೀಸಲಾತಿ ಪ್ರಮಾಣ ಕಡಿಮೆ ಮಾಡಬೇಕಿತ್ತು. ಪರಿಶಿಷ್ಟರಲ್ಲೂ ತೀರಾ ಅಮಾನವೀಯ ಅಸ್ಪೃಶ್ಯತೆಗೆ ಗುರಿಯಾಗಿರುವ ಎಡಗೈ ಗುಂಪಿನ ಜಾತಿಗೆ ಹೆಚ್ಚಿನ ಮೀಸಲಾತಿ ಕೊಟ್ಟಿದ್ದರೆ ಸಾಮಾಜಿಕ ನ್ಯಾಯ ಕಲ್ಪಿಸಿದಂತಾಗುತ್ತಿತ್ತು. ಮೀಸಲಾತಿಯಲ್ಲಿ ಪ್ರಧಾನ ಲಾಭಪಡೆದ ಬೋವಿ ಮತ್ತು ಲಂಬಾಣಿಯಂತಹ ಪ್ರಭಾವಿ ಜಾತಿಗಳ ಗುಂಪಿನಲ್ಲಿ ಅಲೆಮಾರಿಗಳನ್ನು ಸೇರಿಸಿರುವುದು ಅನ್ಯಾಯ. ಊರು-ಸೂರು ಎರಡೂ ಇಲ್ಲದ ತಬ್ಬಲಿ ಸಮುದಾಯಗಳ ಪರವಾಗಿ ನಿಲ್ಲುವುದು ಸರ್ಕಾರದ ಕರ್ತವ್ಯವಾಗಬೇಕಿತ್ತು. ಗ್ರೂಪ್ 'ಸಿ'ಯಲ್ಲಿ ಶೇ 20ರಷ್ಟು ಹುದ್ದೆಗಳನ್ನು ಮೀಸಲಿಡುವುದು ಒಳ್ಳೆಯ ತೀರ್ಮಾನವಾದರೂ, ಅಂಚಿನಲ್ಲೇ ಉಳಿದಿರುವ ಅಲೆಮಾರಿಗಳಿಗೆ ಶತಮಾನಗಳ ಅನ್ಯಾಯ ಸರಿಪಡಿಸುವ ಕ್ರಮವಂತೂ ಅಲ್ಲ. ಮೀಸಲಾತಿಯ ಗೊಂದಲಕ್ಕೆ ತೆರೆ ಬಿದ್ದಿರುವುದರಿಂದಾಗಿ ನೇಮಕಾತಿಗೆ ದಾರಿ ತೆರೆದಿದೆ. ಸರ್ಕಾರ ವಿಳಂಬ ಮಾಡದೇ 56,432 ಹುದ್ದೆಗಳ ಭರ್ತಿಗೆ ತುರ್ತು ಕ್ರಮ ತೆಗೆದುಕೊಳ್ಳಬೇಕು. ಪ್ರಣಾಳಿಕೆಯಲ್ಲಿ ವಾಗ್ದಾನ ಮಾಡಿದಂತೆ. 2.84 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು.

# ರಾಮಾಯಣ



**ಸೂರ್ಯಾಸ್ತಸಮಯದಲ್ಲಿ ಮಾರುತಿಯು ಸೂಕ್ಷ್ಮದೇಹಿಯಾಗಿ ಲಂಕೆಯನ್ನು ಹೊಕ್ಕಿದ್ದು**

• ಹಿಂದಿನ ಸಂಚಿಕೆಯಿಂದ

## ಸುಂದರಕಾಂಡ

ಕೊನೆಗೆ, ನಾನು ಎಂದಿನ ರೂಪಿನಲ್ಲಿಯೇ ಇದ್ದರೆ ಕೆಲಸವು ಕೆಡುತ್ತದೆಂದು ಭಾವಿಸಿ ದೇಹವನ್ನು ಚಿಕ್ಕದಾಗಿಸಿಕೊಂಡು ಬೆಕ್ಕಿನಷ್ಟು ಗಾತ್ರದವನಾಗಿ ವೇಗವಾಗಿ ಹೊರಟು, ಇಂದಿರಾವರನಾದ ರಾಮಪುರದರಸನ ಪಾದಗಳನ್ನು ನೆನೆಯುತ್ತ ಲಂಕಾನಗರದ ಸುತ್ತಲ ಕೋಟೆಯನ್ನು ಹತ್ತಿ ಆ ಕಡೆ ಇಳಿದ.

**ಲಂಕಿಣಿಯನ್ನು ಕೊಂದು ಲಂಕೆಯ ಒಳಹೊಕ್ಕ ಆಂಜನೇಯನು ರಾವಣನ ಅರಮನೆಗೆ ಬಂದುದು**

ಅಗಜೆಯೇ, ಏನು ಹೇಳಲಿ, ಮರುತಸುತನು ಆ ರಾತ್ರಿಯಲ್ಲಿ ರಾಕ್ಷಸರ ನಗರವನ್ನು ನೋಡಲೆಂದು ಬೆಕ್ಕಿನಷ್ಟು ಗಾತ್ರವನ್ನು ತಳೆದು ಕೋಟೆಗೋಡೆಯನ್ನು ಹತ್ತಿ ಇಳಿದು, ಸೀತೆಯನ್ನು ಹುಡುಕಬೇಕೆಂದು ಮೆಲ್ಲನೆ ರತ್ನರಚಿತವೆನ್ನಿಸುವ ಆಳವೇರಿಯನ್ನು ಹಿಡಿದುಕೊಂಡು ಅಕ್ಕಪಕ್ಕಗಳನ್ನು ಗಮನಿಸುತ್ತ ಮುಂದೆ ಸಾಗಿದ. ಕತ್ತಲೆಯ ಮೊತ್ತವನ್ನು ಹಿಂದೆ ಸರಿಸಿ, ಸೂರ್ಯಚಂದ್ರತಾರಗೆಗಳ ಬೆಳಕು ಒಗ್ಗೂಡಿದಂತೆ ಸುತ್ತಲೂ ಬೆಳಕು ಹಬ್ಬಿ ಜ್ಯೋತಿರ್ಲೋಕದಂತೆ ವಿಲಾಸದಿಂದ ಕೂಡಿರುವುದನ್ನು ಕಂಡ ಕಪಿರಾಯನು ಬೆರಗಾಗಿ 'ರಘುವೀರ ದಾಶರಥಿ ಲಕ್ಷ್ಮಣಾಗ್ರಜ' ಎಂದು ಉದ್ಗರಿಸಿದ.

ಇದೇನು ಭೂಮಿಯ ಮೇಲಿರುವ ಬ್ರಹ್ಮ ಮಾನಸಸೃಷ್ಟಿಯೋ, ಪಾರ್ವತೀರಮಣನ ಕುಡಿನೋಟದ ಹೊಳಪೋ, ಶ್ರೀ ಹರಿಯ ಕರುಣಾರಸದ ಹರಿವೋ, ದೇವೇಂದ್ರನ ವಿಲಾಸದ ಕಡಲೋ - ಇಂತಹುದನ್ನು ತಾನೆಂದೂ ಕಂಡು ಕೇಳಿರಲಿಲ್ಲ - ಇದು ಮೂರು ಲೋಕಕ್ಕೂ ಅಚ್ಚರಿಯನ್ನುಂಟುಮಾಡುವಂತಹುದು ಎಂದು ಹನುಮನು ಬೆರಗಾಗಿ ನೋಡಿದ. ಆ ಪ್ರಾಕಾರದ ಬೆಳಕಿನಲ್ಲಿ ಮೆಲ್ಲನೆ ಉಲ್ಲಾಸದಿಂದ ಎಡಬಲವನ್ನು ನೋಡುತ್ತ ಮುಂದೆ ಸಾಗಿ ನಗರದ ಅಗಸೆ ಬಾಗಿಲಲ್ಲಿ ಇಳಿದು ಮಣಿಖಚಿತವಾದ ಭೂಮಿಯ ಮೇಲೆ ನಿಂತಿರಲು, ಅಲ್ಲಿ ರಕ್ಕಸಸಮೂಹವು ಮೈಮರೆತು ಮಲಗಿರುವುದು ಕಾಣಿಸಿತು. ಅವರಿಗೆ ಎಚ್ಚರವಾಗದಂತೆ ಮೆಟ್ಟಿಂಗಾಲನ್ನಿಡುತ್ತ ಜೋರಾಗಿ ಸಾಗುವ ಆಲೋಚನೆ ಅವನ ಮನಸ್ಸಿನಲ್ಲಿ ಮೂಡಿತು. ಆದರೆ, ಕೆದರಿದ ಕೆಂಚು ಕೂದಲು, ಕೆಂಡವನ್ನು ಮುಕ್ಕುಳಿಸುವ ಬೆದರುಗಣ್ಣುಗಳು, ಕೋರೆದಾಡೆಗಳು, ಡೊಳ್ಳು ಹೊಟ್ಟೆ, ಕಾಳಮೇಘದಂತಹ ನೀಳ ದೇಹದಿಂದ ಕೂಡಿದ ಮದಮುಖಿಯೊಬ್ಬಳು ಯಮನನ್ನು ಹೆತ್ತವಳಂತೆ ನಿಂತುಕೊಂಡು ಘುಡುಘುಡಿಸುತ್ತ ಬರಸಿಡಿಲಿನ ಬಿರುನುಡಿಗಳಿಂದ ಮರುತಾತ್ಮಜನನ್ನು ಬೆದರಿಸಿದಳು. ''ನೆನೆಸಿಕೊಂಡರೂ ಮುಮ್ಮೂರ್ತಿಗಳೂ ಬೆದರುತ್ತಾರೆ, ಅಂಥದ್ದರಲ್ಲಿ ವೀರನಾದ ದಶಮೌಳಿಯ ರಾಜಧಾನಿಯನ್ನು ಈ ನಡುರಾತ್ರಿಯಲ್ಲಿ ಹೊಕ್ಕು ನಿರ್ಭಯವಾಗಿ ಓಡಾಡುತ್ತಿರುವ ಕಪಿಯೇ, ನೀನಾರು, ಹೇಳು'' ಎಂದು ಆ ದಾನವಿಯು ಗರ್ಜಿಸಿದಳು. ಶಾಂತಿಕರ್ಮದಲ್ಲಿ ಬೇತಾಳ ಮೂಡಿದ ಹಾಗೆ ಮುಂದೆ ನಿಂತಿರುವ ರಕ್ಕಸಿಯನ್ನು ಕಂಡು, ಇವಳನ್ನು ನಿವಾರಿಸುವ ಬಗೆ ಹೇಗೆ ಎಂದು ಆಲೋಚಿಸುತ್ತ. ಮುಂದೇನೂ ತೋಚದೆ, ತಾನು ನಿಷ್ಠುರವಾದರೆ ಕೆಲಸ ಕೆಡಬಹುದು, ಹಾಗಾಗಿ ನಯವಾದ ಮಾತುಗಳಿಂದ ಪಾರಾಗಬೇಕೆಂದು ಯೋಚಿಸಿ, ಅತ್ಯಂತ ಮೆಲುವಾಗಿ, ''ಕಾಡುಮೇಡುಗಳಲ್ಲಿನ ಮರಗಳಲ್ಲಿ ಹಣ್ಣುಹಂಪಲುಗಳನ್ನು ತಿಂದು ಹೊಟ್ಟೆ ಹೊರೆದುಕೊಳ್ಳುವ ಕಪಿಗಳಿಗೆ ಇದು ದನುಜ ಮನುಜ ಮುಂತಾದವರ ಪಟ್ಟಣ ಎಂಬ ತಿಳಿವಳಿಕೆ ಎಲ್ಲಿಯದು?

**ಮುಂದುವರಿಯುವುದು...**

# ಪೈಲ್ವಾನರ ಗಟ್ಟಿಮುಟ್ಟಾದ ದೇಹಕ್ಕೆ ಪಾಯದ ಸತ್ವ




ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

**ಆಹಾರವು ಕೇವಲ ಹಸಿವನ್ನು ನೀಗಿಸುವ ಸಾಧನವಲ್ಲ; ಅದು ಪ್ರತಿಯೊಬ್ಬರ ನಂಬಿಕೆ ಮತ್ತು ಜೀವನಶೈಲಿಯ ಪ್ರತಿಬಿಂಬ. ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ, ಅಖಾಡದ ಪೈಲ್ವಾನರು ತಮ್ಮ ದೇಹವನ್ನು ವಜ್ರದಂತೆ ಸದೃಢಗೊಳಿಸಿಕೊಳ್ಳಲು ಕೆಲವು ವಿಶಿಷ್ಟ ಆಹಾರ ಕ್ರಮಗಳನ್ನು ಅನುಸರಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಂತಹ ಸತ್ವಭರಿತ ಆಹಾರಗಳಲ್ಲಿ ಪಾಯ ಅತ್ಯಂತ ಪ್ರಮುಖವಾದುದು. ಇಂದು ಜಾಗತಿಕವಾಗಿ ಇದನ್ನು ಬೋನ್ ಬ್ರಾತ್ ಎಂದು ಕರೆಯಲಾಗುತ್ತಿದ್ದು, ಇದು ಶತಮಾನಗಳಿಂದಲೂ ಅಖಾಡದ ವೀರರ ಶಕ್ತಿಯ ರಹಸ್ಯವಾಗಿತ್ತು.**

ಪಾಯ ಎಂದರೆ ಆಡು ಅಥವಾ ಕುರಿಯ ಕಾಲುಗಳನ್ನು ಮಸಾಲೆಗಳೊಂದಿಗೆ ದೀರ್ಘಕಾಲ ಮಂದ ಉರಿಯಲ್ಲಿ ಬೇಯಿಸಿ ಸಿದ್ಧಪಡಿಸುವ ಸಾರ. ಈ ಪ್ರಕ್ರಿಯೆಯಲ್ಲಿ ಮೂಳೆಯ ಮಜ್ಜೆ ಮತ್ತು ಅಂಗಾಂಶಗಳಲ್ಲಿರುವ ಪ್ರೋಟೀನ್ ಹಾಗೂ ಅಮೈನೋ ಆಮ್ಲಗಳು ನೀರಿನಲ್ಲಿ ಸಂಪೂರ್ಣವಾಗಿ ಲೀನವಾಗುತ್ತವೆ. ಇದು ದೇಹಕ್ಕೆ ತಕ್ಷಣದ ಚೈತನ್ಯ ನೀಡುವ ನೈಸರ್ಗಿಕ ಶಕ್ತಿವರ್ಧಕವಾಗಿ ಕೆಲಸ ಮಾಡುತ್ತದೆ.

ಕುಸ್ತಿ ದೈಹಿಕ ಸಂಘರ್ಷದ ಕ್ರೀಡೆಯಾದ್ದರಿಂದ ಪೈಲ್ವಾನರಿಗೆ ಮೂಳೆಗಳ ಬಲ ಅತಿ ಮುಖ್ಯ. ಪಾಯದಲ್ಲಿ ಹೇರಳವಾಗಿರುವ ಕ್ಯಾಲ್ಸಿಯಂ, ಮೆಗ್ನೀಸಿಯಂ ಮತ್ತು ರಂಜಕದ ಸತ್ವಗಳು ಮೂಳೆಗಳನ್ನು ಒಳಗಿನಿಂದ ಗಟ್ಟಿಗೊಳಿಸುತ್ತವೆ. ಪೂರ್ವಜರು ಈ ಸಾರವನ್ನು ನಿಯಮಿತವಾಗಿ ಸೇವಿಸುತ್ತಿದ್ದರಿಂದಲೇ, ಎಂತಹ ಕಠಿಣ ಪಟ್ಟುಗಳಿಗೂ ಮಣಿಯದ ಉಕ್ಕಿನ ಮೂಳೆ ಗಳನ್ನು ಹೊಂದಲು ಸಾಧ್ಯವಾಗಿತ್ತು.




ಅಖಾಡದ ಕಸರತ್ತುಗಳು ಕೀಲುಗಳ ಮೇಲೆ ವಿಪರೀತ ಒತ್ತಡ ಹೇರುತ್ತವೆ. ಪಾಯದಲ್ಲಿ ಸಮೃದ್ಧವಾಗಿರುವ ಕೊಲಾಜೆನ್ ಮತ್ತು ಗ್ಲುಕೋಸಮೈನ್ ಅಂಶಗಳು ಕೀಲುಗಳ ನಡುವೆ ನೈಸರ್ಗಿಕ ಲೂಬ್ರಿಕೆಂಟ್ ಆಗಿ ಕಾರ್ಯನಿರ್ವಹಿಸುತ್ತವೆ. ಇದು ಕೀಲುಗಳ ಸವೆತವನ್ನು ತಡೆದು, ದೀರ್ಘಕಾಲದವರೆಗೆ ಶರೀರವು ಚಟುವಟಿಕೆಯಿಂದ ಇರುವಂತೆ ನೋಡಿಕೊಳ್ಳುತ್ತದೆ.

ಕಠಿಣ ವ್ಯಾಯಾಮದ ನಂತರ ಸ್ನಾಯುಗಳು ದಣಿದಿರುತ್ತವೆ. ಪಾಯದಲ್ಲಿರುವ ಗ್ಲೈಸಿನ್ ಮತ್ತು ಪ್ರೋಲಿನ್ ಎಂಬ ಅಮೈನೋ ಆಮ್ಲಗಳು ಸ್ನಾಯು ಅಂಗಾಂಶಗಳನ್ನು ತಕ್ಷಣವೇ ರಿಪೇರಿ ಮಾಡಿ ಪುನಶ್ಚೇತನಗೊಳಿಸುತ್ತವೆ. ಇದು ಕೃತಕ ಪ್ರೋಟೀನ್ ಸಪ್ಲಿಮೆಂಟ್‌ಗಳಿಗಿಂತ ಹೆಚ್ಚು ಸುರಕ್ಷಿತ ಮತ್ತು ನೈಸರ್ಗಿಕ ಆಯ್ಕೆಯಾಗಿದೆ.

ಸದೃಢ ದೇಹಕ್ಕೆ ಉತ್ತಮ ಜೀರ್ಣಕ್ರಿಯೆಯೇ ಅಡಿಪಾಯ. ಪಾಯದಲ್ಲಿರುವ ಜೆಲಾಟಿನ್ ಅಂಶವು ಹೊಟ್ಟೆಯ ಆರೋಗ್ಯವನ್ನು ಸುಧಾರಿಸುತ್ತದೆ ಮತ್ತು ಪೋಷಕಾಂಶಗಳನ್ನು ವೇಗವಾಗಿ ಹೀರಲು ಸಹಾಯ ಮಾಡುತ್ತದೆ.

ಅಲ್ಲದೆ, ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ ಕ್ರೀಡಾಪಟುಗಳನ್ನು ಅನಾರೋಗ್ಯದಿಂದ ರಕ್ಷಿಸುತ್ತದೆ.

ನಮ್ಮ ಹಿರಿಯರು ಕಂಡುಕೊಂಡ ಇಂತಹ ಆಹಾರ ಪದ್ಧತಿಗಳ ಹಿಂದೆ ಆಳವಾದ ವಿಜ್ಞಾನ ಅಡಗಿದೆ. ವೈಯಕ್ತಿಕ ಆಹಾರದ ಆಯ್ಕೆಗಳು ಯಾವುದೇ ಇರಲಿ, ದೇಹದ ದಾರ್ಢ್ಯತೆಗಾಗಿ ಅವರು ಕಂಡುಕೊಂಡ ಇಂತಹ ನೈಸರ್ಗಿಕ ಶಕ್ತಿಯ ಮೂಲಗಳು ಇಂದಿನ ಯುವ ಪೀಳಿಗೆಗೂ ಮಾದರಿಯಾಗಿವೆ. ಪೈಲ್ವಾನರ ದೈತ್ಯ ಪ್ರತಿಭೆ ಮತ್ತು ಸ್ಥಿರತೆಗೆ ಇಂತಹ ಸತ್ವಭರಿತ ಆಹಾರಗಳೇ ಭದ್ರ ಬುನಾದಿಯಾಗಿದ್ದವು.





ನಾ ಕಂಡಂತೆ
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಅ.ನ.ಕೃ

## (ಅ.ನ. ಕೃಷ್ಣರಾಯರು)

**ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಮೊದಲ ಅಧ್ಯಕ್ಷ**

'ಅನಕೃ' ಎಂದೇ ಸಾಹಿತ್ಯ ಲೋಕದಲ್ಲಿ ಚಿರಪರಿಚಿತರಾಗಿದ್ದ ಅರಕಲಗೂಡು ನರಸಿಂಗರಾವ್ ಕೃಷ್ಣರಾವ್ ಅವರು ಹೆಸರಾಂತ ಕಾದಂಬರಿಕಾರರು. 'ಕಾದಂಬರಿ ಸಾರ್ವಭೌಮ' ಎನಿಸಿಕೊಂಡಿದ್ದ ಅವರು ಕನ್ನಡದ ಜನಪ್ರಿಯ ಕಾದಂಬರಿಕಾರರು. ಪ್ರಗತಿಶೀಲ ಸಾಹಿತ್ಯದ ಪ್ರಮುಖ ಲೇಖಕರು. ತಂದೆ ನರಸಿಂಗರಾವ್, ತಾಯಿ ಅನ್ನಪೂರ್ಣಮ್ಮ. 1908 ರ ಮೇ 9 ರಂದು ಜನಿಸಿದ ಅವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಕೋಲಾರದಲ್ಲಿ ಮುಗಿಸಿದರು. ಬೆಂಗಳೂರಿನಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ದೇಶೀಯ ವಿದ್ಯಾಶಾಲೆಯಲ್ಲಿ ಪಡೆದರು. ಮೆಟ್ರಿಕ್ ಓದುತ್ತಿದ್ದಾಗ ಶಾಂತಿನಿಕೇತನಕ್ಕೆ ಹೋಗಿ ಬಂದರು.

**ಬರಹ ಮಾಡಿಯೇ ಬದುಕಿದವರು ಅನಕೃ.**

ಅನಕೃ ಹುಟ್ಟಿದ್ದು ಕೋಲಾರ ಜಿಲ್ಲೆ ಹಾಗೂ ಕುಟುಂಬದ ಮೂಲ ಹಾಸನ ಜಿಲ್ಲೆಯ ಅರಕಲಗೂಡು, ತಂದೆ ನರಸಿಂಗರಾಯರು ಮತ್ತು ತಾಯಿ ಅನ್ನಪೂರ್ಣಮ್ಮನವರು. ಅನಕೃ ಮಹಾನ್ ಕನ್ನಡಾಭಿಮಾನಿಯಾಗಿದ್ದರು. ಕರ್ನಾಟಕದಲ್ಲಿ ಎಲ್ಲಾ ಭಾಷೆಯ ಜನರೂ ಇರಲಿ, ಆದರೆ ಅವರು ನಮ್ಮೊಂದಿಗೆ ಹೊಂದಿಕೊಂಡು ಹೋಗಲಿ, ಮಾತೃ ಭಾಷೆಯನ್ನು ಮೆಟ್ಟಿ ಮುನ್ನುಗ್ಗುವುದು ಸರಿಯಲ್ಲ ಎಂಬುದು ಅವರ ಮೂಲತತ್ವವಾಗಿತ್ತು.

ತಮ್ಮ ಜೀವಮಾನದುದ್ದಕ್ಕೂ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಿದರು. ಅದಕ್ಕಾಗಿ ಕರ್ನಾಟಕದಲ್ಲೆಲ್ಲಾ ಸುತ್ತಾಡಿದರು. ತಮ್ಮ ಚಳುವಳಿ, ಭಾಷಣಗಳ ಮೂಲಕ ಕನ್ನಡಿಗರನ್ನು ಹುರಿದುಂಬಿಸಿದರು. ಚಿ ಕನ್ನಡಿಗರಲ್ಲಿ ಸುಪ್ತವಾಗಿದ್ದ ಸ್ವಾಭಿಮಾನವನ್ನು ಜಾಗೃತಗೊಳಿಸಿದರು. ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳು ಸಿಗದಿದ್ದ ಕಾಲದಲ್ಲಿ ಅನಕೃ ಅದಕ್ಕಾಗಿ ಹೋರಾಟ ನಡೆಸಿದರು. ಅನಕೃ ಅವರ ಚಳುವಳಿಯಿಂದ ಬೆಂಗಳೂರಿನ ಅಲಂಕಾರ್ ಚಿತ್ರಮಂದಿರದಲ್ಲಿ ಮೊತ್ತ ಮೊದಲ ಬಾರಿಗೆ ಕನ್ನಡ ಚಿತ್ರ ಪ್ರದರ್ಶನಗೊಂಡಿತು.

ಹೀಗೆ ಪ್ರದರ್ಶಿತವಾದ ಮೊದಲ ಚಿತ್ರ 1963 ರಲ್ಲಿ ತೆರೆಕಂಡ ಜಿ.ವಿ.ಅಯ್ಯರ್ ನಿರ್ದೇಶನದ ಬಂಗಾರಿ. ವಿಶೇಷವೆಂದರೆ ತುಂಬಿದ ಕೊಡ ಚಿತ್ರದಲ್ಲಿ ಸಾಹಿತಿ ಅ.ನ.ಕೃ. ಸಣ್ಣ ಪಾತ್ರವೊಂದರಲ್ಲಿ ಅಭಿನಯಿಸಿದ್ದರು.

ಇವರು ಪತ್ರಿಕಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಕಥಾಂಜಲಿ, ಬಾಂಬೆ ಕ್ರಾನಿಕಲ್, ವಿಶ್ವವಾಣಿ ಪತ್ರಿಕೆಗಳನ್ನು ನಡೆಸಿದರು. ಪ್ರಗತಿಶೀಲ ಸಾಹಿತ್ಯದ ಚಳವಳಿ (1943-44) ಯಲ್ಲಿ ನಿರತರಾದರು. ಬಿಎಂಶ್ರೀ ಅವರ ಕಾಲದಲ್ಲಿ ಕನ್ನಡ ನುಡಿ ಸಂಪಾದಕರಾಗಿದ್ದ ಅವರು ಕೇಂದ್ರ ಸಚಿವ ದಿವಾಕರರ ಹಿಂದಿ ಪ್ರತಿಪಾದನೆಯನ್ನು ವಿರೋಧಿಸಿ ಪತ್ರಿಕೆಯನ್ನು ತೊರೆದರು.

ಕನ್ನಡ ಚಳವಳಿ ನೇತಾರರಾಗಿ ರಾಮಮೂರ್ತಿ ಅವರೊಡನೆ ಸೇರಿ ಕನ್ನಡಿಗರಲ್ಲಿ ಜನಜಾಗೃತಿ ಮೂಡಿಸಿ ಕನ್ನಡಾಭಿಮಾನ ಬೆಳೆಸಿದರು. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಮೊದಲ ಅಧ್ಯಕ್ಷರಾಗಿದ್ದರು.

ತಮ್ಮ ಅದ್ಭುತ ವಾಗ್ವೈಖರಿಯಿಂದ ನಾಡಿನಲ್ಲೆಲ್ಲಾ ಜನಪ್ರಿಯರಾಗಿದ್ದ ಅವರ ಮೊದಲ ಕಾದಂಬರಿ ಗೃಹಲಕ್ಷ್ಮೀ. ತಮ್ಮ ಕಾದಂಬರಿಗಳ ಮೂಲಕ ಕನ್ನಡ ಓದುಗರನ್ನು ಚಿ ಹೆಚ್ಚಿಸಿದ್ದು ಇವರ ಹೆಗ್ಗಳಿಕೆ.

ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ (1970) ನೀಡಿ ಸನ್ಮಾನಿಸಿತು. ಸಾಹಿತ್ಯ ಪರಿಷತ್ತು ಮಣಿಪಾಲದಲ್ಲಿ ನಡೆದ 42 ನೇ ಕನ್ನಡ ಸಾಹಿತ್ಯ ಸಮ್ಮೇಳನದ (1960) ಅಧ್ಯಕ್ಷರನ್ನಾಗಿ ಆಯ್ಕೆಮಾಡಿತ್ತು. ಸಾಹಿತ್ಯ, ಸಂಗೀತ, ಚಿತ್ರಕಲೆ, ನಾಟ್ಯ, ನಾಟಕ ಕಲೆಗಳಲ್ಲಿ ಅಪಾರ ಒಲವು, ವಿಮರ್ಶಾ ಶಕ್ತಿ ಇದ್ದ ಅನಕೃ ಅವರು ಅವೆಲ್ಲ ವಿಷಯಗಳ ಬಗ್ಗೆ ಕೃತಿಗಳನ್ನು ರಚಿಸಿದ್ದಾರೆ. 1971 ರ ಜುಲೈ 4 ರಂದು ಅವರು ನಿಧನರಾದರು.

ಕನ್ನಡ ಕುಲರಸಿಕರು (ಜೀವನ ಚರಿತ್ರೆ), ಬರಹಗಾರನ ಬದುಕು (ಆತ್ಮಕಥೆ), ಬಣ್ಣದ ಬೀಸಣಿಗೆ, ಮದುವೆಯೋ ಮನೆಹಾಳೋ (ನಾಟಕಗಳು), ಗಾರ್ಕಿಯ ಕಥೆಗಳು, ಸ್ಟೋರಿ ಆಫ್ ಇಂಡಿಯಾ (ಅನುವಾದಗಳು), ಕರ್ನಾಟಕ ಕಲಾವಿದರು, 100 ಕಾದಂಬರಿ ಸೇರಿದಂತೆ 200 ಕ್ಕೂ ಹೆಚ್ಚು ಕೃತಿಗಳನ್ನೂ ರಚಿಸಿದ್ದಾರೆ.

# ಮೊಡವೆಗಳನ್ನು ಹೋಗಲಾಡಿಸಲು ಜೇನುತುಪ್ಪದ ಪ್ಯಾಕ್



ಜೇನುತುಪ್ಪವನ್ನು ಪ್ರಾಚೀನ ಕಾಲದಿಂದಲೂ ಚರ್ಮಕ್ಕೆ ನೈಸರ್ಗಿಕ ವರದಾನವೆಂದು ಪರಿಗಣಿಸಲ್ಪಟ್ಟಿದೆ. ಔಷಧೀಯ ಗುಣಗಳಿಂದ ಸಮೃದ್ಧವಾಗಿರುವ ಜೇನು ತುಪ್ಪದಲ್ಲಿ ಬ್ಯಾಕ್ಟೀ ರಿಯಾ ನಿವಾರಕ ತೇವಕಾರಕ ಗುಣಗಳು ಹಾಗೂ ಪ್ರಬಲ ಉತ್ಕರ್ಷಣ ನಿರೋಧಕ ಗುಣಗಳನ್ನು ಯಥೇಚ್ಛವಾಗಿ ಕಂಡು ಬರುವ ಕಾರಣ, ತ್ವಚೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ನಿವಾರಿಸಿ. ಜೇನುತುಪ್ಪದ ಫೇಸ್ ಪ್ಯಾಕ್ ಮಾಡಲು, ಮೊದಲಿಗೆ ನೈಸರ್ಗಿಕ ಜೇನುತುಪ್ಪ, ಅಲೋವೆರಾ ಜೆಲ್ ಮತ್ತು ರೋಸ್ ವಾಟರ್ ಬೇಕಾಗುತ್ತದೆ. ಮೊದಲು, ಒಂದು ಬೌಲ್ ನಲ್ಲಿ ಒಂದು ಟೀಚಮಚ ಜೇನುತುಪ್ಪವನ್ನು ಸುರಿಯಿರಿ. ನಂತರ, ಅದೇ ಬೌಲ್ ಗೆ ಎರಡು ಟೀ ಚಮಚ ತಾಜಾ ಅಲೋವೆರಾ ಜೆಲ್ ಸೇರಿಸಿ. ಅಂತಿಮವಾಗಿ,ಕೆಲವು ಹನಿ ರೋಸ್ ವಾಟರ್ ಸೇರಿಸಿ. ನಯವಾದ ಪೇಸ್ಟ್ ರೂಪಿ ಸಲು ಈ ಎಲ್ಲಾ ನೈಸರ್ಗಿಕ ಪದಾರ್ಥಗಳನ್ನು ಚೆನ್ನಾಗಿ ಮಿಶ್ರಣ ಮಾಡಿ. ಆ ಬಳಿಕ ಮಿಶ್ರಣವನ್ನು ಮುಖಕ್ಕೆ ಹಚ್ಚಿ 15-20 ನಿಮಿಷಗಳ ಸಮಯ ಹಾಗೆಯೇ ಬಿಡಿ. ನಂತರ ಉಗುರುಬೆಚ್ಚಗಿನ ನೀರಿನಿಂದ ಮುಖ ತೊಳೆಯಿರಿ.ಈ ಫೇಸ್ ಪ್ಯಾಕ್ ತ್ವಚೆಯನ್ನು ಹೈಡ್ರೇಟ್ ಮಾಡುವುದು ಮಾತ್ರವಲ್ಲದೆ ಮೊಡವೆಗಳನ್ನು ಕಡಿಮೆ ಮಾಡಿ, ಮುಖದ ಹೊಳಪನ್ನು ಹೆಚ್ಚಿಸುತ್ತದೆ

**ಚರ್ಮಕ್ಕೆ ಪ್ರಯೋಜನಕಾರಿ:** ಈ ಫೇಸ್ ಪ್ಯಾಕ್ ಅನ್ನು ಮೊಡವೆಗಳನ್ನು ಕಡಿಮೆ ಮಾಡಲು ಬಳಸಬಹುದು. ಇನ್ನು ಈ ಫೇಸ್ ಪ್ಯಾಕ್ ನಲ್ಲಿ ಬಳಸುವ ಜೇನುತುಪ್ಪ ಅಲೋವೆರಾ ಜೆಲ್ ಮತ್ತು ರೋಸ್ ವಾಟರ್‌ನ ಸಂಯೋಜನೆಯು ಹೈಡ್ರೀಕರಿಸಲು ಮತ್ತು ಪೋಷಿಸಲು ಅತ್ಯುತ್ತಮವಾದ ನೈಸರ್ಗಿಕ ಮಿಶ್ರಣವಾಗಿದೆ. ಈ ಫೇಸ್ ಪ್ಯಾಕ್ ಕಲೆಗಳನ್ನು ಕಡಿಮೆ ಮಾಡಲು ಕೂಡ ಸಹಾಯ ಮಾಡುತ್ತದೆ.

**ಜೇನುತುಪ್ಪ ಅರಿಶಿನ:** ಇನ್ನು ಮೊದಲೇ ಹೇಳಿದ ಹಾಗೆ ಜೇನುತುಪ್ಪದಲ್ಲಿ ಬ್ಯಾಕ್ಟೀರಿಯಾ ವಿರೋಧಿ ಮತ್ತು ಉರಿಯೂತ ನಿವಾರಕ ಗುಣಗಳನ್ನು ಹೊಂದಿದ್ದು, ಇದು ಮೊಡವೆಗಳ ಚಿಕಿತ್ಸೆಯಲ್ಲಿ ಅತ್ಯಂತ ಪ್ರಯೋಜನಕಾರಿಯಾಗಿದೆ. ಪ್ರಮುಖವಾಗಿ ಇದು ಚರ್ಮದ ಮೇಲಿನ ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ಕಡಿಮೆ ಮಾಡುತ್ತದೆ ಮತ್ತು ಕಲೆಗಳನ್ನು ಹಗುರಗೊಳಿಸಲು ಸಹಾಯ ಮಾಡುತ್ತದೆ. ಚಿಟಿಕೆಯಷ್ಟು ಅರಿಶಿನ ಪುಡಿಯನ್ನು ಜೇನುತುಪ್ಪದೊಂದಿಗೆ ಬೆರೆಸಿ ಮೊಡವೆಗಳು ಅಥವಾ ಕಲೆಗಳಿಂದ ಪೀಡಿತ ಪ್ರದೇಶಕ್ಕೆ ಹಚ್ಚಿ. 10-15 ನಿಮಿಷಗಳ ನಂತರ ಅದನ್ನು ತೊಳೆಯಿರಿ.

# ಮನೆಯಲ್ಲಿ ತಯಾರಿಸಲಾದ ಮೊಸರಿನ ಮೇಲ್ಭಾಗದಲ್ಲಿ ಹೆಚ್ಚು ನೀರು ಶೇಖರಣೆಯಾಗಲು ಕಾರಣವೇನು?

ಮೊಸರಿನ ವಿಷಯಕ್ಕೆ ಬಂದರೆ ಮನೆಯಲ್ಲಿ ತಯಾರಿಸಿದ ಮೊಸರು ತುಂಬಾ ಫ್ರೆಶ್ ಆಗಿರುತ್ತದೆ. ಇದು ಸೂಕ್ಷ್ಮವಾದ ಸಿಹಿಯನ್ನು ನೀಡುತ್ತದೆ. ಹಾಲನ್ನು ಕೊಬ್ಬಿನೊಂದಿಗೆ ಕುದಿಸಿದರೆ, ಇದು ದಪ್ಪವಾದ ಮಲೈ ಪದರವನ್ನು ನೀಡುತ್ತದೆ, ಇದು ಮೊಸರಿನ ಶ್ರೀಮಂತಿಕೆಯನ್ನು ಹೆಚ್ಚಿಸುತ್ತದೆ. ಆದರೆ ಕೆಲವೊಮ್ಮೆ, ಮನೆಯಲ್ಲಿ ತಯಾರಿಸಿದ ಮೊಸರು ಗಟ್ಟಿಯಾದ ನಂತರ ತೆಳುವಾದ ನೀರಿನ ಪದರವನ್ನು ಹೊಂದಿರುತ್ತದೆ. ತಜ್ಞರ ಪ್ರಕಾರ, ಇದು ಹಾಲೊಡಕು ಪ್ರೋಟೀನ್ ಆಗಿದೆ, ಇದು ಹಾಲಿನ ಹುದುಗುವಿಕೆಯ ನೈಸರ್ಗಿಕ ಉಪಉತ್ಪನ್ನವಾಗಿದೆ, ಇದು ಪ್ರೋಟೀನ್, ಕ್ಯಾಲ್ಸಿಯಂ, ವಿಟಮಿನ್ ಬಿ 12 ಮತ್ತು ಪ್ರೋಬಯಾಟಿಕ್‌ಗಳಲ್ಲಿ ಸಮೃದ್ಧವಾಗಿದೆ.

**ಇದರ ಹಿಂದಿನ ವಿಜ್ಞಾನವನ್ನು ಅರ್ಥಮಾಡಿಕೊಳ್ಳುವುದು**

ತಜ್ಞರ ಪ್ರಕಾರ, ನೀವು ಹಾಲಿಗೆ ಹೆಪ್ಪು ಅನ್ನು ಸೇರಿಸಿದಾಗ, ಪ್ರಯೋಜನಕಾರಿ ಬ್ಯಾಕ್ಟೀರಿಯಾಗಳು ಲ್ಯಾಕ್ಟೋಸ್ ಅನ್ನು ಲ್ಯಾಕ್ಟಿಕ್ ಆಮ್ಲವಾಗಿ ಪರಿವರ್ತಿಸುತ್ತವೆ ಮತ್ತು ಈ ಆಮ್ಲವು ಹಾಲಿನ ಪ್ರೋಟೀನ್‌ಗಳನ್ನು ಘನೀಕರಿಸಲು ಕಾರಣವಾಗುತ್ತದೆ.



ಮತ್ತು ರಚನೆಯು ತುಂಬಾ ಬಿಗಿಯಾದಾಗ ಅಥವಾ ಅಸ್ಥಿರವಾದಾಗ, ಅದು ನೀರನ್ನು ಹೊರಹಾಕುತ್ತದೆ, ಇದರ ಪರಿಣಾಮವಾಗಿ ಮೊಸರು ಹಾಲೊಡಕು ಎಂದು ಕರೆಯಲ್ಪಡುವ ನೀರಿನ ಪದರ ಉಂಟಾಗುತ್ತದೆ. ಈ ವಿದ್ಯಮಾನವು ಹೆಚ್ಚಾಗಿ ಹಾಲಿನ ಗುಣಮಟ್ಟ, ತಾಪಮಾನ ಮತ್ತು ಹುದುಗುವಿಕೆ ಪ್ರಕ್ರಿಯೆಯನ್ನು ಅವಲಂಬಿಸಿರುತ್ತದೆ ರಿಸರ್ಚ್ ಗೇಟ್ ಅಧ್ಯಯನವು ಮೊಸರನ್ನು ತಯಾರಿಸುವ ವಿಧಾನದ ಬಗ್ಗೆ ತಿಳಿಸಿದೆ.

ಮೊಸರನ್ನು ಹೆಚ್ಚು ಹೊತ್ತು ಅಥವಾ ತುಂಬಾ ಬೆಚ್ಚಗಿನ ವಾತಾವರಣದಲ್ಲಿ ಇಟ್ಟರೆ, ಅದು ಹೆಚ್ಚು ಆಮ್ಲೀಯವಾಗುತ್ತದೆ ಮತ್ತು ಅದು ಹೆಚ್ಚು ಹಾಲೊಡಕು ಬಿಡುಗಡೆ ಮಾಡಲು ಪ್ರಾರಂಭಿಸುತ್ತದೆ ಮತ್ತು ಅದಕ್ಕಾಗಿಯೇ ಮೊಸರು ಗಟ್ಟಿಯಾಗುವಾಗ, ಅದನ್ನು ತಂಪಾದ ಸ್ಥಳದಲ್ಲಿ ಸಂಗ್ರಹಿಸಲು ಸೂಚಿಸಲಾಗುತ್ತದೆ.



**ಬೆಚ್ಚಗಿನ ಮತ್ತು ಸ್ಥಿರವಾದ ತಾಪಮಾನವನ್ನು ಕಾಪಾಡಿಕೊಳ್ಳಿ**


ಮನೆಯಲ್ಲಿ ಮೊಸರು ತಯಾರಿಸುವಾಗ, ಸರಿಯಾದ ತಾಪಮಾನವು ಪ್ರಮುಖ ಪಾತ್ರ ವಹಿಸುತ್ತದೆ. ಆದರ್ಶಪ್ರಾಯವಾಗಿ, ಮೊಸರನ್ನು 30ಲಿಅ ಮತ್ತು 40ಲಿಅ ನಡುವಿನ ವಾತಾವರಣದಲ್ಲಿ ಇಡಬೇಕು. ಅದು ತುಂಬಾ ತಂಪಾಗಿದ್ದರೆ, ಮೊಸರು ಸರಿಯಾಗಿ ಹೊಂದಿಸದಿರಬಹುದು. ಅದು ತುಂಬಾ ಬಿಸಿಯಾಗಿದ್ದರೆ ಅಥವಾ ಹೆಚ್ಚು ಹೊತ್ತು ಬಿಟ್ಟರೆ, ಅತಿಯಾದ ಹುದುಗುವಿಕೆ ಸಂಭವಿಸಬಹುದು, ಇದು ಹೆಚ್ಚುವರಿ ದ್ರವಕ್ಕೆ ಕಾರಣವಾಗುತ್ತದೆ. ತಜ್ಞರ ಪ್ರಕಾರ, ತಂಪಾದ ವಾತಾವರಣದಲ್ಲಿ, ಪಾತ್ರೆಯನ್ನು ಸ್ವಿಚ್-ಆಫ್ ಮಾಡಿದ ಓವನ್, ಮೈಕ್ರೋವೇವ್ ಅಥವಾ ಬಟ್ಟೆಯಲ್ಲಿ ಸುತ್ತಿಡುವುದರಿಂದ ಮೊಸರಿನ ಸರಿಯಾದ ವಿನ್ಯಾಸವನ್ನು ಪಡೆಯಲು ಸಹಾಯ ಮಾಡುತ್ತದೆ.

**ಪೂರ್ಣ ಕೊಬ್ಬಿನ ಹಾಲನ್ನು ಬಳಸಿ**

ತಜ್ಞರ ಪ್ರಕಾರ, ಮೊಸರಿನ ವಿನ್ಯಾಸವು ಹೆಚ್ಚಾಗಿ ಹಾಲಿನ ಗುಣಮಟ್ಟವನ್ನು ಅವಲಂಬಿಸಿರುತ್ತದೆ.

ಪೂರ್ಣ ಕೊಬ್ಬಿನ ಹಾಲು ದಪ್ಪ ಮತ್ತು ಕೆನೆಭರಿತ ಮೊಸರನ್ನು ಉತ್ಪಾದಿಸುತ್ತದೆ ಏಕೆಂದರೆ ಇದು ಸ್ಥಿರವಾದ ಪ್ರೋಟೀನ್ ಜಾಲವನ್ನು ಬೆಂಬಲಿಸುವ ಉತ್ಕೃಷ್ಟ ಸಂಯೋಜನೆಯನ್ನು ಹೊಂದಿದೆ. ಟೋನ್ಡ್ ಅಥವಾ ಸ್ಕಿಮ್ಡ್ ಹಾಲಿನಲ್ಲಿ ಕೊಬ್ಬಿನ ಅಂಶವಿಲ್ಲ ಮತ್ತು ಮೊಸರು ನೀರನ್ನು ಬಿಡುಗಡೆ ಮಾಡುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

**ಸರಿಯಾದ ಪ್ರಮಾಣದ ಹೆಪ್ಪು ಸೇರಿಸಿ**



ಮೊಸರು ಬಿಡುಗಡೆ ಮಾಡುವ ನೀರಿನ ಅತಿಯಾದ ಬಳಕೆ ಎಂದರೆ ಹೆಪ್ಪು ಅನ್ನು ಬಿಡುಗಡೆ ಮಾಡಲು ಮತ್ತೊಂದು ಕಾರಣ. ಕೆಲವು ಜನರು ಸಾಮಾನ್ಯವಾಗಿ ಒಂದು ಚಮಚ ಹೆಪ್ಪು ಸೇರಿಸುತ್ತಾರೆ, ಇದು ಮೊಸರನ್ನು ವೇಗವಾಗಿ ಮತ್ತು ದಪ್ಪವಾಗಿ ಹೊಂದಿಸುತ್ತದೆ ಎಂದು ಭಾವಿಸುತ್ತಾರೆ. ಇದು ಮೊಸರನ್ನು ಅತಿಯಾಗಿ ಹುಳಿ ಮಾಡುತ್ತದೆ ಮತ್ತು ಅದು ಹೆಚ್ಚು ಹಾಲೊಡಕು ಬಿಡುಗಡೆ ಮಾಡುತ್ತದೆ. ಸಮತೋಲಿತ ವಿಧಾನವನ್ನು ಅನುಸರಿಸುವುದು ತಂತ್ರವಾಗಿದೆ. 500 ಮಿಲಿ ಹಾಲಿಗೆ ಸುಮಾರು 1/4-1/2 ಟೀಸ್ಪೂನ್ ಹೆಪ್ಪು ಸಾಕು.

**ಸರಿಯಾದ ತಾಪಮಾನದಲ್ಲಿ ಹೆಪ್ಪು ಅನ್ನು ಸೇರಿಸುವುದು:** ಹಾಲಿಗೆ ಹೆಪ್ಪು ಅನ್ನು ಸೇರಿಸಲು ಸೂಕ್ತವಾದ ತಾಪಮಾನವು ಉಗುರುಬೆಚ್ಚಗಿರುತ್ತದೆ. ಸುಮಾರು 35°C ನಿಂದ 40°C. ಪರಿಪೂರ್ಣತೆಗಾಗಿ, ಒಬ್ಬರು ಯಾವಾಗಲೂ ಅಡುಗೆಮನೆಯ ಥರ್ಮಾಮೀಟರ್ ಅನ್ನು ಕೈಯಲ್ಲಿ ಇಟ್ಟುಕೊಳ್ಳಬಹುದು. ಸಾಂಪ್ರದಾಯಿಕವಾಗಿ, ಭಾರತೀಯ ಮನೆಗಳಲ್ಲಿ ಜನರು ಹಾಲಿನಲ್ಲಿ ಬೆರಳನ್ನು ಅದ್ದಿ ಮತ್ತು ಅದು ಬೆಚ್ಚಗಿರುತ್ತದೆ ಆದರೆ ಆರಾಮದಾಯಕವಾಗಿದ್ದರೆ, ಹೆಪ್ಪು ಅನ್ನು ಸೇರಿಸಲು ಅದು ಸರಿಯಾದ ತಾಪಮಾನವಾಗಿದೆ.

ಮುಚ್ಚಳವನ್ನು ಮುಚ್ಚಿದ ನಂತರ, ಪಾತ್ರೆಯನ್ನು ಅಲುಗಾಡಿಸುವುದನ್ನು ಅಥವಾ ಚಲಿಸುವುದನ್ನು ತಪ್ಪಿಸಿ, ಏಕೆಂದರೆ ಇದು ಪ್ರೋಟೀನ್ ರಚನೆಗೆ ಅಡ್ಡಿಪಡಿಸುತ್ತದೆ, ಇದರಿಂದಾಗಿ ನೀರನ್ನು ಪರಿಣಾಮಕಾರಿಯಾಗಿ ಹಿಡಿದಿಟ್ಟುಕೊಳ್ಳಲು ಸಾಧ್ಯವಾಗದ ಸಡಿಲವಾದ ಸ್ಥಿರತೆ ಉಂಟಾಗುತ್ತದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಇದು ಹೃದಯ ರೋಗಿಗಳಿಗೆ ಕಾಫಿ ಬಿಡಲು ಸರಿಯಾದ ಸಮಯ. ಯಾವುದೇ ಮುಂದುವರಿದ ಬಳಕೆ ನಿಮ್ಮ ಹೃದಯದ ಮೇಲೆ ಅನವಶ್ಯಕ ಒತ್ತಡ ತರುತ್ತದೆ. ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ.

**ವೃಷಭ** ವಿಚಾರಗೋಷ್ಠಿಗಳು ಮತ್ತು ಪ್ರದರ್ಶನಗಳು ನಿಮಗೆ ಹೊಸ ಜ್ಞಾನ ಮತ್ತು ಸಂಪರ್ಕಗಳನ್ನು ಒದಗಿಸುತ್ತವೆ. ನಿಮ್ಮ ಬಾಸ್ ಇಂದು ನಿಮ್ಮ ಕೆಲಸವನ್ನು ಪ್ರಶಂಸಿಸಬಹುದು.

**ಮಿಥುನ** ಕೆಲವು ಕುಟುಂಬದ ಸದಸ್ಯರು ತಮ್ಮ ಅಸೂಯೆಯ ವರ್ತನೆಯಿಂದ ನಿಮಗೆ ಕಿರಿಕಿರಿ ಮಾಡಬಹುದು. ಆದರೆ ತಾಳ್ಮೆ ಕಳೆದುಕೊಳ್ಳುವುದು ಬೇಡ. ಇಲ್ಲದಿದ್ದರೆ ಪರಿಸ್ಥಿತಿ ನಿಯಂತ್ರಣ ಮೀರಬಹುದು.

**ಕರ್ಕಾಟಕ** ನೀವು ಕೆಲಸದಲ್ಲಿ ಓರ್ವ ಅದ್ಭುತ ವ್ಯಕ್ತಿಯನ್ನು ಭೇಟಿಯಾಗಬಹುದು. ಸ್ನೇಹಿತರೊಂದಿಗೆ ಈ ಅಮೂಲ್ಯ ಕ್ಷಣಗಳನ್ನು ಹಾಳುಮಾಡಬೇಡಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಲಾಗಿದೆ.

**ಸಿಂಹ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ನಿಮ್ಮ ಹಳೆಯ ಯಾವುದೇ ರೋಗ ಇಂದು ನಿಮ್ಮನ್ನು ಕಾಡಬಹುದು. ಇದರ ಕಾರಣದಿಂದ ನೀವು ಆಸ್ಪತ್ರೆಗೂ ಹೋಗಬೇಕಾಗಬಹುದು.

**ಕನ್ಯಾ** ಪ್ರಯಾಣ ತಕ್ಷಣದ ಫಲಿತಾಂಶಗಳು ತರದಿದ್ದರೂ ಭವಿಷ್ಯದ ಪ್ರಯೋಜನಗಳಿಗೆ ಉತ್ತಮ ಅಡಿಪಾಯ ಹಾಕುತ್ತದೆ. ನೀವು ನಿಮ್ಮ ಜೀವನ ಸಂಗಾತಿ ನಿಮ್ಮೆಡೆಗೆ ಹೆಚ್ಚು ಕಾಳಜಿಯಿದ್ದಂತೆ ತೋರಬಹುದು.

**ತುಲಾ** ಒಬ್ಬ ದೂರದ ಸಂಬಂಧಿಯಿಂದ ಒಂದು ಅನಿರೀಕ್ಷಿತ ಸಂದೇಶ ಇಡೀ ಕುಟುಂಬಕ್ಕೆ ಸಂಭ್ರಮ ತರುತ್ತದೆ. ಭಾವಪೂರ್ಣ ಪ್ರೀತಿಯ ಭಾವಪರವಶತೆಯನ್ನು ಇಂದು ಅನುಭವಿಸಬಹುದು.

**ವೃಶ್ಚಿಕ** ನಿಮ್ಮ ವಿಶ್ವಾಸ ಮತ್ತು ಚೈತನ್ಯ ಅಧಿಕವಾಗಿರುತ್ತದೆ. ಇಂದು ನೀವು ನಿಮ್ಮ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ, ಏಕೆಂದರೆ ಮನೆಯ ಯಾವುದೇ ಹಿರಿಯ ಸದಸ್ಯ ಇಂದು ನಿಮಗೆ ಹಣವನ್ನು ನೀಡಬಹುದು.

**ಧನಸ್ಸು** ನಿಮ್ಮನ್ನು ನೀವೇ ನೋಡಿಕೊಳ್ಳುವ ಬಯಕೆಗೆ ಇತರರ ಅಗತ್ಯಗಳು ಕಡಿವಾಣ ಹಾಕುತ್ತವೆ. ಭಾವನೆಗಳನ್ನು ತಡೆಹಿಡಿಯಬೇಡಿ, ವಿಶ್ರಾಂತಿ ಪಡೆಯುವ ಸಲುವಾಗಿ ನೀವು ಇಷ್ಟಪಡುವುದನ್ನೇನಾದರೂ ಮಾಡಿ.

**ಮಕರ** ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ.

**ಕುಂಭ** ನಿಮ್ಮ ಮೆಚ್ಚುಗೆ, ಪ್ರತಿಫಲಗಳನ್ನು ಪಡೆಯುವ ಯಾವುದಾದರೊಂದು ದೊಡ್ಡ ಯೋಜನೆಯ ಭಾಗವಾಗಿರುತ್ತೀರಿ. ಧರ್ಮಾರ್ಥ ಮತ್ತು ಸಮಾಜ ಸೇವೆ ಇಂದು ನಿಮ್ಮನ್ನು ಸೆಳೆಯುತ್ತವೆ.


**ಮೀನ** ಕೆಲವರು ನಿಮಗೆ ಏನನ್ನಾದರೂ ಕಲಿಯಲು ಬಹಳ ವಯಸ್ಸಾಗಿದೆಯೆಂದು ಭಾವಿಸಬಹುದು ಆದರೆ ಅದು ನಿಜವಲ್ಲ, ಪ್ರಖರ ಮತ್ತು ಸಕ್ರಿಯ ಮನಸ್ಸಿನಿಂದ ನೀವು ಹೊಸ ವಿಷಯಗಳನ್ನು ಸುಲಭವಾಗಿ ಕಲಿಯುವಿರಿ.

### ಬಿಜೆಪಿಯೊಂದಿಗೆ ಪಕ್ಷ ವಿಲೀನವಾಗಿಲ್ಲ, ನಮ್ಮದು ಸ್ವತಂತ್ರ ಪಕ್ಷ: ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್‌ಕುಮಾರಸ್ವಾಮಿ

# ಮೈತ್ರಿ ಪಕ್ಷದಲ್ಲಿ ಭಿನ್ನರಾಗ: ಮತ್ತೊಮ್ಮೆ ಎಚ್ಡಿಕೆ ಸಿಎಂ ವಿಷಯ ಸಂಚಲನ

• ಉದಯವಾಹಿನಿ, ಹಾಸನ

ಜಿಲ್ಲೆಯಲ್ಲಿ ಮೈತ್ರಿ ಪಕ್ಷಗಳ ಮುಖಂಡರು ಸಾರ್ವಜನಿಕವಾಗಿ ನೀಡುತ್ತಿರುವ ಹೇಳಿಕೆ-ಪ್ರತಿ ಹೇಳಿಕೆಗಳು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿಯಾಗಬೇಕು, ಬಿಜೆಪಿಯೊಂದಿಗೆ ಪಕ್ಷ ವಿಲೀನವಾಗಿಲ್ಲ, ನಮ್ಮದು ಸ್ವತಂತ್ರ ಪಕ್ಷ ಎಂಬ ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಹೇಳಿಕೆ ಜಿಲ್ಲಾ ಬಿಜೆಪಿಯಲ್ಲಿ ಸಂಚಲನ ಸೃಷ್ಟಿಸಿದ್ದರೆ, ಎನ್‌ಡಿಎ ನೇತೃತ್ವದ ಪಕ್ಷದಲ್ಲಿ ಸಿಎಂ ಯಾರಾಗಬೇಕು ಎಂಬುದನ್ನು ಪಕ್ಷ ನಿರ್ಧರಿಸುತ್ತದೆ ಎಂದು ಬಿಜೆಪಿ ಟಾಂಗ್ ನೀಡಿದೆ. ಇದು ಮೈತ್ರಿಯಲ್ಲಿ ಎಲ್ಲವೂ ಸರಿಯಿಲ್ಲಎಂಬುದನ್ನು ಮತ್ತೊಮ್ಮೆ ಸಾಕ್ಷೀಕರಿಸಿದ್ದು, ಸಾಕಷ್ಟು ಚರ್ಚೆಗೂ ಕಾರಣವಾಗಿದೆ.



ಉದಯವಾಹಿನಿ ಚಿತ್ರ

> ಜೆಡಿಎಸ್ ಜತೆ ಮೈತ್ರಿ ಅಷ್ಟೇ, ಸಿದ್ಧಾಂತದಲ್ಲಿ ರಾಜಿ ಇಲ್ಲ. ಎಚ್‌ಡಿಕೆ ಸಿಎಂ ಆಗಬೇಕು ಎಂಬುದು ಎಲ್ಲರ ಅಭಿಪ್ರಾಯ ಎಂದಿರುವ ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್‌ಕುಮಾರಸ್ವಾಮಿಗೆ ಆಲ್ ದ ಬೆಸ್ಟ್ ಹೇಳುವೆ -ಪ್ರೀತಂ ಜೆ.ಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ.

- ಎನ್‌ಡಿಎ ನೇತೃತ್ವದ ಪಕ್ಷದಲ್ಲಿ ಸಿಎಂ ಯಾರಾಗಬೇಕು ಎಂಬುದನ್ನು ಪಕ್ಷ ನಿರ್ಧರಿಸುತ್ತದೆ ಎಂದು ಬಿಜೆಪಿ ಟಾಂಗ್ ನೀಡಿದೆ
- ಎಚ್.ಡಿ.ಕುಮಾರಸ್ವಾಮಿ ಮತ್ತೊಮ್ಮೆ ಸಿಎಂ ಆಗಬೇಕು ಎಂಬುದು ಜೆಡಿಎಸ್ ಅಭಿಲಾಷೆ ಎಂಬ ಹೇಳಿಕೆ ನೀಡಿ ಚರ್ಚೆ ಹುಟ್ಟು ಹಾಕಿದ್ದ ನಿಖಿಲ್ ಕುಮಾರಸ್ವಾಮಿ
- 2028ರ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದರೆ ಎನ್‌ಡಿಎ ನೇತೃತ್ವದ ಸಿಎಂ ಆಗುತ್ತಾರೆ, ಯಾರು ಎಂಬುದನ್ನು ಪಕ್ಷ ತೀರ್ಮಾನಿಸುತ್ತದೆ. ಪಕ್ಷದ ಗೌರವ ಕಾಪಾಡಬೇಕು-ಪ್ರೀತಂ ಗೌಡ

**ಮತ್ತೆ ಸಿಎಂ ವಿಷಯ ಪ್ರಸ್ತಾಪ:** ಜೆಡಿಎಸ್ ರಜತ ಮಹೋತ್ಸವ ಹಿನ್ನೆಲೆಯಲ್ಲಿ ನಗರದಲ್ಲಿ ಜ.24ರಂದು ನಡೆದಿದ್ದ ಜನತಾ ಸಮಾವೇಶದಲ್ಲಿಯೂ ಎಚ್.ಡಿ.ಕುಮಾರಸ್ವಾಮಿ ಮತ್ತೊಮ್ಮೆ ಸಿಎಂ ಆಗಬೇಕು ಎಂಬುದು ಜೆಡಿಎಸ್ ಅಭಿಲಾಷೆ ಎಂಬ ಹೇಳಿಕೆ ನೀಡಿ ಚರ್ಚೆ ಹುಟ್ಟು ಹಾಕಿದ್ದ ನಿಖಿಲ್ ಕುಮಾರಸ್ವಾಮಿ ಪದೇಪದೆ ಈ ವಿಷಯ ಪ್ರಸ್ತಾಪಿಸುತ್ತಿರುವುದು ಬಿಜೆಪಿ ಪಾಳೆಯದಲ್ಲಿ ನುಂಗಲಾರದ ಬಿಸಿತುಪ್ಪವಾಗಿದೆ. ರಾಷ್ಟ್ರೀಯ ಪಕ್ಷವಾಗಿ ಮುಂದಿನ 2028ರ ಸಿಎಂ ಅಭ್ಯರ್ಥಿ ಯಾರು ಎಂಬುದು ಹೈಕಮಾಂಡ್ ತೀರ್ಮಾನಿಸಬೇಕು, ಮೈತ್ರಿ ಪಕ್ಷ ಜೆಡಿಎಸ್ ಜತೆ ಚರ್ಚೆಯಾಗಬೇಕು. ಅಂತಹ ಯಾವುದೇ ಸಭೆ, ಬೆಳವಣಿಗೆ ಆಗದಿರುವ ಸಂದರ್ಭದಲ್ಲಿ ಸಿಎಂ ವಿಷಯ ಪ್ರಸ್ತಾಪ ಸಲ್ಲದು ಎಂಬುದು ಬಿಜೆಪಿ ಮುಖಂಡರ ವಾದ.

ಜೆಡಿಎಸ್ ಸ್ವತಂತ್ರ ಪಕ್ಷ, ಸಿದ್ಧಾಂತ, ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲಎಂಬ ನಿಖಿಲ್ ಕುಮಾರಸ್ವಾಮಿ ಹೇಳಿಕೆ ಅವರ ಪಕ್ಷಕ್ಕೆ ಬಿಟ್ಟ ವಿಷಯ. ಬಿಜೆಪಿಗೂ ತನ್ನದೇ ಆದ ತತ್ವ, ಸಿದ್ಧಾಂತ ಇದೆ. ಮೈತ್ರಿ ಪಕ್ಷದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವಾಗ ಪರಸ್ಪರ ಚರ್ಚಿಸಿಯೇ ತೀರ್ಮಾನವಾಗುತ್ತದೆ. ಹೀಗಾಗಿ ಸಿಎಂ ವಿಷಯ ಪ್ರಸ್ತಾಪಕ್ಕೆ ಸೂಕ್ತ ಸಮಯವಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

**ಜಿಲ್ಲೆಯ ಲೆಕ್ಕಾಚಾರವೇ ಬೇರೆ**

ರಾಜ್ಯ, ರಾಷ್ಟ್ರ ರಾಜಕಾರಣದಲ್ಲಿ ಬಿಜೆಪಿ-ಜೆಡಿಎಸ್ ಹೊಂದಾಣಿಕೆಯಾದರೂ ಜಿಲ್ಲೆಯ ರಾಜಕಾರಣವೇ ಬೇರೆ ಎಂಬುದನ್ನು ಬಿಜೆಪಿಯವರು ಅಲ್ಲಗಳೆಯುವುದಿಲ್ಲ. 2024ರ ಲೋಕಸಭೆ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರ ಸೋಲೇ ಇದಕ್ಕೆ ಸಾಕ್ಷಿಯಾಗಿದೆ. ಆ ಬಳಿಕವೂ ಜಿಲ್ಲಾ ರಾಜಕೀಯದಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಜೆಡಿಎಸ್ ತನ್ನ ಶಕ್ತಿ ವೃದ್ಧಿಸಿಕೊಳ್ಳಲು ಪ್ರಯತ್ನ ಮುಂದುವರಿಸಿದೆ. ಬಿಜೆಪಿ ಕೂಡ ಕಾಂಗ್ರೆಸ್‌ಗಿಂತ ಜೆಡಿಎಸ್ ತನ್ನ ಎದುರಾಳಿ ಎಂಬಂತೆಯೇ ಕಾರ್ಯತಂತ್ರ ರೂಪಿಸುವುದು ಗುಟ್ಟಾಗಿ ಉಳಿದಿಲ್ಲ ಕೆಳಹಂತದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರಲ್ಲಿ ಹೊಂದಾಣಿಕೆಯೂ ಸಾಧ್ಯವಾಗದು ಎಂಬುದು ಅನೇಕ ಸಂದರ್ಭದಲ್ಲಿಸಾಬೀತಾಗಿದೆ. ಈಗಾಗಲೇ 2028ರ ವಿಧಾನಸಭೆ ಚುನಾವಣೆಗೆ ತಾಲೀಮು ಪ್ರಾರಂಭವಾಗಿದೆ. ಜೆಡಿಎಸ್ ಮತ್ತು ಬಿಜೆಪಿ ಪರಸ್ಪರ ವಿರುದ್ಧ ದಿಕ್ಕಿನಲ್ಲಿಯೇ ಹೆಜ್ಜೆ ಇರಿಸಿದ್ದು, ಮುಂದೇನು ಎಂಬ ಪ್ರಶ್ನೆ ಉದ್ಭವಿಸಿದೆ.

**ಏಕಪಕ್ಷೀಯ ತೀರ್ಮಾನವಲ್ಲ**

2028ರ ವಿಧಾನಸಭೆ ಚುನಾವಣೆಗೆ ಇನ್ನು ಕಾಲಾವಕಾಶ ಇದೆ. ರಾಜಕೀಯದಲ್ಲಿ ಏನೆಲ್ಲ ಬೆಳವಣಿಗೆ ಆಗಬಹುದು. ಹೀಗಿರುವಾಗ ಜೆಡಿಎಸ್ ತನ್ನದೇ ಹಾದಿಯಲ್ಲಿ ಸಾಗುತ್ತಿರುವುದು ಮೈತ್ರಿಯಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ರಾಜ್ಯ, ಕೇಂದ್ರದಲ್ಲಿ ಮೈತ್ರಿ ಹೊಂದಾಣಿಕೆ ಇರುವಾಗ ಎಲ್ಲವನ್ನು ವರಿಷ್ಠರು ತೀರ್ಮಾನಿಸಬೇಕೆ ಹೊರತು ಏಕಪಕ್ಷೀಯ ತೀರ್ಮಾನ ಸಾಧ್ಯವೇ ಇಲ್ಲ ಎನ್ನುವ ಮಾತುಗಳು ಕೇಳಿಬರುತ್ತಿದೆ.

**ಎನ್‌ಡಿಎ ಸಿಎಂ:** 2028ರ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದರೆ ಎನ್‌ಡಿಎ ನೇತೃತ್ವದ ಸಿಎಂ ಆಗುತ್ತಾರೆ, ಯಾರು ಎಂಬುದನ್ನು ಪಕ್ಷ ತೀರ್ಮಾನಿಸುತ್ತದೆ. ಪಕ್ಷದ ಗೌರವ ಕಾಪಾಡಬೇಕು. ಹೀಗಾಗಿ ತಾಳ್ಮೆಯಿಂದಲೇ ಇರುತ್ತೇವೆ ಎಂಬ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಜೆ.ಗೌಡ ಹೇಳಿಕೆ ನೀಡಿದ್ದಾರೆ. ಇದು ಜೆಡಿಎಸ್ ಮತ್ತು ಬಿಜೆಪಿ ನಡುವಿನ ಮೈತ್ರಿಯಲ್ಲಿ ಎಷ್ಟರಮಟ್ಟಿಗೆ ಹೊಂದಾಣಿಕೆ ಇದೆ ಎಂಬುದನ್ನು ತೋರಿಸುತ್ತಿದೆ ಎನ್ನುವ ವಿಶ್ಲೇಷಣೆಗಳು ಕೂಡ ನಡೆಯುತ್ತಿವೆ.

## ಲೈಂಗಿಕ ಕಿರುಕುಳ: ವಾರ್ಡನ್ ವಿರುದ್ಧ ಎಫ್‌ಐಆರ್

• ಉದಯವಾಹಿನಿ, ಅಫಜಲಪುರ

ವಿದ್ಯಾರ್ಥಿನಿಗೆ ಇನ್ಸ್ಟಾಗ್ರಾಮ್ ಮೂಲಕ ರಾತ್ರಿ ವೇಳೆ ಕರೆ ಮಾಡಿ ಬೆತ್ತಲೆ ಫೋಟೋಗಳನ್ನು ಮತ್ತು ಸ್ನಾನ ಮಾಡುವಾಗ ಫೋಟೋಗಳನ್ನು ತೆಗೆದು ನನಗೆ ಕಳುಹಿಸು ಎಂದು ಲೈಂಗಿಕ ಕಿರುಕುಳ ನೀಡಿದ ಅಫಜಲಪುರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯದ ವಾರ್ಡನ್ ಹಣಮಂತ ಬಿರಾದಾರ ಮೇಲೆ ಎಂ.ಬಿ.ನಗರ ಕಲಬುರಗಿ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿದೆ.

ಕಲಬುರಗಿ ನಗರದಲ್ಲಿ ಕುಟುಂಬಸ್ಥರ ಜತೆ ವಾಸವಾಗಿದ್ದ ವಿದ್ಯಾರ್ಥಿನಿಗೆ (Instragram id no-Hemanthbiradar@ 24) ಮುಖಾಂತರ ರಾತ್ರಿ ಕರೆ ಮಾಡಿ ಲೈಂಗಿಕ ಕಿರುಕುಳ ನೀಡಿದ್ದಾನೆ. ಬೆತ್ತಲೆ ಮತ್ತು ಸ್ನಾನ ಮಾಡುವಾಗಿನ ಫೋಟೋಗಳನ್ನು ಕಳುಹಿಸು ಎಂದು ಒತ್ತಾಯ ಮಾಡಿದ್ದಾನೆ. ಅಲ್ಲದೇ ನಿನ್ನನ್ನು ಕಾರಿನಲ್ಲಿ ಬೀದರ್ ಮತ್ತು ಮಂತ್ರಾಲಯಕ್ಕೆ ಕರೆದುಕೊಂಡು ಹೋಗುತ್ತೇನೆ ಎಂದು ಮೆಸೇಜ್ ಮಾಡಿ ಲೈಂಗಿಕ ಕಿರುಕುಳ ನೀಡಿದ್ದಾನೆ. ಅಲ್ಲದೇ ಒಂದು ದಿನ ಮನೆಯ ಹತ್ತಿರ ಬಂದು ನೀನು ತುಂಬಾ ಚೆನ್ನಾಗಿ



ಕಾಣುತ್ತಿದ್ದಿ,ನೀನು ಹೀಗೆ ಇರು ಅಂತಾ ಹೇಳುತ್ತಾನೆ.

ಅಲ್ಲದೇ ನನ್ನ ಮಗಳಿಗೆ ಜೀವಬೇದರಿಕೆ ಹಾಕಿದ್ದಾನೆ.15 ಮಾರ್ಚ್ 2026ರಂದು ಮಧ್ಯಾಹ್ನ 12 ಗಂಟೆಗೆ ಈ ಘಟನೆ ನಡೆದಿದ್ದು,ನನ್ನ ಮಗಳು ಹೆದರಿ ಈ ವಿಷಯವನ್ನು ಮನೆಯಲ್ಲಿ ಹೇಳಿರುವುದಿಲ್ಲ,ಆದರೆ ದಿನನಿತ್ಯ ವಾರ್ಡನ್ ಹಣಮಂತ ಬಿರಾದಾರ ನೀಡುತ್ತಿರುವ ಕಿರುಕುಳ ತಾಳಲಾರದೆ ನಡೆದಿರುವ ಘಟನೆ ಬಗ್ಗೆ ನನ್ನ ಮುಂದೆ ಹೇಳಿದ್ದಾಳೆ ಎಂದು ವಿದ್ಯಾರ್ಥಿನಿಯ ತಂದೆ ಕಲಬುರಗಿಯ ಎಂ.ಬಿ.ನಗರ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

## ಮನೆಯ ಸುತ್ತ ಸ್ವಚ್ಛತೆ ಕಾಪಾಡಿ ಮಲೇರಿಯಾ ಓಡಿಸಿ: ಡಾ.ಮೇಘನಾ

• ಉದಯವಾಹಿನಿ, ಚಿತ್ರದುರ್ಗ

ನಮ್ಮ ಭಾರತ ದೇಶವನ್ನು ಮಲೇರಿಯಾ ಮುಕ್ತ ದೇಶವನ್ನಾಗಿ ನಿರ್ಮಿಸಲು ಪ್ರತಿ ಗ್ರಾಮದ ಪ್ರತಿಯೊಬ್ಬ ನಾಗರೀಕರು ಈ ಮಾರಣಾಂತಿಕ ಮಲೇರಿಯಾ ರೋಗದ ಬಗ್ಗೆ ಜಾಗೃತಿವಹಿಸಿ ಮನೆಯ ಸುತ್ತಮುತ್ತ ಸೊಳ್ಳೆಗಳು ವಾಸಿಸದಂತೆ ಎಚ್ಚರವಹಿಸಬೇಕು ರೋಗ ಲಕ್ಷಣಗಳು ಕಂಡುಬಂದರೆ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಗಳನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯಬೇಕು ಎಂದು ಹಿರೇಗುಂಟನೂರು ಸರ್ಕಾರಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಮೇಘನಾ ಕರೆ ನೀಡಿದರು.

ಜಿಲ್ಲಾ ಪಂಚಾಯತ್ ಚಿತ್ರದುರ್ಗ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಚಿತ್ರದುರ್ಗ ಸಹಯೋಗದೊಂದಿಗೆ ಚಿತ್ರದುರ್ಗ ತಾಲ್ಲೂಕಿನ ಹಿರೇಗುಂಟನೂರು ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೆಚಂದ್ರದ ವತಿಯಿಂದ ಸೋಮವಾರ ವಿಶ್ವ ಮಲೇರಿಯಾ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಾ ಮಲೇರಿಯಾವು ಜೀವಕ್ಕೆ ಅಪಾಯಕಾರಿ ಕಾಯಿಲೆಯಾಗಿದ್ದು, ಮಲೇರಿಯಾವು ಸೋಂಕಿತ ಹೆಣ್ಣು ಅನಾಫಿಲಿಸ್





ಉದಯವಾಹಿನಿ ಚಿತ್ರ

ಸೊಳ್ಳೆ ಕಡಿತದಿಂದ ಬರುವ ತೀವ್ರ ಜ್ವರವಾಗಿದೆ. ಇದರ ಮುಖ್ಯ ಲಕ್ಷಣಗಳೆಂದರೆ ನಡುಕದೊಂದಿಗೆ ಅಧಿಕ ಜ್ವರ, ತಲೆನೋವು, ವಿಪರೀತ ಬೆವರುವುದು, ಸ್ನಾಯು ನೋವು, ವಾಕರಿಕೆ, ವಾಂತಿ ಮತ್ತು ಆಯಾಸ. ಸೊಳ್ಳೆ ಕಚ್ಚಿದ 7-15 ದಿನಗಳ ನಂತರ ಈ ಲಕ್ಷಣಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ ಯಾರಿಗಾದರೂ ಇಂತಹ ಜ್ವರದ ಲಕ್ಷಣಗಳು ಕಂಡುಬಂದರೆ ತಕ್ಷಣವೇ ನಿಮ್ಮ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿನೀಡಿ ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಹಿರೇಗುಂಟನೂರು ಗ್ರಾಮದಲ್ಲಿ ನಡೆಸಲಾದ ಮಲೇರಿಯಾ ನಿಯಂತ್ರಣ ಜನಜಾಗೃತಿ ಜಾಥ ಕಾರ್ಯಕ್ರಮದಲ್ಲಿ ಸಮುದಾಯ ಆರೋಗ್ಯಾಧಿಕಾರಿಗಳಾದ, ಪುನೀತ್, ಪ್ರಿಯಾ, ಶಿವಕುಮಾರ್, ಆರೋಗ್ಯ ಸುರಕ್ಷಣಾಧಿಕಾರಿಗಳಾದ ವೀರಮ್ಮ, ಗೀತಾ, ಸಿಂಧು, ಜ್ಞಾನೇಶ್ವರಿ, ಪುಷ್ಪವತಿ, ಗಂಗಮ್ಮ, ಹಿರಿಯ ಆರೋಗ್ಯ ಸುರಕ್ಷಣಾಧಿಕಾರಿಗಳಾದ ಶಾಂತಮ್ಮ , ಯೋಗ ತರಬೇತುದಾರ ರವಿ ಕೆ.ಅಂಬೇಕರ್ ಹಾಗೂ ಹಲವಾರು ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

> ಈ ಬಾರಿಯ ಘೋಷವಾಕ್ಯವಾದ ಮಲೇರಿಯಾ ಅಂತ್ಯದತ್ತ ಪಯಣ ಈಗ ನಮಗೆ ಸಾಧ್ಯವಿದೆ. ಈಗ ನಾವು ಮಾಡಲೇಬೇಕು. ಅರ್ಥಾತ್ ಇದು ನಮ್ಮ ಜವಾಬ್ದಾರಿಯನ್ನು ನೆನಪಿಸುತ್ತದೆ. ಸಂಪನ್ಮೂಲಗಳು ಮತ್ತು ಜ್ಞಾನವಿದ್ದರೂ ನಾವು ಕಾರ್ಯಪ್ರವೃತ್ತರಾಗದಿದ್ದರೆ, ಈ ರೋಗ ಮತ್ತೆ ಮರುಕಳಿಸಬಹುದು. ಇದು ತುರ್ತು ನಿರ್ಧಾರದ ಸಮಯ ನಾವೆಲ್ಲರೂ ರೋಗದ ಬಗ್ಗೆ ಜಾಗೃತರಾಗಿ ಇದನ್ನು ನಿಯಂತ್ರಿಸಲೇಬೇಕು ಮತ್ತು ಆ ಕೆಲಸವನ್ನು ನಾವು ಮಾಡೇ ತೀರುತ್ತೇವೆ.
> -ಏಕಾಂತ್ ಕುಮಾರ್
> ಆರೋಗ್ಯ ನಿರೀಕ್ಷಣಾಧಿಕಾರಿ

## ಶಾಸಕ ಹಿಟ್ನಾಳ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬಳ್ಳಾರಿ

ಕಲ್ಯಾಣ ಕರ್ನಾಟಕದ ಕುರುಬ ಸಮುದಾಯದವರಾದ ಕೊಪ್ಪಳದಲ್ಲಿ ಮೂರನೇ ಬಾರಿ ಶಾಸಕರಾಗಿರುವ ರಾಘವೇಂದ್ರ ಹಿಟ್ನಾಳ್‌ಗೆ ಸಚಿವ ಸ್ಥಾನ ನೀಡಿ ಎಂದು ಬಳ್ಳಾರಿ ಜಿಲ್ಲಾ ಕುರುಬ ಸಮಾಜದ ಮುಖಂಡರು ಕಾಂಗ್ರೆಸ್ ಪಕ್ಷದ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಡಾ.ಗಾದಿಲಿಂಗನಗೌಡ, ಅವರು ನಗರದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿ. ನಾವು ಶೇ 90 ರಷ್ಟು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರೂ. ನಮ್ಮ ಸಮಜಾಕ್ಕೆ ನ್ಯಾಯಯುತವಾದ ಸ್ಥಾನಮಾನ ದೊರೆಯುತ್ತಿಲ್ಲ ಎಂದು ಆರೋಪಿಸಿದರು.

ಡಿಸಿಸಿ ಅಧ್ಯಕ್ಷರಾಗಿಲ್ಲ. ಜಿಪಂ ಅಧ್ಯಕ್ಷರಾಗಿಲ್ಲ. ಆದರೂ ಈವರೆಗೆ ಸುಮ್ಮನಿರುವುದು ಏಕೆಂದರೆ, ನಮ್ಮ ಸಮಾಜದವರೇ ಸಿಎಂ ಇದ್ದಾರೆಂಬ ಕಾರಣಕ್ಕೆ. ನೀಡುತ್ತಿಲ್ಲ. ಈ ಹಿಂದೆ ಬಳ್ಳಾರಿ ಜಿಲ್ಲೆಯಿಂದ ಹಡಗಲಿಯ ಈ.ಟಿ.ಶಂಬುನಾಥ ಅವರಿಗೆ ಟಿಕಿಟ್ ನೀಡಿ, ಸಚಿವ ಸ್ಥಾನ ನೀಡಿದ್ದು ಬಿಟ್ಟರೆ ನಂತರ ನಮಗೆ ಟಿಕೆಟ್ ನೀಡಿಲ್ಲ.

ಈಗ ನಮ್ಮ ಬೇಡಿಕೆ ಎಂದರೆ ಕಲ್ಯಾಣ ಕರ್ನಾಟಕದ ಭಾಗಕ್ಕೆ ಒತ್ತು ನೀಡಿ. ಸಂಪುಟ ಪುನರ್ ರಚನೆ ಆದರೆ ನಮ್ಮ ಸಮಾಜದವರಾದ ಕೊಪ್ಪಳದ ಶಾಸಕ ರಾಘವೇಂದ್ರ ಹಿಟ್ನಾಳ್ ಅವರಿಗೆ ಸಚಿವ ಸ್ಥಾನ ನೀಡಬೇಕು. ಜೊತೆಗೆ ಒಂದು ಎಂಎಲ್ ಸಿ ಸ್ಥಾನವನ್ನು ನಮ್ಮ ಸಮಾಜದವರಿಗೆ ನೀಡಬೇಕು. ಜೊತೆಗೆ ನಿಗಮ ಮಂಡಳಿಯಲ್ಲೂ ಪಕ್ಷದಲ್ಲಿ ಸಕ್ರೀಯವಾಗಿರುವವ ಇಬ್ಬರಿಗೆ ನೀಡಿ.. ಅದರಲ್ಲಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹುದ್ದೆಯನ್ನು ನೀಡಿ ಬೇಕೆಂದರು.

## ಹೆಚ್ಚಿದ ಉಷ್ಣಾಂಶ: ಅಡಿಕೆ ಹರಳು ಉದುರು ವ್ಯಾಪಕ

• ಉದಯವಾಹಿನಿ, ಶಿರಸಿ

ಪ್ರಸಕ್ತ ಸಾಲಿನಲ್ಲಿ ಬೇಸಿಗೆಯ ಬೇಗೆ ಮಿತಿಮೀರಿದ್ದು, ಇದು ನೇರವಾಗಿ ಅಡಿಕೆಯ ಫಸಲಿನ ಮೇಲೆ ಗಂಭೀರ ಪರಿಣಾಮ ಬೀರತೊಡಗಿದೆ. ಅಡಿಕೆ ಹರಳು ಉದುರು ಹೆಚ್ಚಿದ್ದು, ಭವಿಷ್ಯದ ಬೆಳೆ ಕೈತಪ್ಪುವ ಭೀತಿಯಲ್ಲಿ ರೈತರು ಇದ್ದಾರೆ. ಮಲೆನಾಡಿನ ಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿರುವ ತೀವ್ರ ಹವಾಮಾನ ವೈಪರೀತ್ಯವು ಅಡಿಕೆ ಬೆಳೆಗಾರರ ನಿದ್ದೆಗೆಡಿಸಿದೆ.

ತಾಪಮಾನದಲ್ಲಿನ ವಿಪರೀತ ಏರಿಕೆ ಮತ್ತು ಅಕಾಲಿಕ ಬದಲಾವಣೆಗಳಿಂದಾಗಿ ಅಡಿಕೆ ತೋಟಗಳು ಸಂಕಷ್ಟಕ್ಕೆ ಸಿಲುಕಿದೆ. ಸಾಮಾನ್ಯವಾಗಿ ಅಡಿಕೆ ಮರಗಳಲ್ಲಿ ಡಿಸೆಂಬರ್ ಮತ್ತು ಜನವರಿ ತಿಂಗಳ ಅವಧಿಯಲ್ಲಿ ಹೊಡೆ (ಹೂಗೊಂಚಲು) ಬರುತ್ತದೆ. ಆದರೆ ಈ ಬಾರಿ ವಾತಾವರಣದಲ್ಲಿನ ಉಷ್ಣಾಂಶ ಗಣನೀಯವಾಗಿ ಏರಿಕೆ ಆಗಿರುವುದರಿಂದ ಪರಾಗಸ್ಪರ್ಶ ಪ್ರಕ್ರಿಯೆಯಲ್ಲಿ ವ್ಯತ್ಯಯ ಉಂಟಾಗಿದೆ. ಗರಿಷ್ಠ ತಾಪಮಾನದ ಕಾರಣದಿಂದ ಅಡಿಕೆ ಹರಳುಗಳು ಸರಿಯಾಗಿ ಪರಾಗ ಸ್ಪರ್ಶಗೊಳ್ಳದೆ ಉದುರಿ ಹೋಗುತ್ತಿವೆ.



ಉದಯವಾಹಿನಿ ಚಿತ್ರ

ಶಿರಸಿ ತಾಲ್ಲೂಕಿನ ಸುಮಾರು 11,427 ಹೆಕ್ಟೇರ್ ಹಾಗೂ ಉತ್ತರ ಕನ್ನಡ ಜಿಲ್ಲೆಯ ಒಟ್ಟು 36 ಸಾವಿರ ಹೆಕ್ಟೇರ್ ಅಡಿಕೆ ಬೆಳೆ ಪ್ರದೇಶವಿದೆ. ಶೇ.50ರಷ್ಟು ಅಡಿಕೆ ತೋಟ ಈ ಹವಾಮಾನದ ಹೊಡೆತಕ್ಕೆ ಸಿಲುಕಿದೆ. ಭೂಮಿಯಲ್ಲಿ ತೇವಾಂಶದ ಕೊರತೆ ಮತ್ತು ಗಾಳಿಯಲ್ಲಿನ ಆದ್ರ್ರತೆಯ ಏರಿಳಿತದಿಂದಾಗಿ ಮರಗಳು ಸೊರಗುತ್ತಿವೆ. ಇದು ಕೇವಲ ಆರಂಭಿಕ ಹಂತಕ್ಕೆ ಸೀಮಿತವಾಗದೆ, ಮೂರು ಮತ್ತು ನಾಲ್ಕನೇ ಹಂತದ ಗೊನೆಗಳ ಮೇಲೂ ಕೆಟ್ಟ ಪರಿಣಾಮ ಬೀರಿದ್ದು, ರೈತರು ಅತಿ ಹೆಚ್ಚಿನ ಪ್ರಮಾಣದ ನಷ್ಟವನ್ನು ಅನುಭವಿಸುವಂತಾಗಿದೆ ಎನ್ನುತ್ತಾರೆ ಬೆಳೆಗಾರರು.

ಈ ಸಮಸ್ಯೆಗಳ ನಡುವೆ ಶಿಂಗಾರ ಕೊಳೆ ರೋಗದ ಬಾಧೆಯೂ ತೋಟಗಳನ್ನು ಕಾಡುತ್ತಿದೆ. ಬಿಸಿಲಿನ ತಾಪದ ನಡುವೆಯೇ ಅಕಾಲಿಕವಾಗಿ ಸುರಿಯುತ್ತಿರುವ ಮಳೆ ಈ ರೋಗ ಹರಡಲು ಪ್ರಮುಖ ಕಾರಣವಾಗಿದೆ. ಒಮ್ಮೆ ಬಿಸಿಲು, ಮತ್ತೊಮ್ಮೆ ಮಳೆ ಬರುವ ಇಂತಹ ಲಯಬದ್ಧವಲ್ಲದ ಹವಾ ಮಾನವು ಶಿಲೀಂದ್ರಗಳ ಬೆಳವಣಿಗೆಗೆ ಪೂರಕವಾಗಿ ಪರಿಣಮಿಸಿದೆ. ಪರಿಣಾಮವಾಗಿ, ಹೂಗೊಂಚಲುಗಳು ಕೊಳೆತು ಉದುರುತ್ತಿವೆ. ಈ ರೋಗವನ್ನು ನಿಯಂತ್ರಿಸಲು ಶಿಲೀಂದ್ರನಾಶಕಗಳ ಸಿಂಪಡಣೆ ಅನಿವಾರ್ಯವಾಗಿದ್ದರೂ, ಪ್ರಸ್ತುತ ಇರುವ ಅತಿಯಾದ ಶೆಖೆಯಿಂದಾಗಿ ಮದ್ದು ಸಿಂಪಡಿಸುವುದು ಕೂಡ ಕಾರ್ಮಿಕರಿಗೆ ಮತ್ತು ರೈತರಿಗೆ ಸವಾಲಾಗಿ ಪರಿಣಮಿಸಿದೆ. ಅತಿಯಾದ ತಾಪಮಾನದಲ್ಲಿ ಔಷಧಿ ಸಿಂಪಡಣೆ ಮಾಡುವುದು ಬೆಳೆಗೂ ಹಾನಿಕಾರಕವಾಗುವ ಸಾಧ್ಯತೆ ಇರುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

## ಬದ್ಧತೆಯಿಂದ ಕಾರ್ಯನಿರ್ವಹಿಸಿ ಡಾ. ಅಜಯಸಿಂಗ್ ಸೂಚನೆ

• ಉದಯವಾಹಿನಿ, ಕಲಬುರಗಿ

ನಗರದ ಕೆಕೆಆರ್‌ಡಿಬಿ ಸಭಾಂಗಣದಲ್ಲಿ ಯಡ್ರಾಮಿ ಮತ್ತು ಜೇವರ್ಗಿ ತಾಲ್ಲೂಕಿನ ತಹಶೀಲ್ದಾರರೊಂದಿಗೆ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಶಾಸಕ ಡಾ. ಅಜಯ್ ಸಿಂಗ್ ಅವರು ಅಧಿಕಾರಿಗಳ ಜೊತೆಗೆ ಮಹತ್ವದ ಸಭೆ ನಡೆಸಿದರು. ಬೇಸಿಗೆಯ ಬಿಸಿಲಿನ ಬೇಗೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಎರಡೂ ತಾಲ್ಲೂಕುಗಳ ಪಟ್ಟಣ ಹಾಗೂ ಹಳ್ಳಿಗಳಲ್ಲಿ ಜನರಿಗೆ ಕುಡಿಯುವ ನೀರಿನ ಕೊರತೆಯಾಗದಂತೆ ಎಚ್ಚರವಹಿಸಲು ಚರ್ಚಿಸಲಾಯಿತು. ಈ ನಿಟ್ಟಿನಲ್ಲಿ, ತುರ್ತು ಅಗತ್ಯಗಳನ್ನು ಪೂರೈಸಲು ಮತ್ತು ನಿರಂತರ ಮೇಲ್ವಿಚಾರಣೆ ನಡೆಸಲು ವಿಶೇಷ ಕಾರ್ಯಪಡೆಯನ್ನು ರಚಿಸಲಾಯಿತು. ಎರಡೂ ತಾಲೂಕುಗಳ ಜನತೆಗೆ ನೀರಿನ ಸಮಸ್ಯೆ ಉಂಟಾಗದಂತೆ ಆಡಳಿತ ವರ್ಗವು ಸಂಪೂರ್ಣ ಬದ್ಧತೆಯಿಂದ ಕಾರ್ಯನಿರ್ವಹಿಸುವಂತೆ ಈ ಸಂದರ್ಭದಲ್ಲಿ ಡಾ. ಅಜಯ್ ಸಿಂಗ್ ಅವರು ಖಡಕ್ ಸೂಚನೆ ನೀಡಿದರು.

## ಸಿಲಿಂಡರ್ ಬ್ಲಾಸ್ಟ್ ಸಾಮಾನುಗಳು ಭಸ್ಮ

• ಉದಯವಾಹಿನಿ, ಬಳ್ಳಾರಿ

ಜಿಲ್ಲೆಯ ಕಂಪ್ಲಿ ಪಟ್ಟಣದ 4ನೇ ವಾರ್ಡ್‌ನಲ್ಲಿ ಯಲ್ಲಪ್ಪ ಅವರ ಮನೆಯಲ್ಲಿ ನಿನ್ನೆ ಸಿಲಿಂಡರ್ ಸ್ಫೋಟ ಸಂಭವಿಸಿ ಮನೆಗೆ ವ್ಯಾಪಕ ಹಾನಿಯಾಗಿದೆ. ಸ್ಫೋಟದ ತೀವ್ರತೆಗೆ ಮನೆಯಲ್ಲಿದ್ದ ಸಾಮಾನುಗಳು ಸಂಪೂರ್ಣ ಸುಟ್ಟು ಕರಕಲಾಗಿವೆ. ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಕ್ಷಣಾರ್ಧದಲ್ಲೇ ಬೆಂಕಿ ವ್ಯಾಪಿಸಿಕೊಂಡು ಮನೆಯನ್ನು ಆವರಿಸಿತು. ಬೆಂಕಿಯ ಕೆನ್ನಾಲಿಗೆಗೆ ಮನೆಯ ಮೇಲ್ಛಾವಣಿ ಸಂಪೂರ್ಣ ಸುಟ್ಟು ಹೋಗಿದ್ದು, ಒಳಗಿದ್ದ ಪೀಠೋಪಕರಣಗಳು, ಗೃಹೋಪಯೋಗಿ ವಸ್ತುಗಳು ಹಾಗೂ ಇತರೆ ಸಾಮಾನುಗಳು ಭಸ್ಮವಾಗಿವೆ.

ಘಟನೆ ನಡೆದ ತಕ್ಷಣ ಅಗ್ನಿಶಾಮಕ ದಳ್ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಕೆಲಕಾಲ ಕಾರ್ಯಾಚರಣೆ ನಡೆಸಿದ ಬಳಿಕ ಬೆಂಕಿಯನ್ನು ನಿಯಂತ್ರಣಕ್ಕೆ ತಂದು ಮತ್ತಷ್ಟು ಅನಾಹುತ ತಪ್ಪಿಸಲಾಯಿತು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸಿಲಿಂಡರ್ ಸ್ಫೋಟಕ್ಕೆ ನಿಖರ ಕಾರಣವೇನು ಎಂಬುದರ ಕುರಿತು ಮಾಹಿತಿ ಕಲೆಹಾಕಿದರು.

## ಯುವ ಸಮುದಾಯಯ ದೇಶದ ಭವಿಷ್ಯ

• ಉದಯವಾಹಿನಿ, ಮೂಲ್ಕಿ

ಯುವ ಸಮುದಾಯಯ ದೇಶದ ಭವಿಷ್ಯವಾಗಿದ್ದು ತಮ್ಮ ಸೇವಾ ಸಂಸ್ಥೆಗಳ ಮೂಲಕ ಶಿಕ್ಷಣ, ಕ್ರೀಡೆ ಸಹಿತ ಅನೇಕ ಸಮಾಜಮುಖಿ ಕಾರ್ಯಗಳು ನಡೆಯುತ್ತಿದ್ದು ಕಿನ್ನಿಗೋಳಿಯ ವಿಶೇಷ ಚೇತನ ಶಾಲೆಗೆ ಪ್ರೇರಣಾ ಶಕ್ತಿಯಾಗಿ ನಿರಂತರವಾಗಿ ಕಾರ್ಯಕ್ರಮಗಳು ನಡೆಯುತ್ತಿದೆ ಎಂದು ಕಿನ್ನಿಗೋಳಿಯ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆಯ ಅಧ್ಯಕ್ಷ ಡಾ.ನಿಡ್ಡೋಡಿ ಚಾವಡಿ ಮನೆ ಜಗನ್ನಾಥ ಶೆಟ್ಟಿ ಹೇಳಿದರು.ಕಿನ್ನಿಗೋಳಿ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆ ವತಿಯಿಂದ ಕಿನ್ನಿಗೋಳಿ ಸೈಂಟ್ ಮೇರೀಸ್ ಸ್ಪೆಷಲ್ ಸ್ಕೂಲ್, ಚರ್ಚ್ ಬಳಿ ನಡೆದ ದಕ್ಷಿಣ ಕನ್ನಡ- ಉಡುಪಿ ಜಿಲ್ಲಾ ಮಟ್ಟದ ಪುರುಷರ ಮತ್ತು ಮಹಿಳೆಯರ ಹಗ್ಗ-ಜಗ್ಗಾಟ ಸ್ಪರ್ಧೆಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಕಿನ್ನಿಗೋಳಿ ಕೊಸಸಾಂವ್ ಚರ್ಚ್‌ನ ಧರ್ಮ ಗುರುಗಳಾದ ಫಾ.ಜೋಕಿಂ ಫೆರ್ನಾಂಡಿಸ್ ಸ್ಪರ್ಧೆಯನ್ನು ಉದ್ಘಾಟಿಸಿದರು. ಸ್ಪರ್ಧೆಯ ಹಸಿರು ನಿಶಾನೆಯನ್ನು ಬಿಜೆಪಿಯ ದ.ಕ.ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ನೆರವೇರಿಸಿದರು. ಮೂಡುಬಿದಿರೆ ಕ್ಷೇತ್ರದ ಬಿಜೆಪಿಯ ಮಂಡಲಾಧ್ಯಕ್ಷ ದಿನೇಶ್ ಪುತ್ರನ್, ಕಿನ್ನಿಗೋಳಿ ಯುಗಪುರುಷದ ಸಂಪಾದಕ ಭುವನಾಭಿರಾಮ ಉಡುಪ, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ, ಸದಸ್ಯರಾದ ಪ್ರಕಾಶ್ ಆಚಾರ್ಯ, ಪ್ರಣೀಕ್ ಮತ್ತಿತರರು ಉಪಸ್ಥಿತರಿದ್ದರು.






ಉದಯವಾಹಿನಿ ಚಿತ್ರ

# 15 ದಿನದೊಳಗೆ ನಗರದ ರಸ್ತೆ ಹಂಪ್‌ಗಳಿಗೆ ಬಣ್ಣ: ಡಿಸಿ ಭರವಸೆ

### ಸ್ಟೇಟ್ ಬ್ಯಾಂಕ್‌ನ ತಾತ್ಕಲಿಕ ಬಸ್ ನಿಲ್ದಾಣ ಇಂದಿಗೂ ತಾತ್ಕಲಿಕವಾಗಿಯೇ ಉಳಿದಿದ್ದು, ನಗರದಲ್ಲಿ ವಾಹನ ದಟ್ಟಣೆ ಹೆಚ್ಚಳವಾಗುತ್ತಿದೆ

• ಉದಯವಾಹಿನಿ, ಮಂಗಳೂರು

ಮಂಗಳೂರು ನಗರದ ರಸ್ತೆಗಳಲ್ಲಿನ ಹಂಪ್‌ಗಳಿಗೆ 15 ದಿನಗಳೊಳಗೆ ಬಣ್ಣ ಹಾಕುವ ಕೆಲಸ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಮತ್ತು ಮಂಗಳೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿ ದರ್ಶನ್ ಎಚ್.ವಿ. ಭರವಸೆ ನೀಡಿದರು. ಅವರು ಮಂಗಳೂರಿನ ಮಹಾನಗರ ಪಾಲಿಕೆ ಕಚೇರಿಯಲ್ಲಿ ಫೋನ್ ಇನ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ನಗರದ ರಸ್ತೆಗಳಲ್ಲಿ ಅಳವಡಿಸಲಾಗಿರುವ ಹಂಪ್‌ಗಳಿಗೆ ಸೂಚನಾ ಬಣ್ಣ ಇಲ್ಲದೆ ತಕ್ಷಣಕ್ಕೆ ಹಂಪ್‌ಗಳು ಗಮನಕ್ಕೆ ಬಾರದೇ ಅಪಘಾತಗಳು ಸಂಭವಿಸುತ್ತಿರುವ ಬಗ್ಗೆ ಫೋನ್ ಇನ್ ಕಾರ್ಯಕ್ರಮದಲ್ಲಿ ಹಲವು ಮಂದಿ ದೂರು ನೀಡಿದರು. ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ದರ್ಶನ್, ನಗರದ ರಸ್ತೆಗಳ ಹಂಪ್ ಗಳಿಗೆ ಸೂಚನಾ ಬಣ್ಣ ಹಾಕಲು ಈಗಾಗಲೇ ಪ್ರಕ್ರಿಯೆ ನಡೆಸಲಾಗಿದ್ದು, ಮುಂದಿನ 15 ದಿನದೊಳಗೆ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಮೂಡುಬೆಟ್ಟುವಿನ ವ್ಯಕ್ತಿಯೋರ್ವರು ಕರೆ ಮಾಡಿ, ಬಗ್ಗುಂಡಿ ಕೆರೆ ಒತ್ತುವರಿ ಆಗಿದ್ದು, ಇದೀಗ ಈ ಕೆರೆಗೆ ಕೊಳಚೆ ನೀರು ಸೇರುತ್ತಿದೆ. ಈ ಕೆರೆಯನ್ನು ಅಭಿವೃದ್ಧಿ ಮಾಡಿ ಪ್ರವಾಸಿ ತಾಣವನ್ನಾಗಿ ಮಾಡಬಹುದು. ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುತ್ತೇನೆ ಎಂದು ಡಿಸಿ ಭರವಸೆ ನೀಡಿದರು.

ಸ್ಟೇಟ್ ಬ್ಯಾಂಕ್‌ನ ತಾತ್ಕಲಿಕ ಬಸ್ ನಿಲ್ದಾಣ ಇಂದಿಗೂ ತಾತ್ಕಲಿಕವಾಗಿಯೇ ಉಳಿದಿದ್ದು, ಇದರಿಂದ ನಗರದಲ್ಲಿ ವಾಹನ ದಟ್ಟಣೆ ಹೆಚ್ಚಳವಾಗುತ್ತಿದೆ. ಅದನ್ನು ಪಡೀಲ್‌ಗೆ ಶಿಫ್ಟ್ ಮಾಡಬೇಕು ಎಂದು ಪ್ರಭು ಎಂಬವರು ಆಗ್ರಹಿಸಿದರು. 1.5 ಕಿಮೀ. ದೂರಕ್ಕೆ ಆಟೋ 50 ರು. ಬಾಡಿಗೆ ಪಡೆದ ಬಗ್ಗೆ ಪ್ರದೀಪ್ ಎಂಬವರು ದೂರು ನೀಡಿದರು. ಈ ಬಗ್ಗೆ ಕ್ರಮಕ್ಕೆ ಡಿಸಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಹಲವೆಡೆ ಡ್ರೈನೇಜ್ ಸಮರ್ಪಕವಾಗಿಲ್ಲದೆ ರಸ್ತೆಯಲ್ಲೇ ಡ್ರೈನೇಜ್ ನೀರು ಹರಿಯುತ್ತಿರುವ ಬಗ್ಗೆ ನಾಗರಿಕರು ದೂರಿದರು.

ಇದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದು, ಇದಕ್ಕೆ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ನಗರದ ಸಮರ್ಪಕ ಯುಜಿಡಿ ಯೋಜನೆಯ ಬಗ್ಗೆ ಈಗಾಗಲೇ ಯೋಜನೆ ರೂಪಿಸಲಾಗಿದೆ. ಸಣ್ಣಪುಟ್ಟ ಕೆಲಸವನ್ನು ಪಾಲಿಕೆ ವತಿಯಿಂದ ನಡೆಸಲಾಗುವುದು, ದೊಡ್ಡ ಕಾಮಗಾರಿಗಳನ್ನು ವಿಶೇಷ ಅನುದಾನದಲ್ಲಿ ನಡೆಸಲು ಪ್ರಕ್ರಿಯೆ ನಡೆಯುತ್ತಿದೆ ಎಂದು ಡಿಸಿ ತಿಳಿಸಿದರು. ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

**ಚರಂಡಿ, ರಸ್ತೆ, ರಾಜಕಾಲುವೆ ಬಗ್ಗೆ ದೂರು**

ಮಳೆಗಾಲಕ್ಕೆ ಮೊದಲು ಚರಂಡಿ ದುರಸ್ತಿ ಮಾಡಬೇಕು, ರಾಜಕಾಲುವೆ ಹೂಳು ತೆಗೆಯಬೇಕು, ಮನೆ ಬಳಿಯ ಅಪಾಯಕಾರಿ ಮರದ ಗೆಲ್ಲು ತೆರವು ಮಾಡಬೇಕು, ಅಪೂರ್ಣ ಸ್ಥಿತಿಯಲ್ಲಿರುವ ಕಾಮಗಾರಿ ಪೂರ್ಣಗೊಳಿಸಬೇಕು, ಕಸ ಸಾಗಾಟ ಬಗ್ಗೆ ಎಂಬಿತ್ಯಾದಿ ದೂರುಗಳ ಸಂಖ್ಯೆ ಅಧಿಕವಾಗಿತ್ತು. ಮಳೆಗಾಲಕ್ಕೆ ಮೊದಲು ಮಳೆಗಾಲದ ಪೂರ್ವ ತಯಾರಿ ಕೆಲಸಗಳನ್ನು ಪೂರ್ಣಗೊಳಿಸಲು ಈಗಾಗಲೇ ಸೂಚಿಸಲಾಗಿದೆ, ಪರಿಹಾರ ಕಾಮಗಾರಿ ನಡೆಯಲಿದೆ, ಈ ವೇಳೆ ಸಾರ್ವಜನಿಕರಿಗೂ ಮಾಹಿತಿ ನೀಡಲಾಗುತ್ತದೆ ಎಂದು ಡಿಸಿ ದರ್ಶನ್ ತಿಳಿಸಿದರು.

**ಕಾಲುವೆ ನೀರು ಮನೆಗೆ**

ಸುಭಾಷ್‌ನಗರದ ವ್ಯಕ್ತಿಯೋರ್ವರು ಕರೆ ಮಾಡಿ, ಮಳೆ ಸಂದರ್ಭದಲ್ಲಿ ರಾಜ ಕಾಲುವೆ ನೀರು ಮನೆಗೆ ನುಗ್ಗುತ್ತಿದ್ದು, ಮನೆ ಮುಳುಗುತ್ತಿದೆ. ಈ ವರ್ಷವೂ ಸಮಸ್ಯೆ ಆಗುವ ಭೀತಿ ಇದೆ. ಇದಕ್ಕೆ ಪರಿಹಾರ ಕಲ್ಪಿಸಿ ಎಂದು ಅಳಲು ತೋಡಿಕೊಂಡರು. ಅವರನ್ನು ಸಮಾಧಾನ ಪಡಿಸಿದ ಡಿಸಿ,ಇವತ್ತೇ ನಿಮ್ಮಲ್ಲಿಗೆ ಇಂಜಿನಿಯರ್ ಅವರನ್ನು ಕಳುಹಿಸಿ ಪರಿಶೀಲನೆಗೆ ಸೂಚಿಸುತ್ತೇನೆ ಎಂದರು. ಮುಂದಿನ ಫೋನ್ ಇನ್ ಕಾರ್ಯಕ್ರಮಕ್ಕೆ ಎಲ್ಲಾ ಇಂಜಿನಿಯರ್‌ಗಳು ಭಾಗವಹಿಸಬೇಕು ಎಂದು ಡಿಸಿ ನಿರ್ದೇಶನ ನೀಡಿದರು.

## ಕುಡಿವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ: ವೆಂಕಟರಾವ ದೇಶಪಾಂಡೆ

• ಉದಯವಾಹಿನಿ, ಕಮಲನಗರ

2026ರ ಜೂನ ರೊಳಗೆ ಗ್ರಾಮ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲಾಗುವುದು ಎಂದು ಪಿಡಿಒ ವೆಂಕಟರಾವ ದೇಶಪಾಂಡೆ ಹೇಳಿದರು. ತಾಲ್ಲೂಕಿನ ಡಿಗ್ಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ರಾಂಪೂರು ಗ್ರಾಮದಲ್ಲಿ ಈಚೆಗೆ ಕುಡಿವ ನೀರಿನ ಸಮಸ್ಯೆ ಉಲ್ಬಣಗೊಂಡ ಪರಿಣಾಮ ಗ್ರಾಮದ ರಸ್ತೆ ಸಮೀಪದ ಕೊಳವೆಬಾವಿ ರೀಪೇರಿ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಹವಾಲು ಸ್ವಿಕರಿಸಿಕೊಂಡ ನಂತರ ಅವರು ಮಾತನಾಡಿದರು. ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಕೈಗೊಳ್ಳಬೇಕಿರುವ ಅಭಿವೃದ್ಧಿ ಕಾಮಗಾರಿ ಹಾಗೂ ತುರ್ತಾಗಿ ಆಗಲೇಬೇಕಿರುವ ಕೆಲಸದ ಕುರಿತು ಮಾಹಿತಿ ಪಡೆದರು.




ಉದಯವಾಹಿನಿ ಚಿತ್ರ

ರಾಷ್ಟ್ರೀಯ ಮೋದಿ ಸೇವಾ ಸಮಿತಿ ತಾಲ್ಲೂಕು ಘಟಕ ಅಧ್ಯಕ್ಷ ಬಬನ ರಾಠೋಡ್, ಸಚಿನ, ಮಂಗೇಶ, ಸೂರ್ಯಕಾಂತ, ಸಾಗರ, ಭೀಮರಾವ, ಗಣಪತಿ ಹಾಗೂ ಗ್ರಾಮದ ಮಹಿಳೆಯರು ಇದ್ದರು.

ಉದಯ ವಾಹಿನಿ
ದೇಶ/ವಿದೇಶ
ಮಂಗಳವಾರ
28 ಏಪ್ರಿಲ್ 2026


# ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸಿಎಂ ಪ್ರಮಾಣ ವಚನಕ್ಕೆ ಸಿದ್ಧರಾಗಿ: ಮತದಾರರಿಗೆ ಪ್ರಧಾನಿ ಮೋದಿ ಕರೆ





**ಕೋಲ್ಕತ್ತಾ:** ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯ ಕಾವು ಏರುತ್ತಿರುವ ಬೆನ್ನಲ್ಲೇ, ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ರಾಜ್ಯದ ಜನತೆಗೆ ಅತ್ಯಂತ ಆಪ್ತವಾದ ಪತ್ರವೊಂದನ್ನು ಬರೆದಿದ್ದಾರೆ. ತಮ್ಮ ಚುನಾವಣಾ ಪ್ರಚಾರದ ಅನುಭವಗಳನ್ನು ಹಂಚಿಕೊಂಡಿರುವ ಅವರು, ಇದು ಕೇವಲ ರಾಜಕೀಯ ಪ್ರವಾಸವಾಗಿರದೆ ತಮಗೆ ಒಂದು ಆಧ್ಯಾತ್ಮಿಕ ಪಯಣವಾಗಿತ್ತು ಎಂದು ತಿಳಿಸಿದ್ದಾರೆ.

ಪ್ರಚಾರದ ವೇಳೆ ಅನುಭವಕ್ಕೆ ಬಂದ ವಿಶೇಷ ಶಕ್ತಿಯ ಬಗ್ಗೆ ವಿವರಿಸಿರುವ ಪ್ರಧಾನಿ, ಬಿಸಿಲು ಮತ್ತು ಸತತ ರ್‍ಯಾಲಿಗಳ ನಡುವೆಯೂ ನನಗೆ ದಣಿವು ಎನಿಸಲಿಲ್ಲ. ಈ ಪ್ರಚಾರದ ಹಾದಿ ನನಗೆ ತೀರ್ಥಯಾತ್ರೆಯಂತೆ ಭಾಸವಾಯಿತು. ಮಾ ಕಾಳಿಯ ಭಕ್ತರ ನಡುವೆ ಹೋದಾಗಲೆಲ್ಲಾ, ಸಾಕ್ಷಾತ್ ಆ ತಾಯಿಯೇ ನನ್ನಲ್ಲಿ ಹೊಸ ಚೈತನ್ಯ ತುಂಬುತ್ತಿದ್ದಾಳೆ ಎನಿಸುತ್ತಿತ್ತು ಎಂದು ಬರೆದಿದ್ದಾರೆ. ಜನವರಿ 2024ರಲ್ಲಿ ಅಯೋಧ್ಯೆಯ ರಾಮಮಂದಿರ ಪ್ರಾಣಪ್ರತಿಷ್ಠೆಯ ಸಂದರ್ಭದಲ್ಲಿ ತಮಗೆ ಯಾವ ರೀತಿಯ ಆಧ್ಯಾತ್ಮಿಕ ಅನುಭೂತಿ ಆಗಿತ್ತೋ, ಅದೇ ರೀತಿಯ ಅನುಭವ ಈಗ ಬಂಗಾಳದ ಪ್ರಚಾರದಲ್ಲೂ ಆಗಿದೆ ಎಂದು ಅವರು ಹೋಲಿಸಿದ್ದಾರೆ.

ಜನರ ಪ್ರೀತಿಯೇ ನನ್ನ ದೊಡ್ಡ ಆಸ್ತಿ

ರ್‍ಯಾಲಿ ಮತ್ತು ರೋಡ್ ಶೋಗಳ ವೇಳೆ ಜನರು ನೀಡಿದ ಸಂದೇಶಗಳು, ಪತ್ರಗಳು ಮತ್ತು ಭಾವಚಿತ್ರಗಳ ಬಗ್ಗೆ ಮೋದಿ ಮೆಲುಕು ಹಾಕಿದ್ದಾರೆ. ರಾತ್ರಿಯ ವೇಳೆ ಬಿಡುವಾದಾಗ ನೀವು ನೀಡಿದ ಪ್ರತಿಯೊಂದು ಪತ್ರವನ್ನೂ ನಾನು ಓದುತ್ತೇನೆ, ಚಿತ್ರಗಳನ್ನು ಗಮನಿಸುತ್ತೇನೆ. ಯುವಕರು, ಮಹಿಳೆಯರು ಮತ್ತು ಹಿರಿಯರು ತೋರಿದ ಈ ಅಪಾರ ಪ್ರೀತಿಯೇ ನನ್ನ ಜೀವನದ ಅತ್ಯಮೂಲ್ಯ ಸಂಪತ್ತು ಎಂದು ಅವರು ಭಾವುಕರಾಗಿ ನುಡಿದಿದ್ದಾರೆ. ರಾಜಕೀಯ ಸಮರದ ನಡುವೆಯೂ ಬಂಗಾಳದ ಜನರೊಂದಿಗೆ ತಮಗಿರುವ ಭಾವನಾತ್ಮಕ ಸಂಬಂಧವನ್ನು ಈ ಪತ್ರದ ಮೂಲಕ ಪ್ರಧಾನಿ ಮೋದಿ ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

ಪಶ್ಚಿಮ ಬಂಗಾಳದ ಎರಡನೇ ಹಾಗೂ ಅಂತಿಮ ಹಂತದ ಮತದಾನ ಏಪ್ರಿಲ್ 29ರಂದು ನಡೆಯಲಿದೆ. ಈ ಸಂದರ್ಭದಲ್ಲಿ ಬಂಗಾಳದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಹೊರಬಂದು ಮತ ಚಲಾಯಿಸುವ ಮೂಲಕ ಹೊಸ ದಾಖಲೆ ನಿರ್ಮಿಸಬೇಕು ಎಂದು ಪ್ರಧಾನಿ ಮೋದಿ ಮನವಿ ಮಾಡಿದ್ದಾರೆ. ಪ್ರಜಾಪ್ರಭುತ್ವದ ಹಬ್ಬದಲ್ಲಿ ಬಿಜೆಪಿಯ ವಿಜಯ ಪತಾಕೆಯನ್ನು ಹಾರಿಸಲು ಇದು ಸುವರ್ಣ ಅವಕಾಶ ಎಂದು ಅವರು ಬಣ್ಣಿಸಿದ್ದಾರೆ.

ತಮ್ಮ ಸಂದೇಶದಲ್ಲಿ ಮೋದಿ ಅವರು ಬಂಗಾಳದ ಯುವಶಕ್ತಿ, ಮಹಿಳಾ ಶಕ್ತಿ, ರೈತರು ಮತ್ತು ಕಾರ್ಮಿಕರ ಮೇಲೆ ಅಚಲ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಬಿಜೆಪಿಯ ಗೆಲುವು ಕೇವಲ ಒಂದು ರಾಜಕೀಯ ಬದಲಾವಣೆಯಲ್ಲ, ಅದು ಬಂಗಾಳದ ಅಭಿವೃದ್ಧಿಯ ನವಯುಗದ ಆರಂಭ ಎಂದು ಅವರು ಪ್ರತಿಪಾದಿಸಿದ್ದಾರೆ. ಬಂಗಾಳದ ಜನರು ಭ್ರಷ್ಟಾಚಾರ ಮತ್ತು ಅರಾಜಕತೆಯ ವಿರುದ್ಧ ಮತ ಚಲಾಯಿಸಿ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತಾರೆ ಎಂಬ ಭರವಸೆ ವ್ಯಕ್ತಪಡಿಸಿದ್ದಾರೆ.

**ಪ್ರತಿ ಕುಟುಂಬಕ್ಕೂ ತಲುಪಿದ ಸಂದೇಶ**

ಬಂಗಾಳದ ನನ್ನ ಪ್ರಿಯ ಸಹೋದರ ಸಹೋದರಿಯರೇ ಎಂದು ಪತ್ರ ಆರಂಭಿಸಿರುವ ಮೋದಿ, ಪ್ರಜಾಪ್ರಭುತ್ವದ ಈ ಪವಿತ್ರ ಹಬ್ಬದಲ್ಲಿ ಭಾಗವಹಿಸಲು ತಮಗೆ ಹೆಮ್ಮೆ ಎನಿಸುತ್ತಿದೆ ಎಂದಿದ್ದಾರೆ. ಈ ಪತ್ರದ ಮೂಲಕ ರಾಜ್ಯದ ಪ್ರತಿ ಕುಟುಂಬದ ಜೊತೆಗೆ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಿರುವುದಾಗಿ ಅವರು ಹೇಳಿದ್ದಾರೆ. ಚುನಾವಣಾ ಪ್ರಚಾರದ ಹಂತದಲ್ಲಿ ಬಿಜೆಪಿಯ ಅಭಿವೃದ್ಧಿಯ ನೀಲಿನಕ್ಷೆಯನ್ನು ಜನರ ಮುಂದಿಟ್ಟ ತೃಪ್ತಿ ತಮಗಿದೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

# ಇಬ್ಬರು ಪಾಕ್ ಪ್ರಜೆಗಳು ಸೇರಿದಂತೆ ಐವರು ಉಗ್ರರ ಬಂಧನ





**ಜಮ್ಮು:** ಅಂತರರಾಜ್ಯ ಲಷ್ಕರ್, ಎ-ತೈಬಾ ಭಯೋತ್ಪಾದಕ ಘಟಕವನ್ನು ಪತ್ತೆಹಚ್ಚಿದ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಸೋಮವಾರ ಇಬ್ಬರು ಪಾಕಿಸ್ತಾನಿ ಪ್ರಜೆಗಳು ಸೇರಿದಂತೆ ಐವರು ಭಯೋತ್ಪಾದಕರನ್ನು ವಿಚಾರಣೆಗಾಗಿ ವಶಕ್ಕೆ ಪಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣವು ಏಪ್ರಿಲ್ 7 ರಂದು ಜಮ್ಮು ಮತ್ತು ಕಾಶ್ಮೀರ ಪೊಲೀಸರು ನಡೆಸಿದ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯಲ್ಲಿ ಐದು ಎಲ್‌ಇಟಿ ಕಾರ್ಯಕರ್ತರನ್ನು ಬಂಧಿಸಿದ್ದಕ್ಕೆ ಸಂಬಂಧಿಸಿದೆ. ಬಂಧಿತರಲ್ಲಿ ಅಬ್ದುಲ್ಲಾ ಅಲಿಯಾಸ್ ಅಬು ಹುರೇರಾ ಕೂಡ ಸೇರಿದ್ದಾರೆ. ಅಬ್ದುಲ್ಲಾ 16 ವರ್ಷಗಳಿಂದ ತಲೆಮರೆಸಿಕೊಂಡಿದ್ದರು ಮತ್ತು ಕೇಂದ್ರಾಡಳಿತ ಪ್ರದೇಶದ ಹೊರಗೆ ನೆಲೆಗಳನ್ನು ಸ್ಥಾಪಿಸಿದ್ದಾರೆಂದು ಅಧಿಕಾರಿಗಳು ತಿಳಿಸಿದ್ದಾರೆ. ಎಲ್ ಇಟಿ ಜಾಲ ಮತ್ತು ಅದರ ಸಂಪರ್ಕಗಳನ್ನು ಪತ್ತೆಹಚ್ಚಲು ಹೆಚ್ಚಿನ ವಿಚಾರಣೆ ನಡೆಯುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಬ್ದುಲ್ಲಾ ಜೊತೆಗೆ, ಮತ್ತೊಬ್ಬ ಪಾಕಿಸ್ತಾನಿ ಭಯೋತ್ಪಾದಕ ಉಸ್ಮಾನ್ ಅಲಿಯಾಸ್ ಖುಬೈಬ್ ಮತ್ತು ಶ್ರೀನಗರ ನಿವಾಸಿಗಳಾದ ಮೊಹಮ್ಮದ್ ನಕೀಬ್ ಭಟ್, ಆದಿಲ್ ರಶೀದ್ ಮತ್ತು ಗುಲಾಮ್ ಮೊಹಮ್ಮದ್ ಮಿರ್ ಅಲಿಯಾಸ್ ಮಾಮಾ ಅವರನ್ನು ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಹಾಗೂ ಕೇಂದ್ರೀಯ ಸಂಸ್ಥೆಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಬಂಧಿಸಲಾಗಿದೆ. ಪ್ರಕರಣವನ್ನು ಹೆಚ್ಚಿನ ತನಿಖೆಗಾಗಿ ಎನ್‌ಐಎ ವಹಿಸಿಕೊಂಡ ನಂತರ, ತನಿಖಾ ಸಂಸ್ಥೆಯು ಇಂದು ಬಂಧಿತ ಭಯೋತ್ಪಾದಕರನ್ನು ಜಮ್ಮುವಿನ ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನ್ಯಾಯಾಲಯವು ಎಲ್ಲಾ ಐದು ಬಂಧಿತ ಭಯೋತ್ಪಾದಕರನ್ನು ಎನ್‌ಐಎ ಕಸ್ಟಡಿಗೆ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಬ್ಬರು ಪಾಕಿಸ್ತಾನಿ ಪ್ರಜೆಗಳಿಗೆ ಎರಡು ದಿನ ಕಸ್ಟಡಿ ನೀಡಲಾಗಿದ್ದರೆ, ಮೂವರು ಸ್ಥಳೀಯ ಭಯೋತ್ಪಾದಕರನ್ನು 15 ದಿನ ಎನ್‌ಐಎ ಕಸ್ಟಡಿಗೆ ನೀಡಲಾಗಿದೆ.

# ಲಡಾಖ್‌ನಲ್ಲಿ 5 ಹೊಸ ಜಿಲ್ಲೆಗಳ ಘೋಷಣೆ



**ಶ್ರೀನಗರ:** ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಲಡಾಖ್ ಪ್ರವಾಸಕ್ಕೂ ಮುನ್ನ, ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನಲ್ಲಿ ಆಡಳಿತಾತ್ಮಕ ಸುಧಾರಣೆಯ ಭಾಗವಾಗಿ ಐದು ಹೊಸ ಜಿಲ್ಲೆಗಳ ರಚನೆಗಾಗಿ ಅಲ್ಲಿನ ಆಡಳಿತ ಮಂಡಳಿ ಸೋಮವಾರ ಅಧಿಕೃತ ಅನುಮೋದನೆ ನೀಡಿದೆ. ಕಾರ್ಗಿಲ್ ಪ್ರದೇಶದಲ್ಲಿ ಜನ್ಸ್ಕರ್ ಮತ್ತು ದ್ರಾಸ್ ಹಾಗೂ ಲೇಹ್ ಪ್ರದೇಶದಲ್ಲಿ ಶ್ಯಾಮ್, ನುಬ್ರಾ ಮತ್ತು ಚಾಂಗ್ ಥಾಂಗ್ ಹೊಸ ಜಿಲ್ಲೆಗಳಾಗಿ ಅಸ್ತಿತ್ವಕ್ಕೆ ಬರಲಿವೆ ಎಂದು ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಹೇಳಿದ್ದಾರೆ.

ಈ ನಿರ್ಧಾರದಿಂದಾಗಿ ಲಡಾಖ್‌ನಲ್ಲಿನ ಒಟ್ಟು ಜಿಲ್ಲೆಗಳ ಸಂಖ್ಯೆ 2 ರಿಂದ 7ಕ್ಕೆ ಏರಿಕೆಯಾದಂತಾಗಿದೆ.

ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಸಕ್ಸೇನಾ, ಈ ನಿರ್ಧಾರವನ್ನು ಐತಿಹಾಸಿಕ ಎಂದು ಬಣ್ಣಿಸಿದ್ದಾರೆ. ದೂರದ ಪ್ರದೇಶಗಳ ಜನರಿಗೆ ಆಡಳಿತದ ಎಲ್ಲಾ ಸೌಲಭ್ಯಗಳು ತ್ವರಿತವಾಗಿ ಒದಗಿಸುವ ನಿಟ್ಟಿನಲ್ಲಿ ಹಾಗೂ ದಶಕಗಳ ಕಾಲದ ಬೇಡಿಕೆಯನ್ನು ಈಡೇರಿಸುವ ಉದ್ದೇಶದಿಂದ ಇದು ಮಹತ್ವದ ಹೆಜ್ಜೆಯಾಗಿದೆ ಎಂದು ಬರೆದುಕೊಂಡಿದ್ದಾರೆ.ಏಪ್ರಿಲ್ 30ರಿಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎರಡು ದಿನಗಳ ಕಾಲ ಲಡಾಖ್ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಭೇಟಿಯ ಸಂದರ್ಭದಲ್ಲಿ ಅವರು ವಿವಿಧ ಅಭಿವೃದ್ಧಿ ಯೋಜನೆಗಳ ಪರಿಶೀಲನೆ ನಡೆಸಲಿದ್ದಾರೆ.

# ಕಲ್ಲಂಗಡಿ ಹಣ್ಣು ತಿಂದು ಒಂದೇ ಕುಟುಂಬದ ನಾಲ್ವರು ಸಾವು!




**ಮುಂಬೈ:** ದಕ್ಷಿಣ ಮುಂಬೈನಲ್ಲಿರುವ ತಮ್ಮ ಮನೆಯಲ್ಲಿ ಊಟದ ನಂತರ ಕಲ್ಲಂಗಡಿ ಸೇವಿಸಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಏಪ್ರಿಲ್ 25ರಂದು ಜೆಜೆ ಮಾರ್ಗ್ ನಿವಾಸದಲ್ಲಿ ನಡೆದ ಕುಟುಂಬ ಭೋಜನದ ನಂತರ ಅಬ್ದುಲ್ಲಾ (40), ಪತ್ನಿ ನಸ್ರೀನ್ (35), ಪುತ್ರಿಯರಾದ ಜೈನಾಬ್ (13) ಮತ್ತು ಆಯೇಷಾ (16) ಅನಾರೋಗ್ಯಕ್ಕೆ ಒಳಗಾದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕುಟುಂಬವು ಇತರ ಐದು ಅತಿಥಿಗಳೊಂದಿಗೆ ಚಿಕನ್ ಪುಲಾವ್ ತಿಂದಿದ್ದಾರೆ. ಬಳಿಕ ಮನೆಗೆ ತೆರಳಿ ಕಲ್ಲಂಗಡಿ ಸೇವಿಸಿದ್ದಾರೆ. ಬಳಿಕ ಅವರಿಗೆಲ್ಲಾ ವಾಂತಿ ಮತ್ತು ತಲೆತಿರುಗುವಿಕೆ ಆರಂಭವಾಗಿದೆ. ಆ ಕೂಡಲೇ ದಂಪತಿ ಮತ್ತು ಮಕ್ಕಳನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಆರೋಗ್ಯ ಸ್ಥಿತಿ ಗಂಭೀರವಾಗಿದ್ದರಿಂದ ಅವರನ್ನೆಲ್ಲ ಜೆಜೆ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಆದಾಗ್ಯೂ, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ.

ಮೇಲ್ನೋಟಕ್ಕೆ ಕಲ್ಲಂಗಡಿ ವಿಷಪೂರಿತವಾಗಿದ್ದಿರಬಹುದು ಎನಿಸುತ್ತಿದೆ. ಏಕೆಂದರೆ ಪುಲಾವ್ ಮಾತ್ರ ತಿಂದವರಿಗೆ ಯಾವುದೇ ಆರೋಗ್ಯ ಸಮಸ್ಯೆಗಳು ಕಾಣಿಸಿಲ್ಲ. ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಸಾವಿಗೆ ಕಾರಣವನ್ನು ದೃಢೀಕರಿಸಲು ಹಿಸ್ಟೋಪಾಥಾಲಜಿ ವರದಿಗಾಗಿ ಕಾಯಲಾಗುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

# ಪಾಕ್‌ನಲ್ಲಿ ಹಫೀಜ್ ಸಯೀದ್‌ನ ಆಪ್ತ ಸಹಚರ ಅಫ್ರಿದಿಯನ್ನು ಹತ್ಯೆಗೈದ ಅಪರಿಚಿತ ಬಂದೂಕುಧಾರಿಗಳು!

**ದೆಹಲಿ:** ಪಾಕಿಸ್ತಾನ ಮತ್ತೊಮ್ಮೆ ಅಪರಿಚಿತ ಬಂದೂಕುಧಾರಿಯ ಕೃತ್ಯಕ್ಕೆ ಸಾಕ್ಷಿಯಾಗಿದೆ. ಈ ಬಾರಿ ಗುರಿಯಾಗಿದ್ದು ಲಷ್ಕರ್, ಎ-ತೈಬಾ ಭಯೋತ್ಪಾದಕ ಸಂಘಟನೆಯ ಉನ್ನತ ಕಮಾಂಡರ್ ಶೇಖ್ ಯೂಸುಫ್ ಅಫ್ರಿದಿ. ಅಫ್ರಿದಿಯನ್ನು ಲಷ್ಕರ್ ಮುಖ್ಯಸ್ಥ ಹಫೀಜ್ ಸಯೀದ್ ನ ಆಪ್ತ ಸಹಚರ ಎಂದು ಪರಿಗಣಿಸಲಾಗಿದೆ.

ಪಾಕಿಸ್ತಾನ ಮತ್ತೊಮ್ಮೆ ಅಪರಿಚಿತ ಬಂದೂಕುಧಾರಿಯ ಕೃತ್ಯಕ್ಕೆ ಸಾಕ್ಷಿಯಾಗಿದೆ. ಈ ಬಾರಿ ಗುರಿಯಾಗಿದ್ದು ಲಷ್ಕರ್, ಎ-ತೈಬಾ ಭಯೋತ್ಪಾದಕ ಸಂಘಟನೆಯ ಉನ್ನತ ಕಮಾಂಡ ರ್ ಶೇಖ್ ಯೂಸುಫ್ ಅಫ್ರಿದಿ. ಅಫ್ರಿದಿಯನ್ನು ಲಷ್ಕರ್ ಮುಖ್ಯಸ್ಥ ಹಫೀಜ್ ಸಯೀದ್ ನ ಆಪ್ತ ಸಹಚರ ಎಂದು ಪರಿಗಣಿಸಲಾಗಿದೆ. ಪಾಕಿಸ್ತಾನಿ ಮಾಧ್ಯಮಗಳ ಪ್ರಕಾರ, ದಾಳಿಕೋರರು ಖೈಬರ್ ಪಖ್ತುಂಖ್ವಾದಲ್ಲಿ ಅಫ್ರಿದಿಯ ಮೇಲೆ ಮನಬಂದಂತೆ ಗುಂಡು ಹಾರಿಸಿ ತಕ್ಷಣವೇ ಕೊಂದರು. ಘಟನೆಯ ಬಗ್ಗೆ ಮಾಹಿತಿ ಪಡೆದ ಪಾಕಿಸ್ತಾನಿ ಪೊಲೀಸರು ಸ್ಥಳಕ್ಕೆ ಆಗಮಿಸಿದರು. ಆದಾಗ್ಯೂ, ಇನ್ನೂ ಯಾರನ್ನೂ ಬಂಧಿಸಲಾಗಿಲ್ಲ.

ಮಾಧ್ಯಮ ವರದಿಗಳ ಪ್ರಕಾರ, ಶೇಖ್ ಯೂಸುಫ್ ಅಫ್ರಿದಿ ಬಹಳ ಹಿಂದಿನಿಂದಲೂ ಲಷ್ಕರ್‌ನ ಪ್ರಮುಖ ಕಾರ್ಯಕರ್ತ. ಆತ ಖೈಬರ್ ಪಖ್ತುಂಖ್ವಾದಲ್ಲಿ ಮುಜಾಹಿದ್ದೀನ್‌ಗಳಿಗೆ ತರಬೇತಿ ನೀಡಿದನು. ಅಲ್ಲಿಂದ ಅವರನ್ನು ಕಾಶ್ಮೀರ ಮತ್ತು ಇತರ ಸ್ಥಳಗಳಿಗೆ ಕಳುಹಿಸಲಾಯಿತು. ಅಫ್ರಿದಿಯನ್ನು ಲಷ್ಕರ್‌ನ ಖೈಬರ್ ಪಖ್ತುಂಖ್ವಾ ಮುಖ್ಯಸ್ಥ ಎಂದು ಪರಿಗಣಿಸಲಾಗಿದೆ. ಆತ ಲಷ್ಕರ್ ಮುಖ್ಯಸ್ಥ ಹಫೀಜ್ ಸಯೀದ್ ಜೊತೆ ನಿಕಟ ಸಂಬಂಧ ಹೊಂದಿದ್ದಾನೆ. ಹಫೀಜ್ ಸಯೀದ್ ಜೊತೆ ಅಫ್ರಿದಿ ಹಲವು ಬಾರಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದನು. ಸ್ಥಳೀಯ ಮಾಧ್ಯಮಗಳೊಂದಿಗೆ ಮಾತನಾಡಿದ ಪೊಲೀಸರು, ಪ್ರಕರಣವನ್ನು ಎಲ್ಲಾ ಕೋನಗಳಿಂದಲೂ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ. ಪ್ರಾಥಮಿಕ ತನಿಖೆಗಳು ಇದು ಟಾರ್ಗೆಟ್ ಕಿಲ್ಲಿಂಗ್ಸ್ ಎಂದು ಸೂಚಿಸುತ್ತವೆ. ದಾಳಿಕೋರರಿಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಯಾವುದೇ ಸಂಘಟನೆ ಇನ್ನೂ ಹತ್ಯೆಯ ಹೊಣೆಯನ್ನು ಹೊತ್ತುಕೊಂಡಿಲ್ಲ.

# ನನ್ನ ಕುಂಡಲಿಯಲ್ಲೇ 'ವಿವಾದ'ವಿದೆ ಎಂದ ಬಾಗೇಶ್ವರ ಧಾಮದ ಧೀರೆಂದ್ರ ಶಾಸ್ತ್ರಿ





**ನಾಗ್ಪುರ:** ಭಾರತೀಯರು ನಾಲ್ಕು ಮಕ್ಕಳನ್ನು ಹೆರಬೇಕು, ಇದರಲ್ಲಿ ಒಂದು ಮಗುವನ್ನು ಆರ್‌ಎಸ್‌ಎಸ್‌ಗೆ ನೀಡಬೇಕು ಎಂದು ನಾಗ್ಪುರದ ಕಾರ್ಯಕ್ರಮದಲ್ಲಿ ಬಾಗೇಶ್ವರ ಧಾಮದ ಪೀಠಾಧಿಪತಿ ಧೀರೆಂದ್ರ ಕೃಷ್ಣ ಶಾಸ್ತ್ರಿ ನೀಡಿದ್ದ ಹೇಳಿಕೆ ವಿವಾದ ಸೃಷ್ಟಿಸಿತ್ತು. ಇದೀಗ ಅವರು ಪ್ರತಿಕ್ರಿಯಿಸಿದ್ದಾರೆ. 'ಎಷ್ಟೇ ಒಳ್ಳೆಯದನ್ನು ಮಾತನಾಡಲು ಪ್ರಯತ್ನಿಸಿದರೂ ಅದು ವಿವಾದಕ್ಕೆ ಕಾರಣವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ನನ್ನ ಕುಂಡಲಿಯಲ್ಲೇ 'ವಿವಾದ'ವಿದೆ ಎಂದು ಈಗ ನಾನು ನಂಬುತ್ತೇನೆ. ನಾಗ್ಪುರದಲ್ಲಿ ಇದು ಮತ್ತೆ ಸಂಭವಿಸಿದೆ. ನಾನು ಎಲ್ಲವನ್ನೂ ಸರಿಯಾಗಿಯೇ ಹೇಳಲು ಪ್ರಯತ್ನಿಸಿದ್ದೆ, ಆದರೂ ವಿವಾದವಾಯಿತು. ನನಗೆ ಯಾರಿಂದಲೂ ಯಾವುದೇ ಪ್ರಮಾಣೀ ಕರಣದ ಅಗತ್ಯವಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಹನುಮಂತನನ್ನು ಆರಾಧಿಸುವುದು ಮೂಢನಂಬಿಕೆ ಎನ್ನುವುದಾದರೆ, ಈ ದೇಶದಲ್ಲಿರುವ ಎಲ್ಲಾ ಧರ್ಮಗಳೂ ಮೂಢನಂಬಿಕೆಯಾಗುತ್ತವೆ. ದೇವರ ಆರಾಧನೆಯನ್ನು ಕೇವಲ ಒಂದು ವರ್ಗಕ್ಕೆ ಸೀಮಿತಗೊಳಿಸಿ ಟೀಕಿಸುವುದು ಸರಿಯಲ್ಲ ಎಂದು ಕಿಡಿಕಾರಿದರು.

# ಹೊರ್ಮುಜ್ ಮುಕ್ತ, ಯುದ್ಧ ಅಂತ್ಯಕ್ಕೆ ಇರಾನ್‌ನ 3 ಹಂತದ ಪ್ರಸ್ತಾವನೆಯಲ್ಲಿ ಏನಿದೆ?



**ಟೆಹರಾನ್:** ಪಶ್ಚಿಮ ಏಷ್ಯಾದಲ್ಲಿ ಕಳೆದ ಎರಡು ತಿಂಗಳಿಂದ ನಡೆಯುತ್ತಿರುವ ಸಂಘರ್ಷ ಇತ್ಯರ್ಥಕ್ಕೆ ಮಧ್ಯವರ್ತಿ ಪಾಕಿಸ್ತಾನದ ಮೂಲಕ ಅಮೆರಿಕಕ್ಕೆ ಇರಾನ್ ಮೂರು ಹಂತದ ಪ್ರಸ್ತಾವನೆಯನ್ನು ಮುಂದಿಟ್ಟಿದೆ.

ಫೆಬ್ರುವರಿ 28ರಂದು ಅಮೆರಿಕ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಅಮೆರಿಕದ ನೆಲೆಗಳನ್ನು ಗುರಿಯಾಗಿಸಿ ಕೊಲ್ಲಿ ರಾಷ್ಟ್ರಗಳ ಮೇಲೆ ಇರಾನ್ ಪ್ರತಿದಾಳಿ ನಡೆಸಿತ್ತು.ಕೆಲವೇ ದಿನಗಳಲ್ಲಿ ಯುದ್ಧ ವ್ಯಾಪಿಸಿತ್ತು. ಜಾಗತಿಕ ತೈಲ ಸಾಗಣೆ ಜಾಲವಾದ ಹೊರ್ಮುಜ್ ಜಲಸಂಧಿಯ ಮೇಲೆ ಇರಾನ್ ನಿರ್ಬಂಧ ಹೇರಿತ್ತು. ಇದರಿಂದ ತೈಲ ಸಂಚಾರಕ್ಕೆ ತೊಡಕಾಗಿ ಬೆಲೆ ಏರಿಕೆ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಕೆಟ್ಟ ಪರಿಣಾಮ ಬೀರಿತ್ತು. ಬಳಿಕ ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಎರಡು ವಾರಗಳ ಕದನ ವಿರಾಮ ಘೋಷಿಸಲಾಗಿತ್ತು. ಆದರೆ ಸಂಧಾನ ಮಾತುಕತೆ ಮುರಿದು ಬಿದ್ದ ಬೆನ್ನಲ್ಲೇ ಅನಿಶ್ಚಿತತೆ ಮುಂದುವರಿದಿದೆ.

ತಾತ್ಕಾಲಿಕ ಕದನ ವಿರಾಮವನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನಿರ್ದಿಷ್ಟಾವಧಿಗೆ ಮುಂದೂಡಿದ್ದರು. ಯಾವುದೇ ಕಾರಣಕ್ಕೂ ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದಲು ಬಿಡುವುದಿಲ್ಲ ಎಂದು ಹೇಳಿದ್ದರು.

ಈ ನಡುವೆ ಪಾಕಿಸ್ತಾನದಲ್ಲಿ ಆಯೋಜನೆಯಾಗಬೇಕಿದ್ದ ಎರಡನೇ ಸುತ್ತಿನ ಮಾತುಕತೆಯಿಂದ ಉಭಯ ಕಡೆಯವರು ಹಿಂದೆ ಸರಿದಿದ್ದರು. ಆದರೂ ಸಂಧಾನ ಮಾತುಕತೆಗಾಗಿ ಪಾಕಿಸ್ತಾನದಿಂದ ಪ್ರಯತ್ನ ಮುಂದುವರಿದಿದೆ. 3 ಹಂತದ ಪ್ರಸ್ತಾವನೆ ಮುಂದಿಟ್ಟ ಇರಾನ್: ವರದಿ ಏತನ್ಮಧ್ಯೆ, ಮಧ್ಯವರ್ತಿ ಪಾಕಿಸ್ತಾನದ ಮೂಲಕ ಇರಾನ್ ಮೂರು ಹಂತದ ಪ್ರಸ್ತಾವನೆ ಮುಂದಿಟ್ಟಿದೆ. ಇದು ಯುದ್ಧವನ್ನು ಕೊನೆಗೊಳಿಸುವುದು, ಹೊರ್ಮುಜ್ ಜಲಸಂಧಿ ಮುಕ್ತಗೊಳಿಸುವುದು ಹಾಗೂ ಪರಮಾಣು ಕಾರ್ಯಕ್ರಮಗಳನ್ನು ಒಳಗೊಂಡಿದೆ. ವರದಿಗಳ ಪ್ರಕಾರ, ಶಾಂತಿ ಮಾತುಕತೆ ಪುನರಾರಂಭಿಸಲು ಇರಾನ್ ಮೂರು ಹಂತದ ಸೂತ್ರವನ್ನು ಮುಂದಿಟ್ಟಿದೆ. ವರದಿಯ ಪ್ರಮುಖ ಅಂಶಗಳು ಹೀಗಿವೆ...

ಮೊದಲ ಹಂತ: ದಿಗ್ಬಂಧನ ತೆರವು ಮತ್ತು ಕದನ ವಿರಾಮ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಮಾತುಕತೆಗೂ ಮುನ್ನ ಅಮೆರಿಕವು ಇರಾನ್ ಬಂದರುಗಳ ಮೇಲಿನ ದಿಗ್ಬಂಧನವನ್ನು ಸಂಪೂರ್ಣವಾಗಿ ತೆರವುಗೊಳಿಸಬೇಕು. ಅದರ ಬಳಿಕವಷ್ಟೇ ಚರ್ಚೆ ಸಾಧ್ಯ ಎನ್ನಲಾಗಿದೆ.

**ಮೂರನೇ ಹಂತ: ಪರಮಾಣು ಕಾರ್ಯಕ್ರಮ**

ಎರಡು ಹಂತಗಳ ಬಳಿಕವಷ್ಟೇ ಅಂತಿಮವಾಗಿ ಪರಮಾಣು ಕಾರ್ಯಕ್ರಮದ ಕುರಿತು ಇರಾನ್ ಚರ್ಚೆ ನಡೆಸಲಿದೆ. ಒಟ್ಟಾರೆಯಾಗಿ ಯುದ್ಧವನ್ನು ತಕ್ಷಣವೇ ಕೊನೆಗೊಳಿಸುವುದು ಹಾಗೂ ಆರ್ಥಿಕ ದಿಗ್ಬಂಧನ ತೆರವುಗೊಳಿಸಿದ ಬಳಿಕವಷ್ಟೇ ಪರಮಾಣು ಕಾರ್ಯಕ್ರಮದ ಕುರಿತ ಮಾತುಕತೆಗೆ ಇರಾನ್ ಒತ್ತು ನೀಡಿದೆ. ಈ ಸಂಬಂಧ ಅಮೆರಿಕದ ಪ್ರತಿಕ್ರಿಯೆ ಏನಾಗಿರಲಿದೆ ಎಂಬುದನ್ನು ಕಾದು ನೋಡಬೇಕಿದೆ. ಇರಾನ್ ತನ್ನ ಯುರೇನಿಯಂ ಕಾರ್ಯಕ್ರಮವನ್ನು ಕನಿಷ್ಠ ಒಂದು ದಶಕದವರೆಗೆ ಮುಂದೂಡಬೇಕು ಎಂಬುದು ಅಮೆರಿಕದ ಬೇಡಿಕೆಯಾಗಿದೆ.

**ಎರಡನೇ ಹಂತ: ಹೊರ್ಮುಜ್ ಜಲಸಂಧಿ**

ಜಗತ್ತಿನ ಪ್ರಮುಖ ತೈಲ ಸಂಚಾರ ಮಾರ್ಗವಾದ ಹೊರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ಹಡಗುಗಳ ಮುಕ್ತ ಸಂಚಾರಕ್ಕೆ ಅವಕಾಶ ನೀಡುವುದು ಎರಡನೇ ಹಂತದ ಗುರಿಯಾಗಿದೆ. ಮೊದಲ ಹಂತದ ಬೇಡಿಕೆಗಳಿಗೆ ಒಪ್ಪಿಕೊಂಡರೆ ಮಾತ್ರ ಎರಡನೇ ಹಂತದ ಚರ್ಚೆ ಸಾಧ್ಯವಾಗಲಿದೆ.

## ಮಿನಿ ನ್ಯೂಸ್

### ಪ್ರಾಣಕ್ಕೆ ಕುತ್ತು ತಂದ ಪಾನಿಪುರಿ: ಬಾಲಕ ಸಾವು, 18 ಮಂದಿ ಆಸ್ಪತ್ರೆಗೆ ದಾಖಲು



**ರಾಂಚಿ:** ಪಾನಿಪುರಿ ಅಂದರೆ ಯಾರಿಗೆ ತಾನೇ ಇಷ್ಟ ಇಲ್ಲ ಹೇಳಿ. ಮಕ್ಕಳಿಂದ ಹಿಡಿದು ದೊಡ್ಡವರವರೆಗೆ ಪಾನಿಪುರಿಯನ್ನು ಇಷ್ಟಪಟ್ಟು ತಿನ್ನುವವರಿದ್ದಾರೆ. ಆದರೆ ಇದೇ ಪಾನಿಪುರಿ ತಿಂದು ಬಾಲಕ ಮೃತಪಟ್ಟಿರುವ ಘಟನೆ ಜಾರ್ಖಂಡ್‌ನ ಗಿರಿದಿಹ್‌ನಲ್ಲಿ ನಡೆದಿದೆ.

ರಸ್ತೆ ಬದಿ ಪಾನಿಪುರಿ ಸೇವಿಸಿದ ನಂತರ ಮನೆಗೆ ಹೀಗಿದ್ದ ಕೆಲವರಿಗೆ ತೀವ್ರ ಜ್ವರ, ಹೊಟ್ಟೆನೋವು, ವಾಂತಿ ಶುರುವಾಗಿದೆ. ಆ ಕೂಡಲೇ ಅಸ್ವಸ್ಥರಾಗಿದ್ದ 18 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಆರು ವರ್ಷದ ಬಾಲಕ ಮೃತಪಟ್ಟಿದ್ದಾನೆ. ಈ ವಿಚಾರ ತಿಳಿದ ಪಾನಿಪುರಿ ಮಾರಾಟಗಾರ ನಾಪತ್ತೆಯಾಗಿದ್ದಾರೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ ಆಡಳಿತ ಹಾಗೂ ಆರೋಗ್ಯ ಇಲಾಖೆ ತನಿಖೆ ಆರಂಭಿಸಿದೆ. ಗ್ರಾಮಸ್ಥರ ಪ್ರಕಾರ, ಅವರೆಲ್ಲರೂ ಒಂದೇ ವ್ಯಕ್ತಿಯ ಬಳಿ ಪಾನಿಪುರಿ ಸೇವಿಸಿದ್ದಾರೆ. ಶನಿವಾರ ರಾತ್ರಿಯ ವೇಳೆಗೆ ಅನೇಕರು ಅನಾರೋಗ್ಯಕ್ಕಿಡಾಗಿದ್ದು, ಭಾನುವಾರದ ವೇಳೆಗೆ ಜ್ವರ ಹಾಗೂ ಹೊಟ್ಟೆನೋವು ತೀವ್ರಗೊಂಡಿದೆ.

ಘಟನೆಯ ಬಳಿಕ ಸ್ಥಳೀಯ ಪೊಲೀಸರು ಹಾಗೂ ಆಡಳಿತ ಸಿಬ್ಬಂದಿ ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳ ಕ್ಷೇಮ ವಿಚಾರಿಸಿದ್ದಾರೆ. ಈ ಸಂಬಂಧ ತನಿಖೆಗೆ ಆದೇಶಿಸಿದ್ದಾರೆ.

ಈ ಕುರಿತು ಮಾತನಾಡಿದ ಸಿವಿಲ್ ಸರ್ಜನ್ ಡಾ ಬಚ್ಚಾ ಪ್ರಸಾದ್ ಸಿಂಗ್, ಪಾನಿಪುರಿ ಸೇವಿಸಿದ ಬಳಿಕ 18 ಜನ ಅನಾರೋಗ್ಯಕ್ಕೀಡಾಗಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಸದ್ಯ ನಿಜವಾದ ಕಾರಣ ಏನು ಎಂಬುದು ತನಿಖೆಯಿಂದ ತಿಳಿದು ಬರಲಿದೆ ಎಂದು ಹೇಳಿದರು.

### ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್ ಟಾಪ್: ಸುಳ್ಳು ಸುದ್ದಿ ಬಗ್ಗೆ ಎಚ್ಚರಿಕೆ






**ನವದೆಹಲಿ:** ಭಾರತ ಸರ್ಕಾರ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ವಿತರಣೆ ಮಾಡುತ್ತಿದೆ. ಅರ್ಜಿ ಸಲ್ಲಿಸಲು ಈ ಲಿಂಕ್ ಕ್ಲಿಕ್ ಮಾಡಿ ಎಂದು ಹೇಳುವ ವಾಟ್ಸ್ ಆ್ಯಪ್ ಸಂದೇಶವನ್ನು ನಂಬಬೇಡಿ ಎಂದು ಪಿಐಬಿ ಎಚ್ಚರಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ನಿತ್ಯ ಒಂದಲ್ಲಾ ಒಂದು ನಕಲಿ ಲಿಂಕ್‌ಗಳು ಹರಿದಾಡುತ್ತಲೇ ಇರುತ್ತವೆ. ಅವನ್ನು ನಂಬಿ ಅದೆಷ್ಟೋ ಜನರು ಮೋಸ ಹೋಗಿದ್ದು ವರದಿಯಾಗುತ್ತಲೇ ಇರುತ್ತವೆ. ಇದರ ನಡುವೆ ಸರ್ಕಾರ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ವಿತರಣೆ ಮಾಡುತ್ತಿದೆ ಎಂದು ಹೇಳುವ ಲಿಂಕ್‌ವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಈ ಬಗ್ಗೆ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪಿಐಬಿ ಫ್ಯಾಕ್ಟ್‌ಚೆಕ್ ಪೋಸ್ಟ್ ಹಂಚಿಕೊಂಡಿದ್ದು, ಇದೊಂದು ಸುಳ್ಳು ಸುದ್ದಿಯಾಗಿದೆ. ನಕಲಿ ಸುದ್ದಿಗಳನ್ನು ನಂಬಬೇಡಿ ಎಂದು ತಿಳಿಸಿದೆ.

### ಸಂಧಾನಕ್ಕೆ ಬೇಕಾದ ವಿಶ್ವಾಸಾರ್ಹತೆ ಪಾಕಿಸ್ತಾನಕ್ಕೆ ಇಲ್ಲ: ಇರಾನ್

**ಟೆಹರಾನ್:** ಪಾಕಿಸ್ತಾನವು ನಮ್ಮ ಉತ್ತಮ ಸ್ನೇಹಿತ. ಆದರೆ, ಸಂಧಾನಕಾರರಿಗೆ ಇರಬೇಕಾದ ವಿಶ್ವಾಸಾರ್ಹತೆ ಅದಕ್ಕೆ ಇಲ್ಲ ಎಂದು ಇರಾನ್ ವಿದೇಶಾಂಗ ನೀತಿ ಆಯೋಗದ ವಕ್ತಾರ ಇಬ್ರಾಹಿಂ ರೆಜಾಯಿ ತಿಳಿಸಿದ್ದಾರೆ. ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆ ಸ್ಥಗಿತಗೊಂಡ ಬೆನ್ನಲ್ಲೇ ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ. ಇದೇ ವೇಳೆ ಶಾಂತಿ ಮಾತುಕತೆಗೆ ಪಾಕಿಸ್ತಾನ ಪ್ರಯತ್ನವನ್ನು ಅವರು ಶ್ಲಾಘಿಸಿದ್ದಾರೆ.

ಪಾಕಿಸ್ತಾನವು ನಮ್ಮ ಉತ್ತಮ ಸ್ನೇಹಿತ ಮತ್ತು ನೆರೆಯ ರಾಷ್ಟ್ರವಾಗಿದೆ. ಆದರೆ, ಮಾತುಕತೆಗೆ ಮಧ್ಯಸ್ಥಿಕೆ ವಹಿಸಲು ಅದು ಸೂಕ್ತ ದೇಶವಲ್ಲ. ಸಂಧಾನಕ್ಕೆ ಅಗತ್ಯವಾದ ವಿಶ್ವಾಸಾರ್ಹತೆಯನ್ನೂ ಹೊಂದಿಲ್ಲ. ಟ್ರಂಪ್ ಹಿತಾಸಕ್ತಿಯನ್ನು ಪರಿಗಣಿಸುವ ಅವರು, ಅಮೆರಿಕದ ವಿರುದ್ಧ ಒಂದು ಮಾತನ್ನೂ ಆಡುವುದಿಲ್ಲ ಎಂದಿದ್ದಾರೆ.ಈ ನಡುವೆ, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಒಮಾನ್‌ನಿಂದ ಹಿಂದಿರುಗುವಾಗ ಭಾನುವಾರ ಇಸ್ಲಾಮಾಬಾದ್‌ಗೆ ಭೇಟಿ ನೀಡಿದ್ದರು. ಇದು ಮೂರು ದಿನಗಳಲ್ಲಿ ಅವರ ಎರಡನೇ ಭೇಟಿಯಾಗಿದೆ.ಇದಕ್ಕೂ ಮೊದಲು, ಅರಾಘ್ಚಿ ಅವರು ಪಾಕಿಸ್ತಾನಕ್ಕೆ ಆಗಮಿಸಿ ಉನ್ನತ ನಾಯಕರನ್ನು ಭೇಟಿ ಮಾಡಿದ್ದರು. ಆದರೆ, ಅಮೆರಿಕದ ನಿಯೋಗ ಬರುವ ಮೊದಲೇ ಇರಾನ್ ನಿಯೋಗವು ಇಸ್ಲಾಮಾಬಾದ್‌ನಿಂದ ನಿರ್ಗಮಿಸಿತ್ತು. ಇದರಿಂದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಪ್ರತಿನಿಧಿಗಳನ್ನು ಪಾಕಿಸ್ತಾನಕ್ಕೆ ಕಳುಹಿಸಿಲ್ಲ.

# ಮುಂಬೈನಲ್ಲಿ ಹಾಲಿವುಡ್ ಗಾಯಕಿ ರಿಹಾನಾ

ಅಂಬಾನಿ ಕುಟುಂಬದ ಜತೆ ಪೂಜೆ, ಹೋಳಿ, ಡ್ಯಾ

## ಪುಲಂಕಿ ಹೋಳಿಯನ್ನು ಆನಂದಿಸಿದ ರಿಹಾನಾ



ಹಾಲಿವುಡ್‌ನ ಖ್ಯಾತ ಪಾಪ್ ಗಾಯಕಿ ರಿಹಾನಾ ಅವರು ಮುಂಬೈಗೆ ಆಗಮಿಸಿ ಫಿನಿಕ್ ಪಲ್ಲಾಡಿಯಂನಲ್ಲಿ 'ಫೆಂಟಿ ಬ್ಯೂಟಿ' ಅನ್ನು ಅನಾವರಣ ಮಾಡಿದ್ದಾರೆ. ಅವರನ್ನು ಅಂಬಾನಿ ಕುಟುಂಬದ ಸದಸ್ಯರಾದ ಪುತ್ರಿ ಇಶಾ ಅಂಬಾನಿ, ಪುತ್ರ ಅನಂತ್ ಅಂಬಾನಿ, ಶ್ಲೋಕಾ ಮೆಹ್ತಾ, ರಾಧಿಕಾ ಮರ್ಚೆಂಟ್ ಅವರು ಬರ ಮಾಡಿಕೊಂಡಿದ್ದಾರೆ.

ರಿಹಾನಾ ಅವರನ್ನು ಬರಮಾಡಿಕೊಂಡ ಅಂಬಾನಿ ಕುಟುಂಬ: ಇಶಾ ಅಂಬಾನಿ ಹಾಗೂ ರಾಧಿಕಾ ಮರ್ಚೆಂಟ್ ಅವರು ನೃತ್ಯ ಪ್ರದರ್ಶನದ ಮೂಲಕ ರಿಹಾನಾ ಅವರನ್ನು ಸ್ವಾಗತಿಸಿದ್ದಾರೆ.ಪೂಜೆಯಲ್ಲಿ ಪಾಲ್ಗೊಂಡ ಹಾಲಿವುಡ್ ಗಾಯಕಿ ರಿಹಾನಾ ಅವರು ಅಂಬಾನಿ ಕುಟುಂಬದ ಜೊತೆ ಪೂಜೆಯಲ್ಲಿ ಭಾಗವಹಿಸಿ, ದೇವರಿಗೆ ಆರತಿ ಮಾಡಿದ್ದಾರೆ.

ಪುಲಂಕಿ ಹೋಳಿಯನ್ನು ಆನಂದಿಸಿದ ರಿಹಾನಾ ಬಳಿಕ ಅವರು ಪುಲೋಂಕಿ ಹೋಳಿಯಲ್ಲಿ ಭಾಗಿಯಾಗಿ ಸಂಭ್ರಮಿಸಿದ್ದಾರೆ. ಸದ್ಯ, ಈ ಚಿತ್ರಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದ್ದು ವ್ಯಾಪಕ ಮೆಚ್ಚುಗೆ ಪಡೆದುಕೊಳ್ಳುತ್ತಿದೆ. ಈ ಹಿಂದೆಯೂ ಅಂಬಾನಿ ಕುಟುಂಬದ ಕಾರ್ಯಕ್ರಮದಲ್ಲಿ ರಿಹಾನಾ ಅವರು ಭಾಗಿ 2024ರಲ್ಲಿ ನಡೆದ ಅನಂತ್ ಅಂಬಾನಿ ಹಾಗೂ ರಾಧಿಕಾ ಮರ್ಚೆಂಟ್ ವಿವಾಹ ಕಾರ್ಯಕ್ರಮದಲ್ಲಿ ರಿಹಾನಾ ಅವರು ಭಾಗಿಯಾಗಿ, ತಮ್ಮ ಗಾಯನದ ಮೂಲಕ ಗಣ್ಯರನ್ನು ರಂಜಿಸಿದ್ದರು.

# ರಜನಿ ಸರ್ ನೋಡಿ ದೇವರು ಕಂಡಂತಾಯ್ತು: ಮೇಘನಾ ರಾಜ್



ಸೂಪರ್‌ಸ್ಟಾರ್ ರಜನಿಕಾಂತ್ 'ಜೈಲರ್ 2' ಸಿನಿಮಾದಲ್ಲಿ ಬ್ಯುಸಿಯಾಗಿದ್ದಾರೆ. 'ಜೈಲರ್ ಅಂತಹ ಮೆಗಾ ಬ್ಲಾಕ್‌ಬಸ್ಟರ್ ಸಿನಿಮಾದ ಬಳಿಕ ಅದೇ ತಂಡ ಸೀಕ್ವೆಲ್‌ಗೆ ಮುಂದಾಗಿದೆ.

ಇನ್ನು ಜೈಲರ್ ಅಂತಹ ಮೆಗಾ ಬ್ಲಾಕ್‌ಬಸ್ಟರ್ ಕೊಟ್ಮೇಲೆ 'ಜೈಲರ್ 2' ಬಗ್ಗೆ ನಿರೀಕ್ಷೆ ಇಲ್ಲದೆ ಇರುತ್ತಾ? ಎಲ್ಲರ ಕಣ್ಣೂ 'ಜೈಲರ್ 2' ಮೇಲಿದೆ. ಇನ್ನು ಕನ್ನಡಿಗರಿಗೂ ಜೈಲರ್ 2' ಮೇಲೆ ನಿರೀಕ್ಷೆಗಳು ಇರುವುದಕ್ಕೆ ಕಾರಣವಿದೆ. ಈ ಸಿನಿಮಾದಲ್ಲಿ ಕನ್ನಡದ ಕಲಾವಿದರು ಕೂಡ ನಟಿಸಿದ್ದಾರೆ. ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಜೊತೆಗೆ ಮೇಘನಾ ರಾಜ್ ಕೂಡ ಪ್ರಮುಖ ಪಾತ್ರವೊಂದರಲ್ಲಿ ನಟಿಸಿ ಬಂದಿದ್ದಾರೆ. ಇತ್ತೀಚೆಗೆ ಮೇಘನಾ ರಾಜ್ ಸೂಪರ್‌ಸ್ಟಾರ್ ರಜನಿಕಾಂತ್ ಅವರೊಂದಿಗೆ ನಟಿಸಿದ ಅನುಭವವನ್ನು ಹಂಚಿಕೊಂಡಿದ್ದಾರೆ. ದೇವರನ್ನು ನೋಡಿದ ಹಾಗೆ ಆಯ್ತು ಎಂದು ಹೇಳಿದ್ದಾರೆ. 21 ದಿನಗಳು ಶೂಟಿಂಗ್ ಸೂಪರ್‌ಸ್ಟಾರ್ ರಜನಿಕಾಂತ್ ಜೊತೆ ನಟಿಸಬೇಕು ಅನ್ನೋದು ಹಲವು ನಟಿಯರ ಕನಸು. ಅವರಲ್ಲಿ ಕೆಲವರಿಗೆ ಮಾತ್ರ ಆ ಅವಕಾಶ ಸಿಗುತ್ತೆ. ಅಂತಹವರಲ್ಲಿ ಕನ್ನಡದ ನಟಿ ಮೇಘನಾ ರಾಜ್ ಕೂಡ ಒಬ್ಬರು. 'ಜೈಲರ್ 2'ನಲ್ಲಿ ಸುಮಾರು 21 ದಿನಗಳ ಕಾಲ ಶೂಟಿಂಗ್ ಮುಗಿಸಿ ಬಂದಿದ್ದಾರೆ. ರಜನಿಕಾಂತ್ ಜೊತೆ ನಟಿಸಿದ ಆ ಹ್ಯಾಂಗ್ ಓವರ್‌ನಲ್ಲಿಯೇ ಇದ್ದಾರೆ.

# ಅನೀಸ್ ಬಜ್ಮೀ ನಿರ್ದೇಶನದ ಹೊಸ ಸಿನಿಮಾದಲ್ಲಿ ಅಕ್ಕಿ ಜೊತೆ ವಿದ್ಯಾ



ಅನೀಸ್ ಬಜ್ಮೀ ನಿರ್ದೇಶನದ ಹೊಸ ಸಿನಿಮಾದಲ್ಲಿ ವಿದ್ಯಾ ಬಾಲನ್ ಅವರ ಜೊತೆ ಅಕ್ಷಯ್ ಕುಮಾರ್ ಮತ್ತೊಮ್ಮೆ ತೆರೆಹಂಚಿಕೊಳ್ಳಲಿದ್ದಾರೆ. ತಮ್ಮ ಹೊಸ ಸಿನಿಮಾ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಅಕ್ಷಯ್ ಕುಮಾರ್ ಮಾಹಿತಿ ನೀಡಿದ್ದಾರೆ.

ಈ ಹಿಂದೆ ಹೇ ಬೇಬಿ, ಭೂಲ್ ಭುಲಯ್ಯ ಹಾಗೂ ಮಿಷನ್ ಮಂಗಲ್ ಸಿನಿಮಾದಲ್ಲಿ ಅಕ್ಷಯ್ ವಿದ್ಯಾ ಬಾಲನ್ ಜೊತೆಯಾಗಿ ನಟಿಸಿದ್ದರು. ಇದು ಅವರಿಬ್ಬರ ನಾಲ್ಕನೇ ಸಿನಿಮಾ ಆಗಿರಲಿದೆ. ಸಿನಿಮಾದ ಶೀರ್ಷಿಕೆ ಮತ್ತು ಕಥಾಹಂದರದ ಬಗ್ಗೆ ಚಿತ್ರತಂಡ ಇನ್ನಷ್ಟೇ ಮಾಹಿತಿ ನೀಡಬೇಕಿದೆ. ಇದೊಂದು ಕಾಮಿಡಿ ಥ್ರಿಲ್ಲರ್ ಸಿನಿಮಾವಾಗಿರಲಿದ್ದು, ದಿಲ್ ರಾಜು ನಿರ್ಮಾಣ ಮಾಡಲಿದ್ದಾರೆ ಎನ್ನಲಾಗಿದೆ. ಸಿಂಗ್ ಈಸ್ ಕಿಂಗ್, ವೆಲ್‌ಕಮ್ ಹಾಗೂ ಥ್ಯಾಂಕ್ಯೂ ಬಳಿಕ ಬಜ್ಮೀ ಜೊತೆಗಿನ ಹೊಸ ಪ್ರಾಜೆಕ್ಟ್ ಇದಾಗಿದೆ. ಇತ್ತೀಚೆಗೆ ತೆರೆಕಂಡ ಅಕ್ಷಯ್ ಕುಮಾರ್ ನಟನೆಯ ಪ್ರಿಯದರ್ಶನ್ ನಿರ್ದೇಶನದ ಭೂತ್ ಬಂಗ್ಲಾ ವಿಶ್ವದಾದ್ಯಂತ ₹100 ಕೋಟಿ ಗಳಿಸಿದೆ. ಇದರ ಬೆನ್ನಲ್ಲೇ ಅಕ್ಷಯ್ ಹೊಸ ಸಿನಿಮಾ ಘೋಷಿಸಿದ್ದಾರೆ.

# ಮದುವೆ ಹೆಸರಲ್ಲಿ 10 ಕೋಟಿ ರೂ ವಂಚನೆ: ನಟಿ ಆಶು ರೆಡ್ಡಿ ವಿರುದ್ಧ ದೂರು ದಾಖಲು!




ತೆಲುಗಿನ ನಟಿ ಮತ್ತು ಬಿಗ್ ಬಾಸ್ ಖ್ಯಾತಿಯ ಆಶು ರೆಡ್ಡಿ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ಹೈದರಾಬಾದ್ ಸಿಸಿಎಸ್ ಪೊಲೀಸರು ಜಾಮೀನು ರಹಿತ ಪ್ರಕರಣ ದಾಖಲಿಸಿದ್ದಾರೆ. ತೆಲುಗಿನ ನಟಿ ಮತ್ತು ಬಿಗ್ ಬಾಸ್ ಖ್ಯಾತಿಯ ಆಶು ರೆಡ್ಡಿ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ಹೈದರಾಬಾದ್ ಸಿಸಿಎಸ್ ಪೊಲೀಸರು ಜಾಮೀನು ರಹಿತ ಪ್ರಕರಣ ದಾಖಲಿಸಿದ್ದಾರೆ. ಮದುವೆಯ ಹೆಸರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರಿಗೆ ಸುಮಾರು 10 ಕೋಟಿ ರೂ. ವಂಚಿಸಿದ್ದಾರೆ ಎಂಬ ಆರೋಪ ಈಗ ಟಾಲಿವುಡ್‌ನಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಹೈದರಾಬಾದ್‌ನ ಸಿಟಿ ಸೆಂಟ್ರಲ್ ಕ್ರೈಮ್ ಸ್ಟೇಷನ್ () ಪೊಲೀಸರು ಆಶು ರೆಡ್ಡಿ, ಅವರ ಸಹೋದರಿ ದಿವ್ಯಾ ರೆಡ್ಡಿ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಲಂಡನ್‌ನಲ್ಲಿ ವಾಸಿಸುವ ಧರ್ಮೇಂದ್ರ ಎಂಬ ಸಾಫ್ಟ್‌ವೇರ್ ಎಂಜಿನಿಯರ್ ಅವರನ್ನು ಮದುವೆಯಾಗುವುದಾಗಿ ಭರವಸೆ ನೀಡಿ ಆಶು ರೆಡ್ಡಿ ಅಪಾರ ಪ್ರಮಾಣದ ನಗದು ಮತ್ತು ಚಿನ್ನವನ್ನು ತೆಗೆದುಕೊಂಡಿದ್ದಾರೆ ಎಂದು ಸಂತ್ರಸ್ತನ ತಂದೆ ಸತ್ಯನಾರಾಯಣ ಮೂರ್ತಿ ಪೊಲೀಸರಿಗೆ ದೂರು ನೀಡಿದ್ದಾರೆ. ಧರ್ಮೇಂದ್ರ ಅವರನ್ನು ಮದುವೆಯಾಗುವುದಾಗಿ ನಂಬಿಸಿ, 5 ಕೆಜಿ ಚಿನ್ನ ಮತ್ತು ಫ್ಲಾಟ್ ಕೇಳಿದ್ದು 3 ಕೋಟಿ ರೂ. ಮೌಲ್ಯದ ವಿಲ್ಲಾಕ್ಕಾಗಿ ಮುಂಗಡ ಹಣ ನೀಡಲಾಗಿದೆ. ಆಶುರೆಡ್ಡಿ ಒಟ್ಟು 9.83 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಕದ್ದಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಎರಡೂ ಕುಟುಂಬಗಳು ತಮ್ಮ ಮದುವೆಗೆ ಸಂಬಂಧಿಸಿದಂತೆ ಪ್ರಸಿದ್ಧ ಜ್ಯೋತಿಷಿ ವೇಣುಸ್ವಾಮಿಗೆ ಜಾತಕ ತೋರಿಸಿದ್ದು, ಎಲ್ಲವೂ ಸರಿಯಾಗಿದೆ ಎಂದು ನಂಬಿಸಿ ಧರ್ಮೇಂದ್ರನನ್ನು ಬುಟ್ಟಿಗೆ ಹಾಕಿದ್ದಾರೆ ಎಂದು ಸಂತ್ರಸ್ತನ ತಂದೆ ಆರೋಪಿಸಿದ್ದಾರೆ. ಒಮ್ಮೆ ಮದುವೆ ರದ್ದಾದ ನಂತರ, ಧರ್ಮೇಂದ್ರನನ್ನು ಎರಡನೇ ಬಾರಿಗೆ ಮದುವೆಯಾಗುವುದಾಗಿ ಹೇಳಿ ಹಣವನ್ನು ಹಿಂತಿರುಗಿಸದೆ ವಂಚಿಸಲಾಗಿದೆ ಎಂಬ ಆರೋಪಗಳಿವೆ.

ಆಶುರೆಡ್ಡಿ ತನ್ನ ಗೆಳೆಯ ಜಯಂತ್ ಜೊತೆ ಈ ನಾಟಕ ಆಡಿ, ವಿವಿಧ ಕಾರಣಗಳನ್ನು ನೀಡಿ ತಮ್ಮ ಮಗನನ್ನು 'ಹನಿಟ್ರ್ಯಾಪ್' ಮಾಡಿದ್ದಾರೆ ಎಂದು ಸಂತ್ರಸ್ತನ ತಂದೆ ದೂರಿನ ಪ್ರತಿಯಲ್ಲಿ ವಿವರಿಸಿದ್ದಾರೆ. ಆಶುರೆಡ್ಡಿಯ ಸಹೋದರಿ ದಿವ್ಯಾ ರೆಡ್ಡಿ ಕೂಡ ಈ ಸಂಬಂಧದಲ್ಲಿ ಪಾಲುದಾರರಾಗಿದ್ದು, ಧರ್ಮೇಂದ್ರ ಕೂಡ ಆಕೆಗೆ 50 ಲಕ್ಷ ರೂ. ನೀಡಿದ್ದಾರೆ.

# ಇನ್ನೊಂದು ತಿಂಗಳಲ್ಲಿ ಬರ್ತಿವೆ ಈ 6 ಬಿಗ್ ಬಜೆಟ್ ಚಿತ್ರಗಳು



ಐಪಿಎಲ್ ಫೀವರ್ ಜೋರಾಗಿರುವ ಕಾರಣ ದೊಡ್ಡ ಸಿನಿಮಾಗಳನ್ನು ಬಿಡುಗಡೆ ಮಾಡಲು ಮೀನಾಮೇಷ ಎಣಿಸುವಂತಾಗಿದೆ. ಬಹಳ ಹಿಂದೆಯೇ ಬರಬೇಕಿದ್ದ ಸಿನಿಮಾಗಳ ರಿಲೀಸ್ ಡೇಟ್ ಪದೇ ಪದೆ ಮುಂದೂಡುವಂತಾಗಿದೆ. ಮೇ 31ಕ್ಕೆ ಐಪಿಎಲ್ ಸರಣಿಗೆ ತೆರೆ ಬೀಳಲಿದೆ. ಆದರೆ ಅದಕ್ಕೂ ಮುನ್ನ 6 ದೊಡ್ಡ ಬಜೆಟ್ ಚಿತ್ರಗಳು ಪ್ರೇಕ್ಷಕರ ಮುಂದೆ ಬರ್ತಿವೆ. ಹೌದು.. ಬಹಳ ರಿಸ್ಕ್ ತೆಗೆದುಕೊಂಡು ದೊಡ್ಡ ಸಿನಿಮಾಗಳನ್ನು ಐಪಿಎಲ್ ನಡುವೆ ತೆರೆಗೆ ತರುವ ಪ್ರಯತ್ನ ನಡೀತಿದೆ. ಮಾರ್ಚ್ 19ಕ್ಕೆ ಬರಬೇಕಿದ್ದ 'ಟಾಕ್ಸಿಕ್' ಜೂನ್ 4ಕ್ಕೆ ಬರುವಂತಾಗಿದೆ. ಸಂಕ್ರಾಂತಿಗೆ ಬಿಡುಗಡೆ ಆಗಬೇಕಿದ್ದ 'ಜನ ನಾಯಗನ್' ಇನ್ನು ಪ್ರೇಕ್ಷಕರ ಮುಂದೆ ಬಂದಿಲ್ಲ. ಈ ವಾರ ತೆರೆಗಪ್ಪಳಿಸಬೇಕಾದ 'ಪೆದ್ದಿ' ಜೂನ್ 25ಕ್ಕೆ ಬರುವಂತಾಗಿದೆ. ಹಾಗಿದ್ದರೆ ಇನ್ನೊಂದು ತಿಂಗಳಲ್ಲಿ ಬರುವ ಬಹುನಿರೀಕ್ಷಿತ ಚಿತ್ರಗಳು ಯಾವುವು ಮುಂದೆ ಓದಿ. 1. ಕೆಡಿ: ದಿ ಡೆವಿಲ್ ಪ್ರೇಮ್ ನಿರ್ದೇಶನದಲ್ಲಿ ಧ್ರುವ ಸರ್ಜಾ ನಟನೆಯ 'ಕೆಡಿ: ದಿ ಡೆವಿಲ್' ಸಿನಿಮಾ ಏಪ್ರಿಲ್ 30ಕ್ಕೆ ತೆರೆಗೆ ಬರ್ತಿದೆ. ಕೆವಿಎನ್ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಸಿನಿಮಾ ನಿರ್ಮಾಣವಾಗಿದೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ 5 ಭಾಷೆಗಳಲ್ಲಿ ಸಿನಿಮಾ ಬಿಡುಗಡೆ ಆಗ್ತಿದೆ. ಈಗಾಗಲೇ ಟ್ರೈಲರ್ ಸಾಂಗ್ಸ್ ಹಿಟ್ ಆಗಿ ಗಮನ ಸೆಳೆದಿದೆ. ಅಡ್ವಾನ್ಸ್ ಟಿಕೆಟ್ ಬುಕ್ಕಿಂಗ್ ಕೂಡ ಶುರುವಾಗಿದೆ. ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್ ಚಿತ್ರದ ತಾರಾಗಣದಲ್ಲಿದ್ದಾರೆ. 4 ವರ್ಷಗಳ ಹಿಂದೆ ಶುರುವಾಗಿದ್ದ 'ಕೆಡಿ' ಸಿನಿಮಾ ಅಂತೂ ಇಂತೂ ಈ ವಾರ ರಿಲೀಸ್ ಆಗ್ತಿದೆ. 70-80ರ ದಶಕದ ಬೆಂಗಳೂರು ಭೂಗತಲೋಕದ ಕಥೆಯನ್ನು ಪ್ರೇಮ್ ಕಟ್ಟಿಕೊಟ್ಟಿದ್ದಾರೆ. 2. ಕಾರ ವಿಘ್ನೇಶ್ ರಾಜ ನಿರ್ದೇಶನದಲ್ಲಿ ಧನುಷ್ ನಟನೆಯ 'ಕಾರ' ಚಿತ್ರಕ್ಕೂ ಈ ವಾರವೇ ಬಿಡುಗಡೆ ಭಾಗ್ಯ. ತಮಿಳು ಹಾಗೂ ತೆಲುಗಿನಲ್ಲಿ ಈ ಆಕ್ಷನ್ ಥ್ರಿಲ್ಲರ್ ಸಿನಿಮಾ ಬಿಡುಗಡೆ ಆಗ್ತಿದೆ. ಮಮಿತಾ ಬೈಜು, ಕೆ.ಎಸ್ ರವಿಕುಮಾರ್, ಜಯರಾಮ್, ಪೃಥ್ವಿರಾಜನ್ ಚಿತ್ರದಲ್ಲಿ ನಟಿಸಿದ್ದಾರೆ. ವೆಲ್ಸ್ ಫಿಲ್ಮ್ ಇಂಟರ್ನ್ಯಾಷನಲ್ ಥಿಂಕ್ ಸ್ಟುಡಿಯೋಸ್ ಸಂಸ್ಥೆ ನಿರ್ಮಾಣದ ಚಿತ್ರವನ್ನು ರೆಡ್ ಜೈಂಟ್ಸ್ ಮೂವೀಸ್ ಸಂಸ್ಥೆ ತೆರೆಗೆ ತರ್ತಿದೆ. 3. ಜನ ನಾಯಗನ್ ದಳಪತಿ ವಿಜಯ್ ನಟನೆಯ 'ಜನ ನಾಯಗನ್' ಸಿನಿಮಾ ನಾನಾ ಕಾರಣಗಳಿಂದ ಸುದ್ದಿ ಆಗ್ತಿದೆ. ಸುಗ್ಗಿ ಸಂಭ್ರಮದಲ್ಲೇ ತೆರೆಗೆ ಬರಬೇಕಿದ್ದ ಸಿನಿಮಾ 4 ತಿಂಗಳು ಕಳೆದರೂ ಬಿಡುಗಡೆ ಆಗಿಲ್ಲ. ಸೆನ್ಸಾರ್ ಸಮಸ್ಯೆ, ತಮಿಳುನಾಡು ಚುನಾವಣೆ ಇದಕ್ಕೆ ಪ್ರಮುಖ ಕಾರಣವಾಗಿತ್ತು.

# ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವಿರುದ್ಧ ಸೂಪರ್ ಓವರ್ ಸೋತ ಲಖನೌ



ಲಖನೌ: ಭಾನುವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್‌ನ ಎರಡನೇ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವಿರುದ್ಧ ಲಖನೌ ತಂಡವು ಸೂಪರ್ ಓವರ್‌ನಲ್ಲಿ ಸೋತ ಬಳಿಕ ತಂಡದ ನಾಯಕ ರಿಷಬ್ ಪಂತ್ ತಂಡಕ್ಕೆ ಖಂಡಿತವಾಗಿಯೂ ವಿಶ್ರಾಂತಿ ಬೇಕು ಎಂದಿದ್ದಾರೆ.


ಟೂರ್ನಿಯುದ್ದಕ್ಕೂ ನೀರಸ ಪ್ರದರ್ಶನ ತೋರುತ್ತಿರುವ ಲಖನೌ ತಂಡವು ಸತತ ಐದನೇ ಸೋಲು ಅನುಭವಿಸಿದೆ. ಆ ಮೂಲಕ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕೆ ಕುಸಿದಿದೆ. ಒಟ್ಟಾರೆ 8 ಪಂದ್ಯಗಳಲ್ಲಿ 2 ಗೆಲುವು ಹಾಗೂ 6 ಸೋಲುಗಳನ್ನು ತಂಡ ಅನುಭವಿಸಿದೆ.

ಕೆಕೆಆರ್ ವಿರುದ್ಧದ ಪಂದ್ಯ ಸೋತ ಬಳಿಕ ಮಾತನಾಡಿದ ರಿಷಬ್ ಪಂತ್, ನಾವು ಗೆಲುವಿನ ಹಳಿಗೆ ಮರಳಲು ಖಂಡಿತವಾಗಿಯೂ ನಮಗೆ ವಿರಾಮ ಬೇಕು. ಗೆಲುವಿನ ಒತ್ತಡ ಇದ್ದೇ ಇರುತ್ತೆ.

ಆದರೆ, ಒತ್ತಡದ ನಡುವೆಯೂ ನಾವು ಗೆಲುವಿಗಾಗಿ ಏನು ಮಾಡಬೇಕು ಎಂಬ ಉತ್ತರ ಹುಡುಕಿಕೊಳ್ಳಬೇಕು ಎಂದು ಪಂತ್ ಹೇಳಿದ್ದಾರೆ.ಒಂದು ಹಂತದಲ್ಲಿ ಕೆಕೆಆರ್ ತಂಡವು 93 ರನ್‌ಗಳಿಗೆ 7 ವಿಕೆಟ್ ಕಳೆದು ಕೊಂಡು ಸಂಕಷ್ಟದಲ್ಲಿತ್ತು. ಕೆಳ ಕ್ರಮಾಂಕದಲ್ಲಿ ರಿಂಕು ಸಿಂಗ್ (ಅಜೇಯ 83) ನಡೆಸಿದ ಅಬ್ಬರದ ಬ್ಯಾಟಿಂಗ್‌ನಿಂದಾಗಿ 155 ರನ್ ತಲುಪುಲು ಸಾಧ್ಯವಾಯಿತು. ಈ ಗುರಿ ಬೆನ್ನಟ್ಟಿದ ಲಖನೌ ತಂಡವು 1 ಎಸೆತಗಳಿಗೆ 7 ರನ್ ಅವಶ್ಯಕತೆ ಇದ್ದಾಗ ಮೊಹಮ್ಮದ್ ಶಮಿ ಬಾರಿಸಿದ ಸಿಕ್ಸರ್ ಪಂದ್ಯ ಟೈ ಆಗುವಂತೆ ಮಾಡಿತು.ಸೂಪರ್ ಓವರ್‌ನಲ್ಲಿ ಕೆಕೆಆರ್ ಬೌಲರ್ ಸುನಿಲ್ ನರೈನ್ ವಿರುದ್ಧ ಕೇವಲ 1 ರನ್‌ಗಳಿಸಲಷ್ಟೇ ಶಕ್ತವಾದ ಲಖನೌ ಸೋಲು ಅನುಭವಿಸಿತು. ಸೋಲಿನ ಹೊಣೆಯನ್ನು ಪ್ರತಿಯೊಬ್ಬ ಆಟಗಾರನೂ ತೆಗೆದುಕೊಳ್ಳಬೇಕು.

ಅದು ಯಾರೋ ಒಬ್ಬರು ಅಥವಾ ಇಬ್ಬರ ಮೇಲೆ ಹೊರಿಸುವುದಲ್ಲ, ಒಂದು ತಂಡವಾಗಿ ನಾವು ಆಡುವಲ್ಲಿ ವಿಫಲರಾಗಿದ್ದೇವೆ ಎಂದಿದ್ದಾರೆ. ಇನ್ನೂ ಸೂಪರ್ ಓವರ್‌ನಲ್ಲಿ ಉತ್ತಮ ಬ್ಯಾಟಿಂಗ್ ಮಾಡಲು ವಿಫಲವಾದ ನಿಕೋಲಸ್ ಪೂರನ್ ಕುರಿತು ಮಾತನಾಡಿದ ಪಂತ್, ನಾವು ಒಂದು ಗುಂಪಾಗಿ ಚರ್ಚಿಸಿ ಅವರನ್ನು ಬ್ಯಾಟಿಂಗ್‌ಗೆ ಕಳಿಸಿದೆವು. ಆದರೆ, ಅವರಿಂದ ದೊಡ್ಡ ಹೊಡೆತಗಳು ಬರಲಿಲ್ಲ. ಆದರೆ, ಇಂತಹ ಕಠಿಣ ಪರಿಸ್ಥಿಯಲ್ಲಿ ನಮ್ಮ ಆಟಗಾರನ ಮೇಲೆ ಭರವಸೆ ಇರಿಸಿಕೊಳ್ಳುವುದು ಮುಖ್ಯ ಎಂದಿದ್ದಾರೆ.


# ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಮ್ಯಾಚ್ ಆಗುವಾಗಲೇ 240 ಸಿಸಿಕ್ಯಾಮರಾ ಬಂದ್!



ಬೆಂಗಳೂರು: ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ನಡುವಿನ ಐಪಿಎಲ್ 2026 ರ ಪಂದ್ಯದ ವೇಳೆ ಭದ್ರತಾ ಲೋಪ ನಡೆದಿರುವುದು ಬೆಳಕಿಗೆ ಬಂದಿದೆ. ಭದ್ರತಾ ದೃಷ್ಟಿಯಿಂದ ಅಳವಡಿಸಲಾಗಿರುವ ಸುಮಾರು 240 ಸಿಸಿಟಿವಿ ಕ್ಯಾಮೆರಾ ಫೀಡ್‌ಗಳನ್ನು ನಿಷ್ಕ್ರಿಯಗೊಳಿಸಲಾಗಿದೆ ಎಂಬ ಆರೋಪ ಕೇಳಿ ಬಂದಿದ್ದು, ಲೀಗ್‌ನ ಅತ್ಯಂತ ಜನನಿಬಿಡ ಸ್ಥಳದ ಕಣ್ಗಾವಲಿನ ಬಗ್ಗೆ ಕಳವಳ ಹುಟ್ಟು ಹಾಕಿದೆ. ಅಡಚಣೆಯ ಹೊರತಾಗಿಯೂ, ಅಧಿಕಾರಿಗಳು ತ್ವರಿತವಾಗಿ ಪರ್ಯಾಯ ವ್ಯವಸ್ಥೆಗಳನ್ನು ಜಾರಿಗೆ ತಂದರು, ಯಾವುದೇ ಅಹಿತಕರ ಘಟನೆಗಳಿಲ್ಲದೆ ಪಂದ್ಯ ಮುಂದುವರಿಯುವಂತೆ ನೋಡಿಕೊಂಡರು. ಸಮಸ್ಯೆ ಪತ್ತೆಯಾದ ಕೂಡಲೇ ಬ್ಯಾಕಪ್ ಕ್ರಮಗಳ ಮೂಲಕ ರಿಯಲ್ ಟೈಮ್ ಮೇಲ್ವಿಚಾರಣೆಯನ್ನು ಮಾಡಲಾಗಿದೆ ಎಂದು ಅಧಿಕಾರಿಗಳು ದೃಢಪಡಿಸಿದರು. ಇದು ಆರ್‌ಸಿಬಿ ತಂಡವು ಬೆಂಗಳೂರಿನಲ್ಲಿ ಆಡಿದ ಕೊನೆಯ ಲೀಗ್ ಹಂತದ ಪಂದ್ಯವಾಗಿತ್ತು. ಉಳಿದ ಎರಡು ತವರು ಪಂದ್ಯಗಳನ್ನು ಆರ್‌ಸಿಬಿ ರಾಯ್ಪುರದಲ್ಲಿ ಆಡಲಿದೆ. 2025ರ ಐಪಿಎಲ್ ಬಳಿಕ ನಡೆದ ಘಟನೆಯಿಂದ ಭಾರೀ ಪ್ರಮಾಣದ ಭದ್ರತಾ ಕ್ರಮಗಳನ್ನು ಕೈಗೊಂಡು ಚಿನ್ನಸ್ವಾಮಿಯಲ್ಲಿ ಪಂದ್ಯಗಳನ್ನು ನಡೆಸಲು ಅನುಮತಿ ನೀಡಲಾಗಿತ್ತು. ಇದೀಗ ಈ ಘಟನೆಯು ಕ್ರೀಡಾಂಗಣದ ಭದ್ರತೆ ಮತ್ತು ಕಾರ್ಯಾಚರಣೆಯ ಪ್ರೋಟೋಕಾಲ್‌ಗಳನ್ನು ಪರಿಶೀಲನೆಗೆ ಒಳಪಡಿಸಿದೆ.

**ಆಗಿದ್ದೇನು?** ಪೊಲೀಸರ ಪ್ರಕಾರ, ಉಪಗುತ್ತಿಗೆದಾರರಾದ ಐವಿಎಸ್ ಡಿಜಿಟಲ್ ಸೊಲ್ಯೂಷನ್ಸ್‌ನ ಇಬ್ಬರು ಉದ್ಯೋಗಿಗಳಾದ ಮಂಜುನಾಥ್ ಇ ಮತ್ತು ಅಬ್ದುಲ್ ಕಲಾಂ ಕ್ರೀಡಾಂಗಣದ ಸಿಸಿಟಿವಿ ಸರ್ವರ್ ಕೋಣೆಗೆ ಅನಧಿಕೃತ ಪ್ರವೇಶ ಪಡೆದಿದ್ದರು, ಅವರು ನಿಷ್ಕ್ರಿಯಗೊಳಿಸಿದ ಪ್ರವೇಶ ಕಾರ್ಡ್ ಬಳಸಿದ್ದರು. ಭದ್ರತಾ ಪ್ರೋಟೋಕಾಲ್‌ಗಳನ್ನು ತಪ್ಪಿಸಿ ಮಾನ್ಯ ಪಾಸ್ ಇಲ್ಲದೆ ಪ್ರವೇಶಿಸಿದರು. ಒಳಗೆ ಹೋದ ನಂತರ, ಇಬ್ಬರೂ ಎನ್‌ವಿಆರ್ ಮತ್ತು ಫೈಬರ್ ಸಂಪರ್ಕಗಳನ್ನು ಕಡಿತಗೊಳಿಸಿದರು ಎಂದು ವರದಿಯಾಗಿದೆ, ಇದರಿಂದಾಗಿ ಕ್ರೀಡಾಂಗಣದ ಪ್ರಮುಖ ಪ್ರದೇಶಗಳಲ್ಲಿ ಸಿಸಿ ಕ್ಯಾಮರಾ ಕಣ್ಗಾವಲು ಅಡ್ಡಿಯಾಯಿತು. ಇವುಗಳಲ್ಲಿ ಪ್ರವೇಶ ದ್ವಾರಗಳು, ಕಾನ್ಕೋರ್ಸ್ ವಿಭಾಗಗಳು, ಡಿ ಕಾರ್ಪೊರೇಟ್ ಸ್ಟ್ಯಾಂಡ್ ಮತ್ತು ಕ್ರೀಡಾಂಗಣದ ಆವರಣದ ಸುತ್ತಲೂ ಇರಿಸಲಾದ ಹಲವಾರು ಕ್ಯಾಮೆರಾಗಳು ಸೇರಿವೆ. ಈ ಉಲ್ಲಂಘನೆಯು ಪಂದ್ಯದ ಸಮಯದಲ್ಲಿ ರಿಯಲ್ ಟೈಮ್ ಮೇಲ್ವಿಚಾರಣೆಯ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರಿತು, ನಿರ್ಣಾಯಕ ವಲಯಗಳನ್ನು ಕಣ್ಗಾವಲಿಲ್ಲದಂತೆ ಮಾಡಿತು. ಆದಾಗ್ಯೂ, ಸಮಸ್ಯೆ ಪತ್ತೆಯಾದ ತಕ್ಷಣ ಪರ್ಯಾಯ ವ್ಯವಸ್ಥೆಗಳನ್ನು ಜಾರಿಗೆ ತರಲಾಯಿತು, ಆಟದ ಸಮಯದಲ್ಲಿ ಭದ್ರತೆಗೆ ಧಕ್ಕೆಯಾಗದಂತೆ ನೋಡಿಕೊಳ್ಳಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಧೋನಿಯ 15 ವರ್ಷದ ದಾಖಲೆ ಮುರಿದ ಕೆಕೆಆರ್ ಬ್ಯಾಟರ್ ರಿಂಕು



ಲಕ್ನೋ: ಕೋಲ್ಕತ್ತಾ ನೈಟ್ ರೈಡರ್ಸ್ ( ) ತಂಡದ ಉಪ ನಾಯಕ ರಿಂಕು ಸಿಂಗ್ ( ) ಅವರು ರವಿವಾರದ ಪಂದ್ಯದಲ್ಲಿ ತಂಡಕ್ಕೆ ಆಪದ್ಭಾಂದವನಾಗಿ ಮೂಡಿಬಂದರು. ಕುಸಿತ ಕಂಡ ಬ್ಯಾಟಿಂಗ್ ಲೈನಪ್ ಮೇಲೆತ್ತಿದ ರಿಂಕು ಸಿಂಗ್, ಆಕರ್ಷಕ ಅರ್ಧ ಶತಕ ಬಾರಿಸಿದರು. ಬಳಿಕ ಫೀಲ್ಡಿಂಗ್ ನಲ್ಲಿ ನಾಲ್ಕು ಕ್ಯಾಚ್ ಪಡೆದ ರಿಂಕು, ಸೂಪರ್ ಓವರ್ ನಲ್ಲಿ ಮೊದಲ ಎಸೆತದಲ್ಲೇ ಬೌಂಡರಿ ಬಾರಿಸಿ ತಂಡಕ್ಕೆ ಎರಡನೇ ಗೆಲುವು ತಂದುಕೊಟ್ಟರು.

ಲಕ್ನೋದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 7 ವಿಕೆಟ್ ನಷ್ಟಕ್ಕೆ 155 ರನ್ ಮಾಡಿದರೆ, ಲಕ್ನೋ ಕೂಡಾ 155 ರನ್ ಗಳಿಸಿತು. ಆದರೆ ಸೂಪರ್ ಓವರ್ ನಲ್ಲಿ ಲಕ್ನೋ ತಂಡವು ಕೇವಲ ಒಂದು ರನ್ ಗೆ ಎರಡೂ ವಿಕೆಟ್ ಕಳೆದುಕೊಂಡಿತು.

ಕೆಕೆಆರ್ ತಂಡವು ಮೊದಲ ಎಸೆತದಲ್ಲೇ ಗೆಲುವು ಸಾಧಿಸಿತು. ಇದೇ ವೇಳೆ ರಿಂಕು ಸಿಂಗ್ ಅವರು ಎಂಎಸ್ ಧೋನಿ ಅವರ 15 ವರ್ಷಗಳ ಹಳೆಯ ದಾಖಲೆಯನ್ನು ಮುರಿದರು.

ರಿಂಕು 51 ಎಸೆತಗಳಲ್ಲಿ 7 ಬೌಂಡರಿ ಮತ್ತು 5 ಸಿಕ್ಸರ್‌ಗಳ ನೆರವಿನಿಂದ 83 ರನ್ ಗಳಿಸಿ ಅಜೇಯರಾಗಿ ಉಳಿದರು.

ಸುನಿಲ್ ನರೈನ್ ಅವರೊಂದಿಗೆ 62 ರನ್‌ಗಳ ಜೊತೆಯಾಟ ನಡೆಸಿ ಕೆಕೆಆರ್ ತಂಡದ ಸ್ಕೋರ್ ಅನ್ನು 150 ರನ್‌ಗಳ ಗಡಿ ದಾಟಿಸಿದರು. ರಿಂಕು ಅವರ 83 ರನ್‌ಗಳು ಐಪಿಎಲ್ ಪಂದ್ಯದಲ್ಲಿ 6ನೇ ಕ್ರಮಾಂಕದ ಬ್ಯಾಟ್ಸ್‌ಮನ್ ಗಳಿಸಿದ ಅತ್ಯಧಿಕ ಸ್ಕೋರ್ ಆಗಿದ್ದು, ಎಂಎಸ್ ಧೋನಿ ಅವರ ದಾಖಲೆಯನ್ನು ಮುರಿದರು.

2011 ರ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರ ಧೋನಿ 40 ಎಸೆತಗಳಲ್ಲಿ ಅಜೇಯ 70 ರನ್ ಗಳಿಸಿದ್ದರು. ದಿಗ್ವೇಶ್ ರಾಥಿ ಎಸೆದ 20ನೇ ಓವರ್ ನಲ್ಲಿ ರಿಂಕು ಸಿಂಗ್ ನಾಲ್ಕು ಸಿಕ್ಸರ್ ಬಾರಿಸುವ ಮೂಲಕ ಕೆಕೆಆರ್ ಮೊತ್ತವು 150 ದಾಟುವಂತೆ ಮಾಡಿದರು.

ಸುನಿಲ್ ನರೈನ್ ಜೊತೆಗೆ 8ನೇ ವಿಕೆಟ್ ಗೆ 30 ಎಸೆತಗಳಲ್ಲಿ 62 ರನ್ ಜೊತೆಯಾಟವಾಡಿದರು. ಅದರಲ್ಲಿ ನರೈನ್ ಕೊಡುಗೆ ಆರು ಎಸೆತಗಳಲ್ಲಿ ನಾಲ್ಕು ರನ್

# ಐಪಿಎಲ್‌ನಲ್ಲಿ 11ನೇ ಬಾರಿಗೆ ಈ ಸಾಧನೆ ಮಾಡಲು ವಿರಾಟ್ ಕೊಹ್ಲಿ ರೆಡಿ



ಐಪಿಎಲ್ 2026 ರಲ್ಲಿ ವಿರಾಟ್ ಕೊಹ್ಲಿ ಮತ್ತೊಂದು ಐತಿಹಾಸಿಕ ದಾಖಲೆ ನಿರ್ಮಿಸಲು ಸಜ್ಜಾಗಿದ್ದಾರೆ. ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ 72 ರನ್ ಗಳಿಸಿದರೆ, ಅವರು 11ನೇ ಬಾರಿಗೆ 400ಕ್ಕೂ ಅಧಿಕ ರನ್ ಗಳಿಸಿದ ಮೊದಲ ಆಟಗಾರರಾಗಲಿದ್ದಾರೆ. ಫಿಲ್ ಸಾಲ್ಟ್ ಅನುಪಸ್ಥಿತಿಯಲ್ಲಿ ಆರ್‌ಸಿಬಿಗೆ ಕೊಹ್ಲಿಯ ಉತ್ತಮ ಪ್ರದರ್ಶನ ಅನಿವಾರ್ಯ. ಆರೆಂಜ್ ಕ್ಯಾಪ್ ರೇಸ್‌ನಲ್ಲೂ ಅವರು ಮುಂಚೂಣಿಯಲ್ಲಿದ್ದಾರೆ.

ಐಪಿಎಲ್ 2026 ರ 39ನೇ ಪಂದ್ಯ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳ ನಡುವೆ ನಡೆಯಲಿದೆ. ಈ ಪಂದ್ಯದಲ್ಲಿ ಎಲ್ಲರ ಕಣ್ಣುಗಳು ಆರ್‌ಸಿಬಿಯ ಜೀವಾಳ ವಿರಾಟ್ ಕೊಹ್ಲಿ ಅವರ ಮೇಲಿರಲಿದೆ. ಏಕೆಂದರೆ ಫಿಲ್ ಸಾಲ್ಟ್ ಈ ಪಂದ್ಯಕ್ಕೆ ಲಭ್ಯರಿಲ್ಲ. ಹೀಗಾಗಿ ಅವರ ಅನುಪಸ್ಥಿತಿಯಲ್ಲಿ ವಿರಾಟ್ ಕೊಹ್ಲಿ ಜವಾಬ್ದಾರಿಯುತವಾಗಿ ಬ್ಯಾಟಿಂಗ್ ಮಾಡಬೇಕಿದೆ.

ಐಪಿಎಲ್ 2026 ರ 39ನೇ ಪಂದ್ಯ, ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳ ನಡುವೆ ನಡೆಯಲಿದೆ. ಈ ಪಂದ್ಯದಲ್ಲಿ ಎಲ್ಲರ ಕಣ್ಣುಗಳು ಆರ್‌ಸಿಬಿಯ ಜೀವಾಳ ವಿರಾಟ್ ಕೊಹ್ಲಿ ಅವರ ಮೇಲಿರಲಿದೆ. ಏಕೆಂದರೆ ಫಿಲ್ ಸಾಲ್ಟ್ ಈ ಪಂದ್ಯಕ್ಕೆ ಲಭ್ಯರಿಲ್ಲ. ಹೀಗಾಗಿ ಅವರ ಅನುಪಸ್ಥಿತಿಯಲ್ಲಿ ವಿರಾಟ್ ಕೊಹ್ಲಿ ಜವಾಬ್ದಾರಿಯುತವಾಗಿ ಬ್ಯಾಟಿಂಗ್ ಮಾಡಬೇಕಿದೆ.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಈ ಪಂದ್ಯದಲ್ಲಿ ವಿರಾಟ್ ಕೊಹ್ಲಿ ನಿರೀಕ್ಷಿತ ಪ್ರದರ್ಶನ ನೀಡಿ ದೊಡ್ಡ ಮೊತ್ತ ಕಲೆಹಾಕಿದ್ದಾರೆ. ಅವರ ಹೆಸರಿನಲ್ಲಿ ಮತ್ತೊಂದು ದಾಖಲೆ ದಾಖಲಾಗಲಿದೆ. ವಾಸ್ತವವಾಗಿ ವಿರಾಟ್ ಐಪಿಎಲ್ ಇತಿಹಾಸದಲ್ಲಿ 10 ಆವೃತ್ತಿಗಳಲ್ಲಿ ಈ ಸಾಧನೆ ಮಾಡಿದ್ದಾರೆ. ಇದೀಗ 11ನೇ ಬಾರಿಗೆ ಈ ಸಾಧನೆ ಮಾಡುವ ಸನಿಹದಲ್ಲಿ ಕೊಹ್ಲಿ ಇದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಈ ಪಂದ್ಯದಲ್ಲಿ ವಿರಾಟ್ ಕೊಹ್ಲಿ ನಿರೀಕ್ಷಿತ ಪ್ರದರ್ಶನ ನೀಡಿ ದೊಡ್ಡ ಮೊತ್ತ ಕಲೆಹಾಕಿದ್ದಾರೆ. ಅವರ ಹೆಸರಿನಲ್ಲಿ ಮತ್ತೊಂದು ದಾಖಲೆ ದಾಖಲಾಗಲಿದೆ. ವಾಸ್ತವವಾಗಿ ವಿರಾಟ್ ಐಪಿಎಲ್ ಇತಿಹಾಸದಲ್ಲಿ 10 ಆವೃತ್ತಿಗಳಲ್ಲಿ ಈ ಸಾಧನೆ ಮಾಡಿದ್ದಾರೆ. ಇದೀಗ 11ನೇ ಬಾರಿಗೆ ಈ ಸಾಧನೆ ಮಾಡುವ ಸನಿಹದಲ್ಲಿ ಕೊಹ್ಲಿ ಇದ್ದಾರೆ.

ವಾಸ್ತವವಾಗಿ ಐಪಿಎಲ್‌ನ ಬರೋಬ್ಬರಿ 10 ಸೀಸನ್‌ನಲ್ಲಿ ವಿರಾಟ್ ಕೊಹ್ಲಿ 400 ಕ್ಕೂ ಅಧಿಕ ರನ್‌ಗಳನ್ನು ಕಲೆಹಾಕಿದ ದಾಖಲೆ ಮಾಡಿದ್ದಾರೆ.

ಈ ಮೂಲಕ 10 ಆವೃತ್ತಿಗಳಲ್ಲಿ 400 ಕ್ಕೂ ಹೆಚ್ಚು ರನ್‌ಗಳನ್ನು ಕಲೆಹಾಕಿದ ಏಕೈಕ ಬ್ಯಾಟ್ಸ್‌ಮನ್ ಎಂಬ ದಾಖಲೆಯೂ ಕೊಹ್ಲಿ ಪಾಲಾಗಿದೆ. ಇದೀಗ 19ನೇ ಆವೃತ್ತಿಯಲ್ಲಿಯೂ ವಿರಾಟ್ ಕೊಹ್ಲಿ 400 ರನ್‌ಗಳ ಗಡಿ ದಾಟುವುದು ಖಚಿತವಾಗಿದೆ.

ವಾಸ್ತವವಾಗಿ ಐಪಿಎಲ್‌ನ ಬರೋಬ್ಬರಿ 10 ಸೀಸನ್‌ನಲ್ಲಿ ವಿರಾಟ್ ಕೊಹ್ಲಿ 400 ಕ್ಕೂ ಅಧಿಕ ರನ್‌ಗಳನ್ನು ಕಲೆಹಾಕಿದ ದಾಖಲೆ ಮಾಡಿದ್ದಾರೆ. ಈ ಮೂಲಕ 10 ಆವೃತ್ತಿಗಳಲ್ಲಿ 400 ಕ್ಕೂ ಹೆಚ್ಚು ರನ್‌ಗಳನ್ನು ಕಲೆಹಾಕಿದ ಏಕೈಕ ಬ್ಯಾಟ್ಸ್‌ಮನ್ ಎಂಬ ದಾಖಲೆಯೂ ಕೊಹ್ಲಿ ಪಾಲಾಗಿದೆ. ಇದೀಗ 19ನೇ ಆವೃತ್ತಿಯಲ್ಲಿಯೂ ವಿರಾಟ್ ಕೊಹ್ಲಿ 400 ರನ್‌ಗಳ ಗಡಿ ದಾಟುವುದು ಖಚಿತವಾಗಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966